ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಡಿಸೆಂಬರ್ 27, 2024

ಸಂಪುಟ : 51 ಸಂಚಿಕೆ : 224 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಆರ್ಥಿಕ ಸುಧಾರಣೆಯ ಹರಿಕಾರ ಮನಮೋಹನ್ ಸಿಂಗ್ ಇನ್ನಿಲ್ಲ



ನವದೆಹಲಿ, ಡಿ. 26- ಮಾಜಿ ಪ್ರಧಾನಿ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞ ಮನಮೋಹನ್ ಸಿಂಗ್ (92) ಅವರು ಇಂದು ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ನಿಧನರಾದರು.

ಆರೋಗ್ಯ ಹದಗೆಟ್ಟಿದ್ದ ಹಿನ್ನೆಲೆಯಲ್ಲಿ ಗುರುವಾರ ಸಂಜೆ ಸಿಂಗ್ ಅವರನ್ನು ತುರ್ತು ಚಿಕಿತ್ಸಾ ಘಟಕಕ್ಕೆ ಕರೆತರಲಾಗಿತ್ತು. ತೀವ್ರ ಉಸಿರಾಟದ ಸಮಸ್ಯೆಯಿಂದಾಗಿ ಕಾರಣ ಐಸಿಯುನಲ್ಲಿ ಚಿಕಿತ್ಸೆ ಮುಂದುವರಿದಿತ್ತು. ಆದರೆ, ರಾತ್ರಿ 9.50ರ ಹೊತ್ತಿಗೆ ಅವರು ಕೊನೆಯುಸಿರೆಳೆದಿದ್ದಾರೆ.

ಮನಮೋಹನ್ ಸಿಂಗ್ ಅವರು 1991-96ರ ಅವಧಿಯಲ್ಲಿ ಪಿವಿ ನರಸಿಂಹರಾವ್ ನೇತೃತ್ವದ ಸರ್ಕಾರದಲ್ಲಿ ದೇಶದ ಹಣಕಾಸು ಸಚಿವರಾಗಿ ಪ್ರಾಮುಖ್ಯತೆಯನ್ನು ಗಳಿಸಿದರು. ಆರ್ಥಿಕತೆಯನ್ನು ಪರಿವರ್ತಿಸುವ ವ್ಯಾಪಕ ಸುಧಾರಣೆಗಳನ್ನು ತಂದರು.

2004 ರಿಂದ 2014 ರವರೆಗೆ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಮನಮೋಹನ್ ಸಿಂಗ್ ಅವರು ಈ ವರ್ಷದ ಆರಂಭದಲ್ಲಿ ರಾಜ್ಯಸಭೆಯಿಂದ ನಿವೃತ್ತರಾಗಿದ್ದರು. ಸಿಂಗ್ ಅವರು ಮೇ 22, 2004 ರಂದು ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು ಮತ್ತು 2009ರಲ್ಲಿ ಅದೇ ದಿನಾಂಕದಂದು ಮತ್ತೊಮ್ಮೆ ಪ್ರಧಾನಿಯಾಗಿ 2ನೇ ಅವಧಿಗೆ

**ರಾಜ್ಯದಲ್ಲಿ ಏಳು ದಿನಗಳ ಶೋಕಾಚರಣೆ. ಶುಕ್ರವಾರ ಸರ್ಕಾರಿ ರಜೆ ಘೋಷಣೆ..**

ಪ್ರಮಾಣವಚನ ಸ್ವೀಕರಿಸಿದ್ದರು.

**ಸಿಂಗ್ ಅವರ ರಾಜಕೀಯ ಜೀವನ :** 1991ರಲ್ಲಿ ಅವರು ರಾಜ್ಯಸಭೆಗೆ ಪ್ರವೇಶಿಸಿದಾಗ ಪ್ರಾರಂಭವಾಯಿತು. ಕೇವಲ ನಾಲ್ಕು ತಿಂಗಳ ನಂತರ, ಅಂದಿನ ಪ್ರಧಾನಿ ಪಿವಿ ನರಸಿಂಹ ರಾವ್ ಸರ್ಕಾರದಲ್ಲಿ ಕೇಂದ್ರ ಹಣಕಾಸು ಸಚಿವರಾಗಿ ನೇಮಕಗೊಂಡರು, ಇದು ಭಾರತದ ಆರ್ಥಿಕತೆಯಲ್ಲಿ ಪರಿವರ್ತನೆಗೆ ಕಾರಣವಾಗಿತ್ತು.

1990 ರಲ್ಲಿ ಆರ್ಥಿಕ ಸುಧಾರಣೆಗಳು, ಉದಾರೀಕರಣ ನೀತಿಗಳನ್ನು ಜಾರಿಗೆ ತರುವ ಮೂಲಕ ಭಾರತದ ಅರ್ಥ (4ನೇ ಪುಟಕ್ಕೆ)

## ಒಂದು ವರ್ಷ ಬೃಹತ್ ಜನಾಂದೋಲನ

### ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯೂಸಿ)ಯು ನವ ಸತ್ಯಾಗ್ರಹ ಬೈಠಕ್‌ನಲ್ಲಿ ನಿರ್ಧಾರ



ಬೆಳಗಾವಿ, ಡಿ.26- ಮಹಾತ್ಮ ಗಾಂಧೀಜಿ ಅವರ ಮೌಲ್ಯಗಳ ಬಗ್ಗೆ ಹಾಗೂ ರಾಜಕೀಯದ ಬಗ್ಗೆ ಇಂದಿನ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದ್ದು, ಐದು ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದರು.

ಬೆಳಗಾವಿ ವೀರಸೌಧದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಸುಮಾರು 4 ಗಂಟೆಗೂ ಅಧಿಕ ಕಾಲ ವಿಸ್ತೃತ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ನಡೆಯಿತು.

ಬಳಿಕ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಕೆ.ಸಿ. ವೇಣುಗೋಪಾಲ್, ಎರಡು ಪ್ರಸ್ತಾವನೆಗಳ ಮೇಲೆ 50 ಜನ ನಾಲ್ಕು ಗಂಟೆ ಕಾಲ ಸುದೀರ್ಘವಾಗಿ ಮಾತನಾಡಿದರು. ಕಾಂಗ್ರೆಸ್ ಇತಿಹಾಸದಲ್ಲಿ ಇಂದಿನ ಸಭೆ ಶಾಶ್ವತವಾಗಿ ನೆನಪಿನಲ್ಲಿ ಉಳಿಯಲಿದೆ. ಇಡೀ ದೇಶದ ಕಾಂಗ್ರೆಸ್ ನಾಯಕರು ಹೆಮ್ಮೆಪಡುವ ಸಂದರ್ಭವಿದು. ಬೆಳಗಾವಿಯಲ್ಲಿ ಗಾಂಧೀಜಿ ಅಧ್ಯಕ್ಷರಾಗಿದ್ದ ಅಧಿವೇಶನಕ್ಕೆ ಶತಮಾನೋತ್ಸವ ಸಂಭ್ರಮವಿದೆ. ಅದೇ ಜಾಗದಲ್ಲಿ ಇವತ್ತು ಸಭೆ ನಡೆಸಲಾಗಿದೆ. ಮಹಾತ್ಮ ಗಾಂಧೀಜಿ ಅಂದು ಹೇಳಿದ ವಿಚಾರಗಳ ಬಗ್ಗೆ ಈಗಲೂ ಚರ್ಚೆ ಆಗುತ್ತಿದೆ. ಸಮಾನತೆ, ಭ್ರಾತೃತ್ವದ ಬಗ್ಗೆ ಚರ್ಚೆ ನಡೆಯಿತು ಎಂದರು.

ಒಂದು ವರ್ಷ ಬೃಹತ್ ಜನಾಂದೋಲನ ರೂಪಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ. 2025ರಲ್ಲಿ ಪಕ್ಷ ಸಂಘಟನೆ ಉತ್ತೇಜನ ಗೊಳಿಸುವ ನಿರ್ಣಯ ತೆಗೆದುಕೊಂಡಿದ್ದೇವೆ. ತಕ್ಷಣದಿಂದಲೇ ಈ ಕಾರ್ಯಕ್ರಮ ಶುರುವಾಗತ್ತದೆ. ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್ ಹೆಸರಿನಲ್ಲಿ ರಾ ಜ ಕೀ ಯ (4ನೇ ಪುಟಕ್ಕೆ)

### ಸಾಮೂಹಿಕವಾಗಿ ಪಕ್ಷ ಸಂಘಟನೆ ಮಾಡೋಣ: ಸೋನಿಯಾ ಕರೆ

ಬೆಳಗಾವಿ, ಡಿ.26- ಸಾಮೂಹಿಕವಾಗಿ ಪಕ್ಷ ಸಂಘಟನೆ ಮಾಡೋಣ ಎಂದು ಪಕ್ಷದ ನಾಯಕರಿಗೆ ಕಾಂಗ್ರೆಸ್ ಸಂಸದೀಯ ಮಂಡಳಿಯ ಅಧ್ಯಕ್ಷರೂ ಆಗಿರುವ ರಾಜ್ಯಸಭೆ ಸದಸ್ಯೆ ಸೋನಿಯಾ ಗಾಂಧಿ ಕರೆ ನೀಡಿದ್ದಾರೆ.

ಇಲ್ಲಿ ಗುರುವಾರ ನಡೆದ ಸಿಡಬ್ಲ್ಯುಸಿ ಸಭೆಯಲ್ಲಿ ಭಾಗವಹಿಸಲು ಸಾಧ್ಯ ಆಗದಿರುವುದಕ್ಕೆ ವಿಷಾದ ವ್ಯಕ್ತಪಡಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸಿಡಬ್ಲ್ಯುಸಿ ಸದಸ್ಯರಿಗೆ ಅವರು ಪತ್ರ ಬರೆದಿದ್ದಾರೆ.

ಐತಿಹಾಸಿಕ ಕಾರ್ಯಕ್ರಮದಲ್ಲಿ ನಿಮ್ಮೊಂದಿಗಿರಲು ಸಾಧ್ಯವಾಗುತ್ತಿಲ್ಲ. ಕಾರ್ಯಕ್ರಮಕ್ಕೆ ಗೈರಾಗಿರುವ ಕಾರಣಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. 39ನೇ ಅಧಿವೇಶನ ನಡೆದ ಸ್ಥಳದಲ್ಲೇ ನೀವೆಲ್ಲಾ ಸಮಾವೇಶಗೊಂಡಿರುವುದು ಸೂಕ್ತವಾಗಿದೆ. ಗಾಂಧೀಜಿ ಇದೇ ಸ್ಥಳದಲ್ಲಿ (4ನೇ ಪುಟಕ್ಕೆ)

### ಕಾಂಗ್ರೆಸ್ ಅಧಿವೇಶನದ ವೇಳೆ ತಪ್ಪು ನಕ್ಷೆಯ ವಿವಾದ

ಬೆಳಗಾವಿ, ಡಿ. 26- ಬೆಳಗಾವಿಯಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಅಧಿವೇಶನದ ಹಿನ್ನೆಲೆಯಲ್ಲಿ ಅಳವಡಿಸಲಾಗಿದ್ದ ಪೋಸ್ಟರ್‌ಗಳಲ್ಲಿ ಭಾರತದ ತಪ್ಪು ನಕ್ಷೆಯನ್ನು ಪ್ರಕಟಿಸಲಾಗಿದೆ. ಇದರಿಂದಾಗಿ ತೀವ್ರ ವಿವಾದ ಉಂಟಾಗಿದೆ.

1924ರಲ್ಲಿ ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸಮಾವೇಶ ನಡೆದಿತ್ತು. ಈ ಸಮಾವೇಶಕ್ಕೆ ನೂರು ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಕಾರ್ಯಕ್ರಮವನ್ನು ಆಯೋಜಿಸಿದೆ.

ಈ ಸಮಾರಂಭಕ್ಕಾಗಿ ಅಳವಡಿಸಲಾಗಿರುವ ಪೋಸ್ಟರ್‌ಗಳಲ್ಲಿ ಭಾರತದ ನಕ್ಷೆಯಲ್ಲಿ ಪಾಕ್ ಆಕ್ರಮಿತ ಭಾಗವಾದ ಗಿಲ್‌ಗಿಟ್ ವಲಯ ಹಾಗೂ ಚೀನಾ ಆಕ್ರಮಿತ ಅಕ್ಸಾಯ್ ಚಿನ್ ಪ್ರದೇಶಗಳನ್ನು ತೋರಿಸಿಲ್ಲ. ಇವೆರಡೂ ಭಾರತದ ಅವಿಭಾಜ್ಯ ಅಂಗಗಳಾಗಿವೆ ಎಂದು ಬಿಜೆಪಿ ಹಾಗೂ ಜೆಡಿಎಸ್‌ಗಳು ಹೇಳಿವೆ.

ಈ ವಿವಾದಕ್ಕೆ ಪ್ರತಿಕ್ರಿಯೆ ನೀಡಿರುವ ಉಪ ಮುಖ್ಯಮಂತ್ರಿ ಹಾಗೂ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಯಾವುದೇ ತಪ್ಪಾಗಿದ್ದಲ್ಲಿ ಪೋಸ್ಟರ್‌ಗಳನ್ನು ತೆರವುಗೊಳಿಸಲಾಗುವುದು ಎಂದಿದ್ದಾರೆ. ಕೆಲ ಮುಖಂಡರು ಕೆಲ ತಪ್ಪುಗಳನ್ನು ಮಾಡಿದ್ದಾರೆ, ನಾವು ಎಲ್ಲವನ್ನೂ (4ನೇ ಪುಟಕ್ಕೆ)



## ಪೋಷಕರು-ಮಕ್ಕಳ ನಿತ್ಯ ಸಂವಹನ ಅತ್ಯಗತ್ಯ

### ಸಿದ್ಧಗಂಗಾ ಸಂಸ್ಥೆಯ 55ನೇ ವಾರ್ಷಿಕ ಸಂಭ್ರಮದಲ್ಲಿ ಡಾ.ವಿರೂಪಾಕ್ಷ ದೇವರಮನೆ

ದಾವಣಗೆರೆ, ಡಿ. 26- ಮಕ್ಕಳ ಸುರಕ್ಷತೆ ಹಾಗೂ ಉತ್ತಮ ಭವಿಷ್ಯಕ್ಕಾಗಿ ಪೋಷಕರು ತಮ್ಮ ಮಕ್ಕಳೊಂದಿಗೆ ನಿತ್ಯ ಸಂವಹನದಲ್ಲಿರುವ ಅಗತ್ಯವಿದೆ ಎಂದು ವೈದ್ಯ ಸಾಹಿತಿ ಉಡುಪಿಯ ಡಾ.ವಿರೂಪಾಕ್ಷ ದೇವರಮನೆ ಪ್ರತಿಪಾದಿಸಿದರು.

ಗುರುವಾರ ಸಂಜೆ ಇಲ್ಲಿನ ಸಿದ್ಧಗಂಗಾ ಸಂಸ್ಥೆಯ 55ನೇ ವಾರ್ಷಿಕ ಸಂಭ್ರಮ-2024-25, ಶಿಕ್ಷಣ ಶಿಲ್ಪಿ ಡಾ.ಎಂಎಸ್‌ಎಸ್. ಪ್ರಶಸ್ತಿ ಪ್ರದಾನ, ಎಂಎಸ್‌ಎಸ್ ಕ್ವಿಜ್ ಬಹುಮಾನ ವಿತರಣೆ, ಪ್ರತಿಭಾ ಪುರಸ್ಕಾರ, ಸಾಂಸ್ಕೃತಿಕ ಸಂಭ್ರಮದ 2ನೇ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಪೋಷಕರು ಹಾಗೂ ಮಕ್ಕಳೊಂದಿಗೆ ಅಂತರ ಹೆಚ್ಚಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ಪೋಷಕರು ಹಾಗೂ ಮಕ್ಕಳ ನಿತ್ಯ ಸಂಹನದಿಂದ ಮಕ್ಕಳು ದುಷ್ಚಟಗಳಿಗೆ ಬಲಿಯಾಗುವುದನ್ನು, ಪ್ರೀತಿ-ಪ್ರೇಮದತ್ತ ಹೊರಳುವುದನ್ನು ತಡೆಯಬಹುದು ಎಂದರು.

ತಂದೆ, ತಾಯಿ ಹಾಗೂ ಶಿಕ್ಷಕನಿಂದ ಭ್ರಷ್ಟಾಚಾರ ಮುಕ್ತ ಹಾಗೂ ಸದೃಢ ಸಮಾಜ ನಿರ್ಮಾಣ ಸಾಧ್ಯವಿದೆ. ಇವರೆಲ್ಲರೂ ಒಟ್ಟಾಗಿ ಮಕ್ಕಳಿಗೆ ಉತ್ತಮ ಭವಿಷ್ಯ ನೀಡಿದರೆ ದೇಶದ ಭವಿಷ್ಯವೂ ಉತ್ತಮವಾಗಿರುತ್ತದೆ ಎಂದು ಹೇಳಿದರು.

> ವಿದ್ಯಾರ್ಥಿಗಳು ಚೈತನ್ಯ ಭರಿತ ವರ್ಷಗಳನ್ನು ನಿರ್ಲಕ್ಷ್ಯ ಮಾಡಿದರೆ ಶಾಲೆಯಿಂದ ಬರಿಗೈಯಲ್ಲಿ ತೆರಳಬೇಕಾಗುತ್ತದೆ. ಇರುವಷ್ಟು ದಿನ ಮುಂದಿನ ಭವಿಷ್ಯಕ್ಕೆ ಬೇಕಾದ ಎಲ್ಲಾ ಜ್ಞಾನವನ್ನೂ ಗಳಿಸಿಕೊಂಡು ಹೋದಾಗ ಶಾಲೆಯ ಹಾಗೂ ಹೊರಗಿನ ಸಮಾಜವೂ ಸ್ವರ್ಗವಾಗುತ್ತದೆ.
>
> - ಡಾ.ವಿರೂಪಾಕ್ಷ ದೇವರಮನೆ, ವೈದ್ಯ ಸಾಹಿತಿ

ಮಕ್ಕಳು, ಹೆತ್ತವರು ಹೇಳುವುದನ್ನು ಕೇಳುವುದಕ್ಕಿಂದ ಅನುಕರಣೆ ಮಾಡುವುದೇ ಹೆಚ್ಚು. ಈ ಹಿನ್ನೆಲೆಯಲ್ಲಿ ಪೋಷಕರು ಎಚ್ಚರಿಕೆಯಿಂದ ವರ್ತಿಸಬೇಕು. ತಮ್ಮ ಎಲ್ಲಾ ಒಳ್ಳೆಯ ಗುಣಗಳನ್ನು ಮಕ್ಕಳಿಗೆ ಧಾರೆ ಎರೆಯಬೇಕು. ಋಣಾತ್ಮಕ ವಿಚಾರಗಳು ಮಕ್ಕಳಿಗೆ ಹೋಗದಂತೆ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.


ಅಮ್ಮನಿಂದ ಸ್ವಂತಿಕೆ, ಸಂಪ್ರದಾಯ, ಚಾರಿತ್ರ್ಯ, ಮೌಲ್ಯಗಳನ್ನು ಕಲಿತರೆ, ಅಪ್ಪ ಮನೆಗೆ ಸುರಕ್ಷಾ ಕವಚವಿದ್ದಂತೆ. ಅಷ್ಟೇ ಅಲ್ಲದೆ, ಮಕ್ಕಳಿಗೆ ಅಪ್ಪ, ಅಮ್ಮನಷ್ಟೇ ಮುಖ್ಯವಾಗಿ ಕುಟುಂಬದ ಸದಸ್ಯರೂ ಬೇಕಾಗುತ್ತದೆ. ಹಿರಿಯರು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳಿಂದ ಇತರೆ ಕುಟುಂಬದ ಸದಸ್ಯರನ್ನು ದೂರವಿಟ್ಟರೆ, ಅವರ ಪ್ರೀತಿಯಿಂದ ಮಕ್ಕಳು ವಂಚಿತರಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಭಿನ್ನಾಭಿಪ್ರಾಯ ಬದಿಗಿಟ್ಟು ಮಕ್ಕಳಿಗಾಗಿ ಒಂದಾಗಬೇಕು ಎಂದರು.

ದೇಶಕ್ಕೆ ದೊಡ್ಡ ಕೊಡುಗೆ ಸಿಕ್ಕಿರುವುದು ಪಾಲಕರಿಂದಲೇ. ಪ್ರತಿ ಯಶಸ್ವಿ ವ್ಯಕ್ತಿಯ ಹಿಂದೆ ಪೋಷಕರ ಶ್ರಮವಿರುತ್ತದೆ. ಭಗತ್ ಸಿಂಗ್, ಸ್ವಾಮಿ ವಿವೇಕಾನಂದ, ಅಬ್ದುಲ್ ಕಲಾಂ, ತೇನ್‌ಸಿಂಗ್ ಮೊದಲಾದವರು ಯಶಸ್ವಿ ನಾಯಕರಾಗಲು ಅವರ ತಾಯಿಯ ಪ್ರೇರಣೆ, ಪ್ರೋತ್ಸಾಹ ಅನನ್ಯವಾಗಿರುತ್ತದೆ ಎಂದರು.

ಹದಿಹರೆಯದ ವಿದ್ಯಾರ್ಥಿಗಳಿಗೆ 'ಐಡೆಂಟಿಟಿ ಕ್ರಿಸಿಸ್' ಹೆಚ್ಚಾಗಿರುತ್ತದೆ. ಅದನ್ನು ಧನಾತ್ಮಕವಾಗಿ ಬಳಸಿಕೊಳ್ಳಬೇಕು. ಋಣಾತ್ಮಕವಾಗಿ ಬಳಸಿಕೊಂಡರೆ ಹಾದಿ ತಪ್ಪುವ, ಅನೈತಿಕ ಮಾರ್ಗ ಅನುಸರಿಸುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಕೀಳರಿಮೆ, ಆತಂಕ, ಹಿಂಜರಿಕೆ, ಆತ್ಮವಿಸ್ವಾಸದ ಕೊರತೆ, ಭಯ ಹೆಚ್ಚಾದರೆ ಮನೋವೈದ್ಯರನ್ನು (2ನೇ ಪುಟಕ್ಕೆ)

## ಕಚೇರಿಗಳಲ್ಲಿ ಲಂಚದ ಪಟ್ಟಿಯನ್ನಾದರೂ ಪ್ರಕಟಿಸಿ

### ಆಕ್ರೋಶಗೊಂಡ ಕಂದಾಯ ಸಚಿವ ಕೃಷ್ಣಬೈರೇಗೌಡರಿಂದ ಅಧಿಕಾರಿಗಳಿಗೆ ತರಾಟೆ



ಬೆಂಗಳೂರು, ಡಿ. 26- ಗ್ರಾಮೀಣ ಜನರು ಕೆಲಸಗಳಿಗಾಗಿ ಕಚೇರಿಗಳಿಗೆ ದಿನನಿತ್ಯ ಅಲೆಯುವುದನ್ನು ತಪ್ಪಿಸಲು ಯಾರ್ಯಾರಿಗೆ ಎಷ್ಟು ಲಂಚ ಎಂಬ ಪಟ್ಟಿ ಪ್ರಕಟಿಸಿ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಮ್ಮ ಇಲಾಖೆಯಡಿ ಬರುವ ಕಚೇರಿಗಳಲ್ಲಿನ ವ್ಯವಸ್ಥೆ ಮತ್ತು ಖಾಲಿ ಕುರ್ಚಿಗಳನ್ನ ನೋಡಿ ಆಡಳಿತವೇಕುಸಿದಿದೆಯಲ್ಲಾ,ಏನುಮಾಡಬೇಕೋ ಎಂದು ಹಣೆ ಹಣೆ ಚಚ್ಚಿಕೊಂಡ ಘಟನೆ ನಡೆದಿದೆ.

ಮಂತ್ರಿಗಳಿಗೆ ಹಣ ಕೊಡಬೇಕು ಎನ್ನುತ್ತೀರಲ್ಲಾ, ಅವರಿಗೆ ಎಷ್ಟು ಕೊಡಬೇಕು ಎಂಬುದನ್ನು ಪಟ್ಟಿಯ ಮೇಲ್ಭಾಗದಲ್ಲೇ ಪ್ರಕಟಿಸಿ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಎಲ್ಲೋ ನಿಂತು, ಮೂರನೇ ವ್ಯಕ್ತಿ ಮೂಲಕ ಚೌಕಾಸಿ ಮಾಡಿಸುವ ಬದಲು, ಅಧಿಕೃತವಾಗಿ ನೀವೇ ಪಟ್ಟಿ ಹಾಕಿ ಜನರಿಂದ ವಸೂಲಿ ಮಾಡಿ ಕೆಲಸ ಮಾಡಿಕೊಡಿ ಎಂದರು.

ಸಣ್ಣ ಪುಟ್ಟ ಕೆಲಸಕ್ಕೂ ಹತ್ತಾರು ಬಾರಿ ಅಲೆಸಿ, ಕೊನೆಗೆ ಮಧ್ಯವರ್ತಿಗೆ ಹಣ ನೀಡಿದ ನಂತರ ಅರ್ಜಿಗೆ ಸೀಲು ಬೀಳುತ್ತದೆ, ಇಂತಹ ವ್ಯವಸ್ಥೆ ಏಕೆ, ಹೋಟೆಲ್‌ಗಳಲ್ಲಿ ತಿಂಡಿ ಬೆಲೆ ನಿಗದಿ ಮಾಡಿದಂತೆ, ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಎಂಬುದನ್ನು ಪ್ರಕಟಿಸಿ ಎಂದಿದ್ದಾರೆ.

ದಿಢೀರನೆ ಇಂದು ದೊಡ್ಡಬಳ್ಳಾಪುರ ತಹಸೀಲ್ದಾರ್ ಹಾಗೂ ಉಪನೋಂದಣಾಧಿಕಾರಿ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿದ ಸಚಿವರಿಗೆ, ಖಾಲಿ ಕುರ್ಚಿಗಳು ಕಂಡುಬಂದರೆ, ಮತ್ತೆ ಕೆಲವು ಅಧಿಕಾರಿಗಳ ಕಚೇರಿ ಬಾಗಿಲುಗಳೇ ತೆರೆದಿರಲಿಲ್ಲ.

ಸರ್ಕಾರ ಕೆಲಸದ (4ನೇ ಪುಟಕ್ಕೆ)

## ರೈತರ ಅನುಕೂಲಕ್ಕೆ ನೂತನ ಪಿಎಲ್‌ಡಿ ಬ್ಯಾಂಕ್ ಕಟ್ಟಡ

ದಾವಣಗೆರೆ, ಡಿ. 26 - ರೈತರ ಅನುಕೂಲಕ್ಕಾಗಿ ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನೂತನ ಕಟ್ಟಡದ ಅಗತ್ಯವಿದೆ ಎಂದು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರು ಪ್ರತಿಪಾದಿಸಿದರು.

ಅವರು ನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸರ್ಕ್ಯೂಟ್ ಹೌಸ್ ಪಕ್ಕದಲ್ಲಿ ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನೂತನ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಲಾಯರ್ ರಸ್ತೆಯಲ್ಲಿರುವ ಪಿಎಲ್‌ಡಿ ಬ್ಯಾಂಕ್ ಮುಂದೆ ವಾಹನಗಳನ್ನು ನಿಲ್ಲಿಸಲು ತೊಂದರೆಯಾಗುತ್ತಿದ್ದು, ರೈತರ ಹಿತದೃಷ್ಟಿಯಿಂದ ಬ್ಯಾಂಕ್ ಹೊಸ ಕಟ್ಟಡ ನಿರ್ಮಾಣವಾಗುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ವರ್ಷದಿಂದ ವರ್ಷಕ್ಕೆ ಬ್ಯಾಂಕ್ ಪ್ರಗತಿಯಿಂದ ಮುನ್ನಡೆಯುತ್ತಿದೆ ಎಂದು ಮೆಚ್ಚುಗೆ ಸೂಚಿಸಿದ ಅವರು, ಬ್ಯಾಂಕ್ ನೂತನ ಕಟ್ಟಡದ ನಿರ್ಮಾಣಕ್ಕೆ ಪಕ್ಷಬೇಧ ಮರೆತು ಎಲ್ಲಾ ಜನಪ್ರತಿನಿಧಿಗಳು ಸಹಾಯ - ಸಹಕಾರ ನೀಡಬೇಕೆಂದು ಆಶಿಸಿದರು.

ಬ್ಯಾಂಕಿನ ಆಡಳಿತ (4ನೇ ಪುಟಕ್ಕೆ)



## ನಾಲ್ಕು ಪೀಠಗಳನ್ನು ಮಾಡುವ ಸಂಕಲ್ಪ

**ನಗರದ ಗಂಗಾಮತಸ್ಥರ ಸಮಾಜ ಬಾಂಧವರ ಸಭೆಯಲ್ಲಿ ಶ್ರೀ ನಿಜ ಶರಣ ಅಂಬಿಗರ ಚೌಡಯ್ಯ ಗುರುಪೀಠದ ಪೀಠಾಧಿಪತಿ ಶ್ರೀ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ**

ದಾವಣಗೆರೆ, ಡಿ. 26 - 'ಗಂಗಾಮತಸ್ಥರು ಪ್ರತಿ ಮನೆ ಮನೆಯಲ್ಲೂ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಆಚರಿಸಬೇಕು' ಎಂದು ಸುಕ್ಷೇತ್ರ ನರಸೀಪುರದ ಶ್ರೀ ನಿಜ ಶರಣ ಅಂಬಿಗರ ಚೌಡಯ್ಯ ಗುರುಪೀಠದ ಪೀಠಾಧಿಪತಿ ಶ್ರೀ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಕರೆ ನೀಡಿದರು.

ಬುಧವಾರ ನಗರದ ಗಂಗಾಮತಸ್ಥರ ಸಮಾಜದ ಕಟ್ಟಡದಲ್ಲಿ ಹಮ್ಮಿಕೊಂಡಿದ್ದ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಸುಕ್ಷೇತ್ರ ನರಸೀಪುರದಲ್ಲಿ 2025ರ ಜನವರಿ 14 ಮತ್ತು 15 ರಂದು ನಡೆಯಲಿರುವ ಶ್ರೀ ನಿಜ ಶರಣ ಅಂಬಿಗರ ಚೌಡಯ್ಯನವರ ಜಾತ್ರಾ ಮಹೋತ್ಸವ, 7ನೇ ಅಂಬಿಗರ ಶರಣ ಸಂಸ್ಕೃತಿ ಉತ್ಸವ 2025, ವಚನ ಗ್ರಂಥ ಮಹಾ ರಥೋತ್ಸವದ ಪ್ರಚಾರ ಸಭೆಯಲ್ಲಿ ಪೋಸ್ಟರ್ ಬಿಡುಗಡೆಗೊಳಿಸಿ ಆಶೀರ್ವಚನ ನೀಡಿದರು.

ಅಂಬಿಗರ ಚೌಡಯ್ಯನವರ ವಿಚಾರ, ವಚನಗಳಿಂದ ಗಂಗಾಮತಸ್ಥ ಸಮಾಜದವರು ರಾಜ್ಯದಲ್ಲಿ ಒಗ್ಗಟ್ಟಾಗುವ ಶಕ್ತಿ ಬಂದಿದ್ದು, ಸರ್ಕಾರ ಕೂಡ ಅಂಬಿಗರ ಚೌಡಯ್ಯನವರ ಜಯಂತಿ ಆಚರಣೆ ಮಾಡುತ್ತಿದೆ. ಅದೇ ರೀತಿ ಗಂಗಾಮತಸ್ಥ ಸಮಾಜದವರು ಪ್ರತಿ ಮನೆ ಮನೆಯಲ್ಲೂ ಅಂಬಿಗರ ಚೌಡಯ್ಯನವರ ಭಾವ ಚಿತ್ರವನ್ನಿಟ್ಟು ಪೂಜೆ ಮಾಡಿ ಅಂಬಿಗರ ಚೌಡಯ್ಯನವರ ಜಯಂತಿ ಆಚರಿಸುವ ಮೂಲಕ ಎಲ್ಲಾ ಜನಾಂಗದವರಿಗೂ ಕರೆದು ಪ್ರಚಾರ ಮಾಡಬೇಕು ಎಂದರು.

ಹಲವು ದೈವಗಳನ್ನು ಪೂಜಿಸುತ್ತ ಹೋದರು ನಮಗೆ ನ್ಯಾಯ ಸಿಗಲಿಲ್ಲ, ಕಷ್ಟ ಕಳೆಯಲಿಲ್ಲ. ಆದ್ದರಿಂದ ಸಮಾಜ ಬಾಂಧವರು ಅಂಬಿಗರ ಚೌಡಯ್ಯನವರನ್ನು, ಗಂಗಾಮಾತೆಯನ್ನು ಭಾವನಾತ್ಮಕವಾಗಿ ಆರಾಧನೆ ಮಾಡಬೇಕು. ಗಂಗಾಮತಸ್ಥರಿಗೆ ಅಂಬಿಗರ ಚೌಡಯ್ಯ, ಗಂಗಾಮಾತೆಯೇ ಮನೆ ದೇವರಾಗಿದ್ದು ಜಗಲಿ ಮೇಲೆ ಮನೆ ದೇವರ ರೀತಿ ಭಾವ ಚಿತ್ರಗಳ ಇಟ್ಟು ಪೂಜಿಸಬೇಕು ಎಂದರು.

ಪೀಠದಲ್ಲಿ ದಿನ ನಿತ್ಯ ಅನ್ನ ದಾಸೋಹ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಧರ್ಮಸ್ಥಳ, (4ನೇ ಪುಟಕ್ಕೆ)

## ಭಾರತದ ಗಡಿ ಬಳಿ ವಿಶ್ವದಲ್ಲೇ ದೊಡ್ಡ ಅಣೆಕಟ್ಟೆ: ಚೀನಾ ಅಸ್ತು

ಬೀಜಿಂಗ್, ಡಿ. ೨6- ಭಾರತದ ಗಡಿ ಸಮೀಪ ಟಿಬೆಟ್‌ನಲ್ಲಿ ಬ್ರಹ್ಮಪುತ್ರ ನದಿಗೆ ಅಡ್ಡವಾಗಿ 137 ಶತಕೋಟಿ ಡಾಲರ್ ವೆಚ್ಚದಲ್ಲಿ ಬೃಹತ್ ಅಣೆಕಟ್ಟು ನಿರ್ಮಿಸಲು ಚೀನಾ ಒಪ್ಪಿಗೆ ನೀಡಿದೆ. ಇದು ವಿಶ್ವದಲ್ಲೇ ಅತಿ ದೊಡ್ಡ ಅಣೆಕಟ್ಟೆ ಎನ್ನಲಾಗುತ್ತಿದೆ. ಇದು ಬ್ರಹ್ಮಪುತ್ರ ನದಿಯ ಪಾತ್ರದ ದೇಶಗಳಾದ ಭಾರತ ಮತ್ತು ಬಾಂಗ್ಲಾ ದೇಶಗಳ ಕಳವಳಕ್ಕೆ ಕಾರಣವಾಗಲಿದೆ.

ಬ್ರಹ್ಮಪುತ್ರ ನದಿಗೆ ಟಿಬೆಟ್‌ನಲ್ಲಿ ಯಾರ್ಲುಂಗ್ ಜಾಂಗ್‌ಬೋ ಎನ್ನಲಾಗುತ್ತದೆ. ಈ ನದಿಗೆ ಅಣೆಕಟ್ಟು ನಿರ್ಮಿಸುವ ಯೋಜನೆಗೆ ಚೀನಾ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಸರ್ಕಾರಿ ಸ್ವಾಮ್ಯದ ಜಿನುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಬ್ರಹ್ಮಪುತ್ರ ನದಿಯು ತಿರುವು ಪಡೆದುಕೊಂಡು ಅರುಣಾಚಲ ಪ್ರದೇಶದ ಮೂಲಕ ಭಾರತಕ್ಕೆ ಬರುತ್ತದೆ. ನಂತರ ಬಾಂಗ್ಲಾ ದೇಶ ಪ್ರವೇಶಿಸುತ್ತದೆ. ನದಿ ತಿರುವು ಪಡೆದುಕೊಳ್ಳುವ ಜಾಗದಲ್ಲಿ ಬೃಹತ್ ಅಣೆಕಟ್ಟು ನಿರ್ಮಿಸಲು ಯೋಜಿಸಲಾಗಿದೆ.

ಈ ಯೋಜನೆಗೆ 137 ಶತಕೋಟಿ ಡಾಲರ್ ವೆಚ್ಚವಾಗಲಿದೆ ಎಂದು ಹೇಳಲಾಗುತ್ತಿದೆ. ಇದು ವಿಶ್ವದ ಅತಿ ಹೆಚ್ಚು ವೆಚ್ಚದ ಮೂಲಭೂತ ಸೌಲಭ್ಯವಾಗಲಿದೆ ಎಂದು ಹೇಳಲಾಗುತ್ತಿದೆ. ಚೀನಾದ ತ್ರಿ ಗಾರ್ಜಸ್ ಡ್ಯಾಂ ವಿಶ್ವದಲ್ಲೇ ಅತಿ ದೊಡ್ಡ ಅಣೆಕಟ್ಟೆ ಎಂದು ಪರಿಗಣಿಸಲಾಗುತ್ತಿದೆ. ಬ್ರಹ್ಮಪುತ್ರ ನದಿಗೆ ನಿರ್ಮಿಸಲು ಉದ್ದೇಶಿಸಿರುವ ಅಣೆಕಟ್ಟೆಯು ಇದಕ್ಕಿಂತ (2ನೇ ಪುಟಕ್ಕೆ)


REQUIRED

* Sales Man -10 (10th fail/Pass)
* Programming & Website Management
* BCA - 06 * MCA - 04

Contact :

Optical Paradise

MMK Complex, AVK College Road,Davangere-2.

Contact : 88614 29090

# ವಿಕಲಚೇತನರ ತಾತ್ಸಾರಕ್ಕೆ ಕ್ಷಮೆಯಿಲ್ಲ

## ಜಗಳೂರು: ತ್ರಿಚಕ್ರ ವಾಹನಗಳನ್ನು ವಿತರಿಸಿದ ಶಾಸಕ ದೇವೇಂದ್ರಪ್ಪ



ಜಗಳೂರು, ಡಿ. 26 - ಸಾಕ್ಷಾತ್ ದೈವಸ್ವರೂಪವಾಗಿರುವ ವಿಕಲಚೇತನರ ಬಗ್ಗೆ ತಾತ್ಸಾರ ಮಾಡಿದರೆ ಕ್ಷಮೆ ಇರದು. ಪ್ರತಿಯೊಬ್ಬರೂ ಅವರನ್ನು ಗೌರವಿಸಬೇಕು ಎಂದು ಶಾಸಕ ಬಿ.ದೇವೇಂದ್ರಪ್ಪ ಸಲಹೆ ನೀಡಿದರು.

ಸೋಮವಾರ ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ವಿಕಲಚೇತನರ ಹಾಗೂ ನಾಗರೀಕರ ಸಬಲೀಕರಣ ಇಲಾಖೆ ಹಾಗೂ ತಾಲೂಕು ಪಂಚಾಯಿತಿ ವತಿಯಿಂದ ಹಮ್ಮಿಕೊಂಡಿದ್ದ ವಿಕಲಚೇತನರಿಗೆ ಯಂತ್ರಚಾಲಿತ ತ್ರಿಚಕ್ರವಾಹನಗಳ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ 2ಸಾವಿರಕ್ಕೂ ಅಧಿಕ ವಿಕಲಚೇತನರಿದ್ದು.ಸ್ವಾಭಿಮಾನದಿಂದ ಸ್ವಾವಲಂಬಿ ಬದುಕು ಕಟ್ಟಿಕೊಂಡಿರುವುದು ಶ್ಲಾಘನೀಯ. ಪ್ರಸಕ್ತ ಸಾಲಿನಲ್ಲಿ 27 ತ್ರಿಚಕ್ರವಾಹನ ವಿತರಿಸುತ್ತಿದ್ದು, ಫಲಾನುಭವಿಗಳು ಸದುಪಯೋಗ ಪಡೆದುಕೊಳ್ಳಬೇಕು. ಇಲಾಖೆಯ ಅಧಿಕಾರಿ ಗಳೊಂದಿಗೆ ಚರ್ಚಿಸಿ ಶೇ.5ರಷ್ಟು ಮೀಸಲು ಅನುದಾನದಲ್ಲಿ ವಿಕಲಚೇತನರ ಭವನ ನಿರ್ಮಿಸಲಾಗುವುದು ಎಂದರು.

ಕೋವಿಡ್ ಸಂದರ್ಭದಲ್ಲಿ ನಾನು ಯಾವುದೇ ಅಧಿಕಾರವಿಲ್ಲದ ವೇಳೆ ನಿರ್ಗತಿಕರಿಗೆ, ಶ್ರಮಿಕರಿಗೆ ಆಹಾರ ಕಿಟ್ ವಿತರಿಸಿ ಸಕಾಲದಲ್ಲಿ ಮಾನವೀಯತೆ ಮೆರೆದ ನೆಮ್ಮದಿ ನನಗಿದೆ ಎಂದು ಶಾಸಕರು ತಿಳಿಸಿದರು.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಪ.ಪಂ. ಅಧ್ಯಕ್ಷ ನವೀನ್ ಕುಮಾರ್, ತಾ.ಪಂ. ಇಓ ಕೆಂಚಪ್ಪ, ಪಿಡಬ್ಲೂಡಿ ಎಇಇ ನಾಗರಾಜ್, ಸಿಡಿಪಿಓ ಬೀರೇಂದ್ರಕುಮಾರ್, ಜಿ.ಪಂ. ಎಇಇ ಶಿವಮೂರ್ತಿ, ಅರಣ್ಯ ಇಲಾಖೆ ಅಧಿಕಾರಿಗಳಾದ ಶ್ರೀನಿವಾಸ್, ಮಹೇಶ್ವರಪ್ಪ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಲಿಂಗಸ್ವಾಮಿ, ವಿಕಲ ಚೇತನರ ಸಂಘದ ರಾಜ್ಯ ಅಧ್ಯಕ್ಷ ಮಹಾಂತೇಶ್ ಬ್ರಹ್ಮ, ತಾಲೂಕು ಅಧ್ಯಕ್ಷ ಸೋಮಣ್ಣ, ಕಾರ್ಯದರ್ಶಿ ಅಂಜಿನಪ್ಪ, ಮಹಾಂತೇಶ್, ಮುಖಂಡರಾದ ಬಿ. ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ ಮತ್ತಿತರರಿದ್ದರು.

# 17 ಮಕ್ಕಳಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರದಾನ



ನವದೆಹಲಿ, ಡಿ. 26- ಕಲೆ, ಸಂಸ್ಕೃತಿ ಹಾಗೂ ಕ್ರೀಡೆ ಸೇರಿದಂತೆ ಹಲವು ವಲಯಗಳಲ್ಲಿ ಅದ್ವಿತೀಯ ಸಾಧನೆ ಮಾಡಿರುವ 17 ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

ಕಲೆ ಮತ್ತು ಸಂಸ್ಕೃತಿ, ಶೌರ್ಯ, ಆವಿಷ್ಕಾರ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾಮಾಜಿಕ ಸೇವೆ, ಕ್ರೀಡೆ ಹಾಗೂ ಪರಿಸರ ವಿಭಾಗಗಳಲ್ಲಿ ಮಕ್ಕಳಿಗೆ ಪ್ರಶಸ್ತಿ ನೀಡಲಾಗಿದೆ.

14 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 10 ಬಾಲಕಿಯರು ಹಾಗೂ 7 ಬಾಲಕರು ಈ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಕಲೆ ಮತ್ತು ಸಂಸ್ಕೃತಿ ವಲಯದಲ್ಲಿ ಸಾಧನೆ ಮಾಡಿರುವ 14 ವರ್ಷದ ಖೇಯಾ ಹಟ್ಕರ್ ಅವರು ಪ್ರಶಸ್ತಿ ಪಡೆದವರಲ್ಲಿ ಸೇರಿದ್ದಾರೆ. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರೂ ಅವರು ಇಂ-ಪಾಸಿಬಲ್ ಹಾಗೂ ಸ್ಮಾರ್ಟ್ ಎಂಬ ಪುಸ್ತಕಗಳನ್ನು ಬರೆದು ಹೆಸರು ಮಾಡಿದ್ದಾರೆ. 12 ವರ್ಷದ ಸೂಫಿ ಗಾಯಕ ಅಯಾನ್ ಸಜತ್ ಅವರು ಕಾಶ್ಮೀರಿ ಸಂಗೀತ ಹಾಗೂ ಸಂಸ್ಕೃತಿಗೆ ನೀಡಿದ ಕೊಡುಗೆಯಿಂದ ಪ್ರಶಸ್ತಿ ಪಡೆದಿದ್ದಾರೆ.ಅವರು ಹಾಡಿರುವ ಬೇ ದರ್ದ್ ಚನೆ ಸೇರಿದಂತೆ ಹಲವು ಹಾಡುಗಳು ಸಾಮಾಜಿಕ ಜಾಲತಾಣದ ಮೂಲಕ ಪ್ರಸಿದ್ಧವಾಗಿವೆ.

ಪಾರ್ಕಿನ್‌ಸನ್ ರೋಗಿಗಳಿಗೆ ನೆರವಾಗುವ ಉಪಕರಣಗಳನ್ನು ರೂಪಿಸುವ ತಂತ್ರಜ್ಞಾನಕ್ಕೆ ಕೊಡುಗೆ ನೀಡಿದ 15 ವರ್ಷದ ಸಿಂಧೂರ ರಾಜ ಅವರು ಪ್ರಶಸ್ತಿ ಪಡೆದುಕೊಂಡಿದ್ದಾರೆ. ಕೇವಲ 3 ವರ್ಷವಾಗಿರುವಾಗ ಚದುರಂಗದ ಎಫ್‌ಐಡಿಇ ಶ್ರೇಯಾಂಕ ಪಡೆದ ಆಟಗಾರರಾಗುವ ಮೂಲಕ ಇತಿಹಾಸ ರೂಪಿಸಿದ್ದ ಹನೀಶ್ ಸರ್ಕಾರ್ ಅವರು ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

# ಅಮಿತ್ ಷಾ ಅಣಕು ಶವಯಾತ್ರೆಯೊಂದಿಗೆ ಪ್ರತಿಭಟನೆ



ಹೊನ್ನಾಳಿ, ಡಿ. 26 - ಡಾ. ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರು ಕೂಡಲೇ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು.

ಅವರು ಇಡೀ ರಾಷ್ಟ್ರದ ಜನತೆಯ ಕ್ಷಮೆ ಕೇಳಬೇಕು ಎಂದು ಡಿ.ಎಸ್.ಎಸ್. ಸಂಚಾಲಕ ದಿಡಗೂರು ಜಿ. ಎಚ್.ತಮ್ಮಣ್ಣ ಅವರು ಅಗ್ರಹಿಸಿದರು.

ತಾಲ್ಲೂಕು ಮಾದಿಗ ಮತ್ತು ಮಾದಿಗ ಉಪ ಜಾತಿಗಳ ಹೋರಾಟ ಸಮಿತಿಗಳ ವತಿಯಿಂದ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್,ಎ,.ಉಮಾಪತಿ ಮಾತನಾಡಿ, ಸಂವಿದಾನವನ್ನು ದೇಶಕ್ಕೆ ಕೊಟ್ಟಂತಹ ಒಬ್ಬ ಮಹಾನ್ ಮೇಧಾವಿ ನಾಯಕನ ಬಗ್ಗೆ ಹಗುರವಾದ ಮಾತುಗಳನ್ನು ಬಳಸಿರುವುದು ಸರಿಯಲ್ಲ ಎಂದು ಹೇಳಿದರು.

ಟಿ.ಬಿ. ವೃತ್ತದ ಕನಕದಾಸ ಪ್ರತಿಮೆಯಿಂದ ನೂರಾರು ಮುಖಂಡರು ಅಮಿತ್ ಶಾ ಅವರ ಅಣಕು ಶವಯಾತ್ರೆ ಮಾಡಿಕೊಂಡು ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ ಅಲ್ಲಿ ಅಣಕು ಶವ ದಹನ ನಡೆಸಿದರು.

ನಂತರ ತಾಲ್ಲೂಕು ಕಚೇರಿಗೆ ಆಗಮಿಸಿ ಅನೇಕ ಮುಖಂಡರು ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿ, ಶಿರಸ್ತೇದಾರ್ ಮಂಜುನಾಥ್ ಅವರ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಈ ಪ್ರತಿ ಭಟನೆನಯಲ್ಲಿ ಡಿ.ಎಸ್.ಎಸ್.ನ ಕುರುವ ಮಂಜುನಾಥ್, ಮಾರಿಕೊಪ್ಪದ ಮಂಜಪ್ಪ, ಕರವೇ ಶ್ರೀನಿವಾಸ್, ಮಂಜು, ದೇವು, ರಾಜಪ್ಪ, ಹನುಮಂತಪ್ಪ ಸೇರಿದಂತೆ ಅನೇಕ ದಲಿತ ಮುಖಂಡರು ಇದ್ದರು.

## ಯೋಗಾಸನ ಸ್ಪರ್ಧೆ : ಕರಿಬಸಪ್ಪಗೆ ಸನ್ಮಾನ



ಹೊನ್ನಾಳಿ, ಡಿ.26 - ತಾಲ್ಲೂಕಿನ ಕುಂದೂರು ಗ್ರಾಮದ ಶಿಕ್ಷಕ ಕೆ.ಜಿ ಕರಿಬಸಪ್ಪ ಥೈಲ್ಯಾಂಡ್‌ನಲ್ಲಿ ನಡೆದ ಅಂತರ ರಾಷ್ಟೀಯ ಯೋಗಾಸನ ಸ್ಪರ್ಧೆಯ ಶಿಬಿರದಲ್ಲಿ ದ್ವಿತಿಯ ಸ್ಥಾನ ಪಡೆದು ಬೆಳ್ಳಿ ನಾಣ್ಯದ ಪದಕ ಪ್ರಶಸ್ತಿಗೆ ಭಾಜನರಾದ ಇವರನ್ನು ಹೊನ್ನಾಳಿ ತಾಲ್ಲೂಕು ತಹಶೀಲ್ದಾರ್ ಪಟ್ಟರಾಜೇಗೌಡರು ಸನ್ಮಾನಿಸಿ ಗೌರವಿಸಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಯಕ್ಕನ ಹಳ್ಳಿಯಲ್ಲಿ ಸಹಶಿಕ್ಷಕರಾಗಿ ಕರಿಬಸಪ್ಪನವರು 50 ರಿಂದ 60 ವರ್ಷದ ಯೋಗಾಸನ ಸ್ಪರ್ಧೆಯಲ್ಲಿ ಭಾರತ ದೇಶವನ್ನು ಪ್ರತಿನಿದಿಸಿದ್ದರು.

ತಾಲ್ಲೂಕಿಗೆ ಗೌರವತಂದ ಇವರ ಸಾಧನೆಗೆ ಶಾಸಕ ಶಾಂತನಗೌಡರು ಮೆಚ್ಚುಗೆ ವ್ಯಕ್ತಪಡಿಸಿರುವರು. ಇವರನ್ನು ಬರುವ ಜ. 26ರ ಗಣರಾಜ್ಯೋತ್ಸವದಂದು ತಾಲ್ಲೂಕು ವತಿಯಿಂದ ಸನ್ಮಾನಿಸಿ ಗೌರವಿಸಲಾಗುವುದೆಂದು ತಹಶೀಲ್ದಾರ್ ತಿಳಿಸಿರುವರು.

# ಹರಿಹರ : ಆರೋಗ್ಯ ಮಾತೆಗೆ ವಿಶೇಷ ಪೂಜೆ



ಹರಿಹರ, ಡಿ. 26 - ನಗರದ ಆರೋಗ್ಯ ಮಾತೆ ಚರ್ಚ್ ನಲ್ಲಿ ಕ್ರಿಸ್ ಮಸ್ ಹಬ್ಬದ ಅಂಗವಾಗಿ ಆರೋಗ್ಯ ಮಾತೆಗೆ ವಿಶೇಷ ಪೂಜೆ ಸಲ್ಲಿಸಿ, ಕ್ರಿಸ್ ಮಸ್ ಹಬ್ಬವನ್ನು ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು.

ಈ ವೇಳೆ ಆರೋಗ್ಯ ಮಾತೆಯ ಚರ್ಚ್ ರೆ. ಫಾದರ್ ಜಾರ್ಜ್ ಮಾತನಾಡಿ, ಕ್ರಿಸ್ ಮಸ್ ಹಬ್ಬದ ಅಂಗವಾಗಿ ಆರೋಗ್ಯ ಮಾತೆಗೆ ವಿಶೇಷ ಪೂಜೆ ಸಲ್ಲಿಸಿ, ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು ಎಂದರು.

ಕಿಸ್ ಮಸ್ ಹಬ್ಬವನ್ನು 2025ನೇ ಜ್ಯೂಬ್ಲಿ ವರ್ಷದ ಉದ್ಘಾಟನೆಯ ವಿಶೇಷ ದಿವಸವನ್ನಾಗಿ ಆಚರಣೆ ಮಾಡಲಾಗಿದೆ. ಪರಸ್ಪರ ಪ್ರೀತಿಸುವುದು ಮತ್ತು ಮಾನವೀಯ ಮೌಲ್ಯದ ಗುಣಗಳನ್ನು ಬೆಳಸುವಂತದ್ದೆ ಹಬ್ಬದ ಆಚರಣೆಯಾಗಿದೆ.

ನಗರದ ಆರೋಗ್ಯ ಮಾತೆ ಚರ್ಚ್ ಸೇರಿದಂತೆ ಹೊಸಭರಂಪುರ ಬಡಾವಣೆಯ ಬಸಲಿಕ ಚರ್ಚ್, ತೇರುಗಡ್ಡೆ ವೃತ್ತ ದಲ್ಲಿರುವ ಮೂಲ ಚರ್ಚ್, ಶಿವಮೊಗ್ಗ ರಸ್ತೆಯ ಚರ್ಚ್‌ನಲ್ಲಿ ಸಹ ಕಿಸ್‌ಮಸ್ ಹಬ್ಬವನ್ನು ಸಡಗರ-ಸಂಭ್ರಮದಿಂದ ಆಚರಿಸಿದರು.

ಈ ಸಂದರ್ಭದಲ್ಲಿ ಶಿವಮೊಗ್ಗದ ಚರ್ಚ್‌ನ ಫಾದರ್ ಫ್ರಾನ್ಸಿಸ್ ಸೆರಾವೊ , ಫ್ರಾನ್ಸಿಸ್ ಕ್ಸೇವಿಯರ್ ಹಾಜರಿದ್ದರು.

# ನಗರದ ಬಾಪೂಜಿ ಆಸ್ಪತ್ರೆಯಲ್ಲೀಗ ವಯಸ್ಕರ ಲಸಿಕಾ ಕೇಂದ್ರ

ದಾವಣಗೆರೆ, ಡಿ. 26- ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವಲ್ಲಿ ಲಸಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ವಯಸ್ಕರಲ್ಲಿ ಲಸಿಕೆಯಿಂದ ತಡೆಗಟ್ಟಬಹುದಾದ ರೋಗಗಳು ಗಣನೀಯ ಪ್ರಮಾಣದಲ್ಲಿದ್ದು, ಅಧಿಕವಾದ ಸಾವು ನೋವುಗಳು ಈ ರೋಗಗಳಿಂದ ಸಂಭವಿಸುತ್ತವೆ. ವಯಸ್ಕರ ಲಸಿಕಾಕರಣವು ಭಾರತೀಯ ಆರೋಗ್ಯ ನೀತಿಯಲ್ಲಿ ನಿರ್ಲಕ್ಷಕ್ಕೆ ಒಳಗಾಗಿ, ಕನಿಷ್ಠವಾಗಿ ಉಲ್ಲೇಖಿತವಾಗಿದೆ.

ವಯೋವೃದ್ಧರು ಹಾಗೂ ದೀರ್ಘಕಾಲದ ರೋಗ ಗಳಿಂದ ಬಳಲುತ್ತಿರುವ ವಯಸ್ಕರಿಗೆ ಲಸಿಕೆಗಳನ್ನು ನೀಡುವುದರಿಂದ ಲಸಿಕೆಯಿಂದ ತಡೆಗಟ್ಟಬಹುದಾದ ರೋಗಗಳನ್ನು ನಿಯಂತ್ರಿಸಬಹುದು. ಹೆಚ್.ಪಿ.ವಿ ಹಾಗು ಹೆಪಟೈಟಿಸ್.ಬಿ ಲಸಿಕೆ ನೀಡುವುದರಿಂದ ವೈರಸ್ ಗಳಿಂದ ಸಂಭವಿಸಬಹುದಾದ ಗರ್ಭಕಂ ಠದ ಕ್ಯಾನ್ಸರ್ , ಲಿವರ್ ಕ್ಯಾನ್ಸರ್ ಗಳನ್ನು ತಡೆಗಟ್ಟಬಹುದು.

ಈ ಹಿನ್ನೆಲೆಯ ಲ್ಲಿ ಗ ರ್ಭಕಂಠದ ಹಾಗೂ ಲಿವರ್ ಕ್ಯಾನ್ಸರ್ ತಡೆಗಟ್ಟಲು, ವಯೋವೃದ್ಧರು, ಮಧುಮೇಹ, ಲಿವರ್ ರೋಗ, ಶ್ವಾಸಕೋಶ ಹಾಗೂ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವ ವಯಸ್ಕರು ಮತ್ತು ಡಯಾಲಿಸಿಸ್‌ಗೆ ಒಳಗಾಗುವ ರೋಗಿಗಳನ್ನು ಲಸಿಕೆಯಿಂದ ತಡೆಗಟ್ಟಬಹುದಾದ ರೋಗಗಳಿಂದ ರಕ್ಷಿಸಲು ದಾವಣಗೆರೆಯ ಬಾಪೂಜಿ ಆಸ್ಪತ್ರೆಯಲ್ಲಿ ಸಮುದಾಯ ವೈದ್ಯಕೀಯ ವಿಭಾಗದಡಿಯಲ್ಲಿ ವಯಸ್ಕರ ಲಸಿಕಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಈ ಲಸಿಕಾ ಕೇಂದ್ರದಲ್ಲಿ ಈಗಾಗಲೇ ಗರ್ಭಕಂಟದ ಕ್ಯಾನ್ಸರ್ ಅನ್ನು ತಡೆಗಟ್ಟಲು ಹೆಚ್.ಪಿ.ವಿ. ಲಸಿಕೆಯನ್ನು ನೀಡಲಾಗುತ್ತಿದೆ. ಈಗಾಗಲೇ ಸುಮಾರು 800 ಫಲಾನುಭವಿಗಳು ಈ ಲಸಿಕೆಯನ್ನು ಪಡೆದಿದ್ದಾರೆ. ಈ ಲಸಿಕೆಯನ್ನು 9 ವರ್ಷದ ಮಕ್ಕಳಿಂದ 45 ವರ್ಷದ ವಯಸ್ಕರಿಗೆ ನೀಡಬೇಕು. 9 ಮತ್ತು 14 ವರ್ಷದ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಎರಡು ಡೋಸ್‌ಗಳನ್ನು (5 ತಿಂಗಳ ಅಂತರದಲ್ಲಿ) ನೀಡಬೇಕು. 15 ಮತ್ತು 45 ವರ್ಷದ ಪುರುಷ ಮತ್ತು ಮಹಿಳೆಯರಿಗೆ ಮೂರು ಡೋಸ್‌ಗಳನ್ನು (0,1,6 ತಿಂಗಳಲ್ಲಿ) ನೀಡಬೇಕು.

ಇನ್‌ಫ್ಲೂಯೆನ್ಸ ಹಾಗೂ ನ್ಯುಮೋಕೊಕಲ್ ಲಸಿಕೆಗಳನ್ನು ನ್ಯುಮೋನಿಯಾವನ್ನು ತಡೆಗಟ್ಟಲು ನೀಡಲಾಗುತ್ತದೆ. 60 ವರ್ಷ ಮೇಲ್ಪಟ್ಟ ವಯೋವೃದ್ಧರು, ಮಧುಮೇಹ ರೋಗಿಗಳು, ರೋಗ ನಿರೋಧಕ ಶಕ್ತಿ ಕಡಿಮೆಯಿರುವವರು, ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆ ಹೊಂದಿದವರು, ಹಿಮೋಡಯಾಲಿಸಿಸ್‌ಗೆ ಒಳಗಾಗುವ ರೋಗಿಗಳು, ಕ್ಯಾನ್ಸರ್ ರೋಗಿಗಳು ವರ್ಷಕ್ಕೊಮ್ಮೆ ಇನ್‌ಫ್ಲುಯೆನ್ಸ ಲಸಿಕೆಯನ್ನು ಪಡೆಯಬೇಕು.

ನ್ಯುಮೋಕೊಕಲ್ ಲಸಿಕೆಯನ್ನು ಮಧುಮೇಹ ರೋಗಿಗಳು, ದೀರ್ಘಕಾಲದ ರೋಗಗಳಿಂದ ಬಳಲುತ್ತಿರುವವರು, ಹಿಮೊಡಯಾಲಿಸಿಸ್‌ಗೆ ಒಳಗಾಗುವ ರೋಗಿಗಳು, ಸ್ಪ್ಲೀನೆಕ್ಟೊಮಿಗೆ ಒಳಗಾದ ರೋಗಿಗಳು ಪ್ರತಿ 5 ವರ್ಷಕ್ಕೊಮ್ಮೆ ಪಡೆಯಬೇಕು. ಹೊರ ದೇಶಕ್ಕೆ ಪ್ರಯಾಣ ಮಾಡುವವರಿಗೆ ಬೇಕಾಗುವ ಎಲ್ಲಾ ಲಸಿಕೆಗಳನ್ನು ಸಹ ಇಲ್ಲಿ ನೀಡಲಾಗುತ್ತದೆ.

ಬಾಪೂಜಿ ಹೊರ ರೋಗಿ ವಿಭಾಗದ 10ನೇ ಕೊಠಡಿಯಲ್ಲಿರುವ ವಯಸ್ಕರ ಲಸಿಕಾ ಕೇಂದ್ರದಲ್ಲಿ ಈ ಎಲ್ಲಾ ಲಸಿಕೆಗಳು ಲಭ್ಯವಿವೆ. ಪ್ರತಿ ತಿಂಗಳ ಎರಡನೇ ಶನಿವಾರ ಹೆಚ್.ಪಿ.ವಿ. ಲಸಿಕೆಯನ್ನು ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಬಾಪೂಜಿ ಆಸ್ಪತ್ರೆ ಹೊರ ರೋಗಿ ವಿಭಾಗದಲ್ಲಿ ಸಂಪರ್ಕಿಸಬಹುದು.

## ಭಾರತದ ಗಡಿ ಬಳಿ ವಿಶ್ವದಲ್ಲೇ ದೊಡ್ಡ ಅಣೆಕಟ್ಟೆ: ಚೀನಾ ಅಸ್ತು

**(1ನೇ ಪುಟದಿಂದ)** ದೊಡ್ಡ ಯೋಜನೆಯಾಗಲಿದೆ ಎಂದು ಹಾಂಕಾಂಗ್‌ನ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.

2015 ರಿಂದ ಟಿಬೆಟ್‌ನಲ್ಲಿ ಚೀನಾ 1.5 ಶತಕೋಟಿ ಡಾಲರ್‌ಗಳ ಜ್ಯಾಂ ಹೈಡ್ರೋಪವರ್ ಸ್ಟೇಷನ್ ನಿರ್ಮಿಸುತ್ತಿದೆ.

ಚೀನಾ ಈ ಅಣೆಕಟ್ಟಿನ ಮೂಲಕ ನದಿಯ ಹರಿವಿನ ಪ್ರಮಾಣವನ್ನು ನಿಯಂತ್ರಿಸಬಹುದಾಗಿದೆ. ಅಲ್ಲದೇ ಸಂಘರ್ಷದ ಸಮಯದಲ್ಲಿ ಈ ಅಣೆಕಟ್ಟೆಯಿಂದ ಹೆಚ್ಚಿನ ಪ್ರಮಾಣದ ನೀರು ಹರಿಸಿ, ಗಡಿ ಪ್ರದೇಶದಲ್ಲಿ ಪ್ರವಾಹ ತರಬಹುದು ಎಂಬ ಕಳವಳ ಭಾರತಕ್ಕೆ ಇದೆ.

ಭಾರತ ಸಹ ಅರುಣಾಚಲ ಪ್ರದೇಶದಲ್ಲಿ ಬ್ರಹ್ಮಪುತ್ರ ನದಿಗೆ ಅಣೆಕಟ್ಟೆಯೊಂದನ್ನು ನಿರ್ಮಿಸುತ್ತಿದೆ.


### ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಲೋಕಿಕೆರೆ ರಸ್ತೆ, ಎಸ್.ಎ.ರವೀಂದ್ರನಾಥ್ ನಗರ, ಚೌಡೇಶ್ವರಿ ದೇವಿ ದೇವಸ್ಥಾನದ ಹತ್ತಿರದ ವಾಸಿ ಶಿರಮಗೊಂಡನಹಳ್ಳಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷರಾದ

**ಶ್ರೀ ಆರ್.ಜೆ. ರಾಜಪ್ಪ**

ಇವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಿಲಿ ಹಾಗೂ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬವರ್ಗಕ್ಕೆ ದಯಪಾಲಿಸಲೆಂದು ಪ್ರಾರ್ಥಿಸುವ...

**ಶಿರಮಗೊಂಡನಹಳ್ಳಿ ವಿದ್ಯಾಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳಾದ ಎಸ್. ಎ. ರವೀಂದ್ರನಾಥ್ ಹಾಗೂ ಸಂಸ್ಥೆಯ ಸರ್ವ ಸದಸ್ಯರು, ಪ್ರಾಂಶುಪಾಲರು, ಹಿ. ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಮುಖ್ಯ ಶಿಕ್ಷಕರು , ಸಹ ಶಿಕ್ಷಕರು, ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಮತ್ತು ಪೋಷಕರು, ಮೊ. 99722 48773**

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 26.12.2024ರಂದು ನಿಧನರಾದ ಶ್ರೀ ಚೌಡೇಶ್ವರಿ ದೇವಸ್ಥಾನ ಅಭಿವೃದ್ಧಿ ಸೇವಾ ಸಮಿತಿ ನಿರ್ದೇಶಕರು ಮತ್ತು ಶಿರಮಗೊಂಡನಹಳ್ಳಿ ವಿದ್ಯಾಸಂಸ್ಥೆ ಹಾಲಿ ಉಪಾಧ್ಯಕ್ಷರು, ಸ್ವಾಮಿ ವಿವೇಕಾನಂದ ಸಂಘದ ಹಾಲಿ ಗೌರವಾಧ್ಯಕ್ಷರು ಮತ್ತು ಶಿರಮಗೊಂಡನಹಳ್ಳಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ಮಾಜಿ ಅಧ್ಯಕ್ಷರಾದ

**ಶ್ರೀ ಆರ್.ಜೆ. ರಾಜಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಧ್ಯಕ್ಷ, ಉಪಾಧ್ಯಕ್ಷರು, ನಿರ್ದೇಶಕರು**

**ಶ್ರೀ ಚೌಡೇಶ್ವರಿ ದೇವಸ್ಥಾನ ಅಭಿವೃದ್ಧಿ ಸೇವಾ ಸಮಿತಿ (ರಿ.)**

ಲೋಕಿಕೆರೆ ರಸ್ತೆ, ಇಂಡಸ್ಟ್ರೀಯಲ್ ಏರಿಯಾ, ಎಸ್.ಎ. ರವೀಂದ್ರನಾಥ ನಗರ ದಾವಣಗೆರೆ.



## ಸಂವಹನ ಅತ್ಯಗತ್ಯ

**(1ನೇ ಪುಟದಿಂದ)** ಸಂಪರ್ಕಿಸಿ ಸಲಹೆ ಪಡೆಯುವಂತೆ ತಿಳಿ ಹೇಳಿದರು.

ಪಠ್ಯದ ಹೊರತಾಗಿಯೂ ಹಲವಾರು ವಿಷಯಗಳನ್ನು ಸಿದ್ಧಗಂಗಾ ಶಾಲೆ ಮಕ್ಕಳಿಗೆ ಹೇಳಿಕೊಡುತ್ತಿದೆ. ಶಿಸ್ತು, ಆತ್ಮವಿಶ್ವಾಸ ಕಲಿಸಿಕೊಡುತ್ತಿದೆ ಎಂದು ವಿರೂಪಾಕ್ಷ ದೇವರಮನೆ ಇದೇ ಸಂದರ್ಭದಲ್ಲಿ ಶ್ಲಾಘಿಸಿದರು.

ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ಹೇಮಂತ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿ'ಸೋಜ, ಸಿದ್ಧಗಂಗಾ ಪ.ಪೂ. ಕಾಲೇಜು ಹಿರಿಯ ಉಪನ್ಯಾಸಕರುಗಳಾದ ಜಯಣ್ಣ ಬಿ.ಇಟಗಿ, ಸದಾಶಿವ ವಿ.ಹೊಳ್ಳ, ಡಾ.ರಾಮದಾಸ್ ಕೆ. ಉಪಸ್ಥಿತರಿದ್ದರು. ಶ್ರೀ ಸಿದ್ಧಗಂಗಾ ಕಾಂಪೋಜಿಟ್ ಸ್ಕೂಲ್ ಮುಖ್ಯ ಶಿಕ್ಷಕಿ ರೇಖಾರಾಣಿ ಕೆ.ಎಸ್. ನಿರೂಪಿಸಿದರು.

### ಆರ್.ಜೆ. ರಾಜಪ್ಪ ನಿಧನ



ದಾವಣಗೆರೆ ಸಿಟಿ, ಲೋಕಿಕೆರೆ ರಸ್ತೆ, ಇಂಡಸ್ಟ್ರೀಯಲ್ ಏರಿಯಾ, ಎಸ್.ಎ. ರವೀಂದ್ರನಾಥ್ ನಗರ ವಾಸಿ ಆರ್.ಜೆ. ರಾಜಪ್ಪ (62) ಅವರು ದಿನಾಂಕ 26.12.2024ರ ಗುರುವಾರ ಮಧ್ಯಾಹ್ನ 12.43ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.12.2024ರ ಶುಕ್ರವಾರ ಮಧ್ಯಾಹ್ನ 11.30ಕ್ಕೆ ಶ್ರೀರಾಮ ನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಗೆ ಶ್ರೀರಕ್ಷಾ ಆಯ್ಕೆ



ದಾವಣಗೆರೆ, ಡಿ. 26 - ನಗರದ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಶ್ರೀರಕ್ಷಾ ಅವರು ರಾಮನಗರದ ಅರ್ಚಕರಹಳ್ಳಿಯಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ (ಭಕ್ತಿಗೀತೆ ಗಾಯನ) ಭಾಗವಹಿಸಿ ದ್ವಿತೀಯ ಸ್ಥಾನ ಗಳಿಸುವ ಮೂಲಕ ತುಮಕೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.



## ರಾಷ್ಟ್ರೀಯ ಹಿರಿಯರ ಖುರುಷ್ ಪಂದ್ಯಾವಳಿಗೆ ಎಸ್.ಎ.ಜಿ.ಬಿ. ಕಾಲೇಜಿನ ವಿದ್ಯಾರ್ಥಿಗಳು ಆಯ್ಕೆ

ದಾವಣಗೆರೆ, ಡಿ. 26 - ನಗರದ ಎಸ್.ಎ.ಜಿ.ಬಿ. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಮಧು ನಾಯ್ಕ, ವಿನಯ್, ಸಂಜಯ್, ಮುರುಳೀಧರ ಮತ್ತು ಗಣೇಶ್ ಅವರು ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ರಾಜ್ಯಮಟ್ಟದ ಖುರುಷ್ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಪಡೆದು ಪಂಜಾಬ್‌ನ ಲೂಧಿಯಾನದಲ್ಲಿ ನಡೆಯಲಿರುವ ರಾಷ್ಟ್ರೀಯ ಖುರುಷ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ.

ರಾಷ್ಟ್ರೀಯ ಪಂದ್ಯಾವಳಿಗೆ ಆಯ್ಕೆಯಾಗಿರುವ ಮಧು ನಾಯ್ಕ, ವಿನಯ್, ಸಂಜಯ್, ಮುರುಳೀಧರ ಮತ್ತು ಗಣೇಶ್ ಅವರುಗಳನ್ನು ಎಸ್.ಕೆ.ಪಿ. ವಿದ್ಯಾಪೀಠ ಅಭಿನಂದಿಸಿದೆ.

# ದಮನಿತ ಮಹಿಳೆಯರಿಗೆ ಸರ್ಕಾರಿ ಸೌಲಭ್ಯ ಸಿಗಲಿ



### ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜಿ.ಎಂ ಗಂಗಾಧರಸ್ವಾಮಿ ನಿರ್ದೇಶನ

ದಾವಣಗೆರೆ, ಡಿ. 26- ತೃತೀಯ ಲಿಂಗಿ (ಟ್ರಾನ್ಸ್‌ಜೆಂಡರ್) ಹಾಗೂ ದಮನಿತ ಮಹಿಳೆಯರ ಜೀವನಮಟ್ಟ ಸುಧಾರಿಸಲು ವಿವಿಧ ಇಲಾಖೆಯಿಂದ ಅನುಷ್ಠಾನ ಮಾಡುತ್ತಿರುವ ಯೋಜನೆ, ಸೌಲಭ್ಯಗಳ ಬಳಸಿಕೊಳ್ಳಲು ಜಾಗೃತಿ ಮೂಡಿಸಬೇಕೆಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ನಗರದ ಜಿಲ್ಲಾಡಳಿತ ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಲಿಂಗತ್ವ ಅಲ್ಪಸಂಖ್ಯಾತರ ಸಮನ್ವಯ ಸಮಿತಿ ಹಾಗೂ ದಮನಿತ ಮಹಿಳೆಯರ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದರು.

ಈ ಸೌಲಭ್ಯಗಳನ್ನು ಪಡೆಯಲು ಅರ್ಹರಿಗೆ ಸೌಲಭ್ಯಗಳನ್ನು ತಲುಪಿಸಿ, ಮುಂದಿನ ಸಭೆಯಲ್ಲಿ ಎರಡು ವರ್ಗಗಳಿಗೆ ಇಲಾಖಾವಾರು ಸೌಲಭ್ಯ ಕಲ್ಪಿಸಿರುವ ಬಗ್ಗೆ ಮಾಹಿತಿ ನೀಡಬೇಕೆಂದರು.

ದಮನಿತ ಮಹಿಳೆಯರ ಸಮಸ್ಯೆಗಳು, ಹಕ್ಕುಗಳು ಸಂರಕ್ಷಣೆ, ಶಿಫಾರಸ್ಸು ಹಾಗೂ ದೀರ್ಘಕಾಲಿನ ಕಾರ್ಯಕ್ರಮಗಳ ಬಗ್ಗೆ ಮತ್ತು ಲಿಂಗತ್ವ ಅಲ್ಪ ಸಂಖ್ಯಾತರ ಚೇತನ ಯೋಜನೆಯಡಿ ಸಾಲ, ಮೈತ್ರಿ ಯೋಜನೆಯಡಿ ನೀಡಲಾಗುತ್ತಿರುವ ಪಿಂಚಣಿ, ವಯಸ್ಸಾದವರಿಗೆ ವೃದ್ಧಾಶ್ರಮ ಮತ್ತು ಪಿಂಚಣಿ, ಸರ್ಕಾರಿ ವ್ಯವಸ್ಥೆಯಲ್ಲಿ ಸರ್ಕಾರಿ, ಅರೆಸರ್ಕಾರಿ, ಗುತ್ತಿಗೆ ಆಧಾರಿತ ಉದ್ಯೋಗ ಕಲ್ಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಲಾಟರಿಯ ಮೂಲಕ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಯಲ್ಲಿ 31 ಗುರಿಗಳಲ್ಲಿ, 17 ಜನರ ಆಯ್ಕೆ, ಚೇತನ ಯೋಜನೆಯಲ್ಲಿ 21 ಗುರಿಗಳಲ್ಲಿ, 21 ಜನರ ಆಯ್ಕೆ, ಧನಶ್ರೀ ಯೋಜನೆಯಲ್ಲಿ 21 ಗುರಿಗಳಲ್ಲಿ 21 ಜನರ ಆಯ್ಕೆ, ದೇವದಾಸಿ ಪುನರ್ವಸತಿ ಯೋಜನೆಯಲ್ಲಿ 11 ಗುರಿಗಳಲ್ಲಿ 11 ಜನರ ಆಯ್ಕೆ, ಉದ್ಯೋಗಿನಿಯಲ್ಲಿ 4 ಜನರನ್ನು ಆಯ್ಕೆ ಮಾಡಲಾಯಿತು.

ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ.ಇಟ್ನಾಳ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ, ಡಿಯುಡಿಸಿ ಯೋಜನಾ ನಿರ್ದೇಶಕ ಡಾ.ಮಹಾಂತೇಶ್, ಕರ್ನಾಟಕ ರಾಜ್ಯದ ಮಹಿಳಾ ಅಭಿವೃದ್ಧಿ ನಿಗಮದ ಅಭಿವೃದ್ಧಿ ನಿರೀಕ್ಷಕರಾದ ಮಂಜುಳಾ.ಐ.ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾ ನಾಯ್ಕ, ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಇಂದು ಸೇಂಟ್ ಜಾನ್ಸ್ ಉತ್ಸವ

ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯ 34ನೇ ವರ್ಷದ ವಾರ್ಷಿಕೋತ್ಸವ ಸೇಂಟ್ ಜಾನ್ಸ್ ಉತ್ಸವ ಕಾರ್ಯಕ್ರಮವು ಇಂದು ಮತ್ತು ನಾಳೆ ನಡೆಯಲಿದೆ. ಇಂದು ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ದಾವಣಗೆರೆ ಜಿಲ್ಲಾ ಪೊಲೀಸ್ ಮಹಾ ನಿರೀಕ್ಷಕ ಬಿ. ರಮೇಶ್, ಆರ್.ಎಸ್. ಶೇಖರಪ್ಪ, ಹೆಚ್.ಬಿ. ರಾಮಚಂದ್ರಪ್ಪ ಉಪಸ್ಥಿತರಿರುವರು. ಹೆಚ್. ಅನಿಲ್ ಕುಮಾರ್, ಆರ್.ಎಸ್. ರಾಕೇಶ್, ಟಿ.ಎಂ. ಉಮಾಪತಯ್ಯ, ಪ್ರವೀಣ್ ಹುಲ್ಲುಮನೆ, ಟಿ.ಎಂ.ಗಿರೀಶ್, ಆರ್.ಹೆಚ್. ನಾಗಭೂಷಣ್ ಮತ್ತು ಶ್ರೀನಾಥ್ ರೆಡ್ಡಿ ಉಪಸ್ಥಿತರಿರುವರು.

## ಸಿದ್ದಗಂಗಾ ಶಾಲೆಯಲ್ಲಿ ಇಂದು

ಸಿದ್ಧಗಂಗಾ ವಿದ್ಯಾಸಂಸ್ಥೆಯ 55ನೇ ವಾರ್ಷಿಕ ಸಂಭ್ರಮಾಚರಣೆ ಕಾರ್ಯಕ್ರಮವು ಇಂದು ಸಂಜೆ 5.30ಕ್ಕೆ ಶಾಲಾ ಆವರಣದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಜಿ.ಪಂ ಸಿಇಓ ಡಾ. ಸುರೇಶ್ ಬಿ. ಇಟ್ನಾಳ್ ಉದ್ಘಾಟಿಸಲಿದ್ದಾರೆ.



## ದಾವಣಗೆರೆ ಹಳೆ ಊರಿನ ಚಳಿಗಾಲದ ಸ್ವಾರಸ್ಯಗಳು...

# 'ಗಟ್ಟಿ ಎಣ್ಣೆ - ವ್ಯಾಪಾರ ಬೋಣಿ

ದಶಕಗಳ ಕೆಳಗೆ ದಾವಣಗೆರೆಯಲ್ಲಿ ಚಳಿಗಾಲವೆಂದರೆ ಈಗಿನಕ್ಕಿಂತ ತುಂಬಾ ಚಳಿ ಇರುತ್ತಿತ್ತು. ಮನೆಯಲ್ಲಿನ ಶುದ್ಧ ಕೊಬ್ಬರಿ ಎಣ್ಣೆ ಕಲ್ಲಿನಂತೆ ಗಟ್ಟಿ ಆಗುತ್ತಿತ್ತು. ಈಗಂತೂ ಶುದ್ಧ ಎಣ್ಣೆಗಳು ಸಿಗುವುದೇ ದುರ್ಲಭ. ಬ್ರ್ಯಾಂಡೆಡ್ ಎಣ್ಣೆಗಳು ಸಹಾ ಈಗ ಕಲಬೆರಿಕೆ ಎಂಬ ಅನುಮಾನ ಬರುತ್ತಿದೆ.

ಯಾವುದೇ ಖಾದ್ಯ ತೈಲಗಳಲ್ಲೂ ಪಾಮ್ ಆಯಿಲ್ ಅಥವಾ ಮಿನರಲ್ ಆಯಿಲ್ ಕಲಬೆರಿಕೆ ಸಾಮಾನ್ಯವಾಗಿದೆ. ಬಹಳ ಹಿಂದೆ ದಾವಣಗೆರೆಯಲ್ಲಿ ಎತ್ತು ಕಟ್ಟಿದ ಸಾಂಪ್ರದಾಯಕ ಗಾಣಗಳು ಇದ್ದವು. ಶುದ್ಧವಾದ ಶೇಂಗಾ ಎಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ ಮುಂತಾಗಿ ಎಲ್ಲವೂ ಲಭ್ಯವಿತ್ತು. ನಾನು ತಿಳಿದ ಹಾಗೆ ದಾವಣಗೆರೆಯಲ್ಲಿ ಅತಿಪೂರ್ವದಲ್ಲಿ ದೊಡ್ಡ ಮಟ್ಟದ ಖಾದ್ಯ ತೈಲ ತಯಾರಿಕೆ 'ಆರ್.ಹೆಚ್' ಅಂದರೆ 'ರಾಜನಹಳ್ಳಿ ಹನುಮಂತಪ್ಪ' ಹಾಗೂ 'ಬಿ.ಟಿ' ಅಂದರೆ 'ಬ್ರಹ್ಮಪ್ಪ ತವನತ್ತ'ರಿಂದ ಆರಂಭವಾಯಿತು.

ರಾಜನಹಳ್ಳಿಯವರ ರವಿ ವೆಜಿಟೇಬಲ್ ವನಸ್ಪತಿ ಆಯಿಲ್ ಮಿಲ್, ಬಿ.ಟಿ.ಯವರ ಆಯಿಲ್ ಮಿಲ್ ಭರ್ಜರಿಯಾಗಿ ನಡೆಯುತ್ತಿತ್ತು. ಹೇಗಿತ್ತೆಂದರೆ ಈಗಿನ ಅಶೋಕ ಚಿತ್ರಮಂದಿರದ ಹಿಂಭಾಗದಲ್ಲಿನ ಅವರ ಕೈಗಾರಿಕಾ ಮಿಲ್ ಆವರಣದ ಒಳಗೆ ರೈಲ್ವೆ ಹಳಿಯನ್ನು ಹಾಕಲಾಗಿತ್ತು. ಗೂಡ್ಸ್ ಟ್ರೈನ್‌ಗಳು ಒಳಗೆ ಹೋಗಿ ಉತ್ಪಾದನೆಯನ್ನು ಲೋಡ್ ಮಾಡಿಕೊಂಡು ಬರುತ್ತಿದ್ದವು. ಬಿ.ಟಿ ಎಂಬುವ ಹೆಸರಿಗೆ ಬಹುದೊಡ್ಡ ಗುಡ್ ವಿಲ್ ಇತ್ತು.

ದಾವಣಗೆರೆ ಅಷ್ಟೇ ಅಲ್ಲದೇ ಚಳ್ಳಕೆರೆ, ಹಿರಿಯೂರು, ಮಧುಗಿರಿ, ಹಾವೇರಿ, ಸುರಪುರ, ಶಹಾಪುರ, ಯಾದಗಿರಿ ಮುಂತಾಗಿ ಬಹುಕಡೆಗಳಿಂದಲೂ ದೊಡ್ಡ ಪ್ರಮಾಣದಲ್ಲಿ ಇವರೆಲ್ಲಾ ಶೇಂಗಾ ಬೀಜ ಖರೀದಿಸುತ್ತಿದ್ದರು.

ನಂತರದಲ್ಲಿ ಕಿರುವಾಡಿಯವರು ಪಿ.ಬಿ ರಸ್ತೆಯ ಆರ್.ಹೆಚ್ ನವರ ಈಗಿನ ಶ್ರೀ ಲಾಡ್ಜ್ ಹಿಂಭಾಗ ರಾಜನಹಳ್ಳಿ ಅವರ ಜಾಗದಲ್ಲಿ ಶೇಂಗಾ ಎಣ್ಣೆ ಕೈಗಾರಿಕೆ ಮಾಡಿದರು. ನಂತರ ಇದು ಈಗಿನ ಕಿರುವಾಡಿ ಲೇಔಟ್‌ಗೆ ಸ್ಥಳಾಂತರವಾಯಿತು. ವನಸ್ಪತಿಗಳು ದಾವಣಗೆರೆಯಿಂದ ಪುಣೆ, ಮುಂಬೈ ಮುದ್ದಾಗಿ ದೇಶಾದ್ಯಂತ ಹೋಗುತ್ತಿತ್ತು. ಕಪೂರ್‌ನವರು ಎಣ್ಣೆ ಮಿಲ್ ಮಾಡಿದರು. ಎಸ್. ಕೊಟ್ಟೂರು ಬಸಪ್ಪನವರು ಸಹ ಎಣ್ಣೆ ಮೇಲ್ ಮಾಡಿದರು. ಕೆಲ ದಶಕಗಳ ಹಿಂದೆ ಕ್ಷೀರಸಾಗರದ ಹನುಮಂತಪ್ಪನವರು, ಶುದ್ಧ ಶೇಂಗಾ ಎಣ್ಣೆ ಮಾಡಿ ಕೊಡುತ್ತಿದ್ದರು. ಹಂಜಗಿ ಮಠದ ಮಹಾ ರುದ್ರಯ್ಯನವರೂ ಅವರೊಂದಿಗೆ ಇದ್ದರು. ಇನ್ನೂ ಅನೇಕ ದೊಡ್ಡ ಹಾಗೂ ಚಿಕ್ಕ ಎಣ್ಣೆ ಗಿರಣಿಗಳು ದಾವಣಗೆರೆಯಲ್ಲಿದ್ದವು. ಸಿ ಮತ್ತು ಡಿ ಚರಡಿ ಶೇಂಗಾ ಬೀಜಗಳನ್ನು ಚೆನ್ನಾಗಿ ಬಿಸಿಲಿಗೆ ಹಾಕಿ ಎಣ್ಣೆ ತೆಗೆಯುತ್ತಿದ್ದುದರಿಂದ ಕಾಯಲು ಇಟ್ಟರೆ ಎಣ್ಣೆ ಬುರುಗು ಬಂದು ಉಕ್ಕುತ್ತಿರಲಿಲ್ಲ, ಕರಿದ ತಿಂಡಿಗಳು ಘಮಘಮಿಸುತ್ತಿದ್ದವು, ಆರೋಗ್ಯವೂ ಕೆಡುತ್ತಿರಲಿಲ್ಲ. ಈಗಿನ ವರ್ಷಗಳಲ್ಲಿ ಅಥಣಿಯವರು ಅಕ್ಕಿ ತೌಡಿನ ಶುದ್ಧ ಎಣ್ಣೆ ಕೈಗಾರಿಕೆಯನ್ನು ನಡೆಸಿದ್ದರು.

ಹಳೆ ಊರಿನ ಅಡಿವೆಯ್ಯನ ಗಲ್ಲಿ ಮೂಲೆಯಲ್ಲಿ ಎಲೆಕ್ಟ್ರಿಷಿಯನ್ ಗಂಗಾಧರಪ್ಪನವರ ತಮ್ಮ ಮೆಕ್ಯಾನಿಕ್ ಮುರುಗೇಶಪ್ಪನವರ ಕರಿಹಂಚಿನ ಮನೆಯ ಮುಂಭಾಗದಲ್ಲಿ ಸಣ್ಣಕಿರಾಣಿ ಅಂಗಡಿಯನ್ನು ದೇವಾಂಗದ ಪಕೀರಪ್ಪ ಹಾಗೂ ಜೀವಣ್ಣ ನಡೆಸುತ್ತಿದ್ದರು. ಚಳಿಗಾಲದ ಒಂದು ಬೆಳಿಗ್ಗೆ ಅಂಗಡಿ ಬಾಗಿಲು ತೆಗೆಯುತ್ತಲೇ ಓರ್ವ ಮಹಿಳೆ 'ಚಟಾಕು ಕೊಬ್ಬರಿ ಎಣ್ಣೆ ಕೊಡಪ್ಪ' ಎಂದು ಮಿಳ್ಳೆ (ಎಣ್ಣೆ ಪಾತ್ರೆ) ಹಿಡಿದುಕೊಂಡು ಬಂದಳು. ಆಗ ಈಗಿನಂತೆ ಪ್ಲಾಸ್ಟಿಕ್ ಕವರ್‌ಗಳಲ್ಲಿ ಬ್ರಾಂಡೆಡ್

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ಎಣ್ಣೆಗಳು ಬರುತ್ತಿರಲಿಲ್ಲ, ಅಂಗಡಿಗಳಲ್ಲಿ ಡಬ್ಬಗಳಿಂದ ಸೇರು, ಅಚ್ಚೇರು, ಪಾವು, ಚಟಾಕು ಹೀಗೆ ಎಣ್ಣೆಯನ್ನು ಅಳೆದು ಕೊಡುತ್ತಿದ್ದರು. ಚಳಿಯಿಂದಾಗಿ ಕೊಬ್ಬರಿ ಎಣ್ಣೆ ಕಲ್ಲಿನಂತೆ ಗಟ್ಟಿಯಾಗಿತ್ತು. 'ಎಣ್ಣೆ ಗಟ್ಟಿಯಾಗೇತಿ, ಬಿಸಿಲಿಗಿಟ್ಟು ಕರಗಿಸಬೇಕು, ಆಮೇಲೆ ಬಾ ತಾಯಿ' ಎಂದ ಜೀವಣ್ಣ, ಆದರೆ ಅದು ಬೋಣಿಗೆ ವ್ಯಾಪಾರವಾದ್ದರಿಂದ ಬಿಡುವಂತಿರಲಿಲ್ಲ. 'ಏ ತಾಯಿ ಹೋಗಬ್ಯಾಡ ಸ್ವಲ್ಪ ನಿಂದ್ರು ಎಣ್ಣೆ ಕರಗಿಸಿ ಕೊಡ್ತೀನಿ' ಅಂದ ಪಕೀರಪ್ಪ.

ಇಬ್ಬನಿ ಬೇರೆ ಬಿಸಿಲು ಇನ್ನೂ ಬಂದಿರಲಿಲ್ಲ, ಬೆಂಕಿ ಹಚ್ಚಿ ಅದರ ಮೇಲೆ ಡಬ್ಬ ಇಟ್ಟು ಎಣ್ಣೆ ಕರಿಗಿಸಬೇಕೆಂದರೆ ಡಬ್ಬದ ಬೆಸುಗೆ ಹೋಗಿ ಎಣ್ಣೆ ಚೆಲ್ಲುತ್ತದೆ. ಆದರೆ, ಬೋಣಿ ವ್ಯಾಪಾರ ಬಿಡುವಂತಿಲ್ಲ. 'ಯಜಮಾನನ್ನ ತಲೀ ಸ್ನಾನಕ್ಕೆ ಅಂತ ಬಚ್ಚಲಾಗೆ ಕುಂದ್ರಿಸಿ ಬಂದೀನಿ, ಜಲ್ದಿ ಕೊಬ್ಬರೆಣ್ಣೆ ಕೊಡು' ಅಂತ ಹೆಣ್ಣುಮಗಳ ಒತ್ತಾಯ ಬೇರೆ.

ಅದೇ ವೇಳೆಗೆ ಎದುರುಗಡೆ ಮಾಳದಕರ್ ನಾರಾಯಣರಾವ್ ಕಟ್ಟಡದಲ್ಲಿದ್ದ ಮಂಜುನಾಥ ಕೆಫೆ ಹೋಟೆಲ್ ಮಾಲೀಕ ನಾಗೇಶರಾಯರು, ಪಕೀರಪ್ಪನನ್ನು ಮಾತಾಡಿಸಲು ಬಂದರು.

ಕೊಬ್ಬರಿ ಎಣ್ಣೆ ಕರಗಿಸಲು ಪಕೀರಪ್ಪ ಜೀವಣ್ಣರ ಪರದಾಟ ಕಂಡು ತಕ್ಷಣ ತಮ್ಮ ಹೋಟೆಲಿನ ದೋಸೆ ಒಲೆಯ ಪಕ್ಕದ ಕೋಡೊಲೆಯ ಮೇಲಿದ್ದ ಬಿಸಿ ನೀರನ್ನು ತಿಂಡಿ ಮಾಸ್ಟರ್ ತಿಮ್ಮನಿಂದ ತರಿಸಿ, ಕೊಬ್ರಿ ಎಣ್ಣೆ ಡಬ್ಬದ ಸುತ್ತಾ ನಿಧಾನವಾಗಿ ಸುರಿಸಿದರು. ಕೊಬ್ಬರಿ ಎಣ್ಣೆ ಕರಗಿತು!. ಪಕೀರಪ್ಪಗೆ ಬೋಣಿ ವ್ಯಾಪಾರವೂ ಆಯಿತು, ಮಹಿಳೆಗೆ ಎಣ್ಣೆಯೂ ಸಿಕ್ಕಿತು.

# ರೈತ ಸಾಧಕರನ್ನು ಪ್ರೋತ್ಸಾಹಿಸುವುದೇ ನಿಜವಾದ ರೈತ ದಿನಾಚರಣೆ : ಪ್ರತಿಭಾ



**ಹೊನ್ನಾಳಿ**

ಹೊನ್ನಾಳಿ, ಡಿ. 26 - ಕೃಷಿ ಚುಟುವಟಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರೈತರು ಹಾಗೂ ಹೈನುಗಾರಿಕೆ ತೋಟಗಾರಿಕೆ ಸಾವಯವ ಕುರಿಸಾಕಾಣಿಕೆಗಳಲ್ಲಿ ಸಾಧಕರನ್ನು ಗುರುತಿಸಿ ಪ್ರಗತಿಪರ ರೈತರೆಂದು ಪ್ರೋತ್ಸಾಹಿಸಿ ಇತರೆ ರೈತರಿಗೆ ಪ್ರೇರಣೆಯಾಗುವಂತೆ ಮಾಡುವುದರಿಂದ ರೈತ ದಿನಾಚರಣೆಗೆ ನಿಜವಾದ ಅರ್ಥ ಬರಲಿದೆ ಎಂದು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕಿ ಪ್ರತಿಮಾ ಹೇಳಿದರು.

ಪಟ್ಟಣದ ಟಿಎಪಿಸಿಎಂ ಆವರಣದಲ್ಲಿ ತಾಲೂಕು ಕೃಷಿ ಇಲಾಖೆ ವತಿಯಿಂದ ಆಯೋಜಿಸಿರುವ ಆತ್ಮ ಯೋಜನೆಯಡಿ ಕಿಸಾನ್‌ಗೋಷ್ಠಿ ಕಾರ್ಯಕ್ರಮ, ರಾಷ್ಟ್ರೀಯ ರೈತ ದಿನಾಚರಣೆ, ಆಹಾರ ಮತ್ತು ಪೌಷ್ಠಿಕ ಭದ್ರತಾ ಯೋಜನೆಯಡಿ ಕ್ಷೇತ್ರೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿವಿಧ ಬೆಳೆಗಳಲ್ಲಿ ಸಾಧನೆಗೈದ ರೈತರು ಇದ್ದರೂ ಅವರು ಬೆಳಕಿಗೆ ಬರುವುದಿಲ್ಲ. ಅಂತಹ ಸಾಧಕರು ಇದ್ದರೆ ಇಲಾಖೆಗೆ ಮಾಹಿತಿ ದೊರೆತಲ್ಲಿ ಮುಂದಿನ ವರ್ಷ ರೈತದಿನಾಚರಣೆ ಕಾರ್ಯಕ್ರಮದಲ್ಲಿ ಪ್ರೋತ್ಸಾಹಿಸಿ ಪ್ರಶಸ್ತಿ ಪತ್ರ ನೀಡಲಾಗುವುದು ಎಂದರು.

ರೈತ ಸಂಘದ ತಾಲ್ಲೂಕು ಅಧ್ಯಕ್ಷ ಅರಬಗಟ್ಟೆ ಕೆ.ಸಿ.ಬಸಪ್ಪ ಮಾತನಾಡಿ, ಕೃಷಿ ಇಲಾಖೆ ನಡೆಸುವ ಪ್ರತಿಯೊಂದು ಕಾರ್ಯಕ್ರಮ ಮತ್ತು ಕಾರ್ಯಾಗಾರ ನಡೆಯುತ್ತಿದ್ದರೆ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವಂತಾಗ ಬೇಕು. ಇಲಾಖೆ ನೀಡುವ ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಂಡು ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಬೆಳೆಗಳಲ್ಲಿ ಸಾಧನೆಗೈದ ರೈತರುಗಳಾದ ಸುಂಕದಕಟ್ಟೆ ಗ್ರಾಮದ ಅಣ್ಣಪ್ಪ ಹೈನುಗಾರಿಕೆ, ಬೈರನಹಳ್ಳಿ ಗ್ರಾಮದ ರಾಜು ಅರಣ್ಯ ಕೃಷಿ, ಗಡೆಕಟ್ಟೆ ಗ್ರಾಮದ ಚನ್ನಕೇಶವ ತೋಟಗಾರಿಕೆ,ಕುಂದೂರು ಗ್ರಾಮದ ಪರಮೇಶ್ವರಪ್ಪ ಕುರಿ ಸಾಗಾಣಿಕೆ, ಹುಣಘಟ್ಟ ಗ್ರಾಮದ ಮೀನಾಕ್ಷಮ್ಮ ಸಾವಯವ ಕೃಷಿ ಸಾಧನೆಗೈದ ಇವರುಗಳಿಗೆ ಕೃಷಿ ಇಲಾಖೆಯಿಂದ ಪ್ರೋತ್ಸಾಹಿಸಿ ಪ್ರಶಸ್ತಿ ಪತ್ರ ನೀಡಲಾಯಿತು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಸುಂಕದಕಟ್ಟೆ ಕರಿಬಸಪ್ಪ, ಕಡದಕಟ್ಟೆ ಜಗದೀಶ್, ರುದ್ರನಾಯ್ಕ, ಹೊಳೆಹರಳಹಳ್ಳಿ ಬಣಕಾರ ಬಸವರಾಜಪ್ಪ, ಕೃಷಿ ಇಲಾಖೆ ಕೃಷಿ ಅಧಿಕಾರಿ ಅತೀಕ್‌ವುಲ್ಲಾ, ತಾಂತ್ರಿಕ ಅಧಿಕಾರಿ ಸಚೀನ್, ಮಂಜುನಾಥ್ ಯರೀಮನೆ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಷಾ ವಿರುದ್ಧ ಸುಮೊಟೋ ಕೇಸ್ ದಾಖಲಿಸಲು ದಸಂಸ ಒತ್ತಾಯ

ದಾವಣಗೆರೆ, ಡಿ.26 - ಡಾ.ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ಎಸ್ಸಿ-ಎಸ್ಟಿ ಕಾಯ್ದೆ ಅಡಿ ಸುಮೊಟೋ ಕೇಸ್ ದಾಖಲಿಸಲು ಒತ್ತಾಯಿಸಿ ನಗರದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ವತಿಯಿಂದ ಅರೆ ಬೆತ್ತಲೆ ಪ್ರತಿಭಟನಾ ಮೆರವಣಿಗೆ ನಡೆಯಿತು.

ನಗರದ ಜಯದೇವ ವೃತ್ತದಿಂದ ಉಪವಿಭಾಗಾಧಿ ಕಾರಿ ಕಚೇರಿವರೆಗೆ ಅರೆ ಬೆತ್ತಲೆ ಪ್ರತಿಭಟನೆ ನಡೆಸಿದ ಡಿಎಸ್‌ಎಸ್ ಕಾರ್ಯಕರ್ತರು, ಉಪ ವಿಭಾಗಾಧಿಕಾರಿ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಸಂಘಟನಾ ಸಂಚಾಲಕ ಟಿ. ರವಿಕುಮಾರ್ ಅವರು, ಅಂಬೇಡ್ಕರ್ ಅವರ ಹೆಸರು ಪ್ರಸ್ತಾಪಿಸಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಆಡಿದ ಮಾತು ಅಂಬೇಡ್ಕರ್ ಅವರಿಗೆ ಅಷ್ಟೇ ಅಲ್ಲ. ಇಡೀ ಸಂವಿ ಧಾನಕ್ಕೆ ಮತ್ತು ದೇಶದ ದಲಿತ ಸಮುದಾಯಕ್ಕೆ ಮಾಡಿದ ಅವಮಾನವಾಗಿದೆ ಎಂದರು.

ಜಿಲ್ಲಾ ಸಂಚಾಲಕ ರಾಘವೇಂದ್ರ ಡಿ. ಕಡೇಮನಿ ಮಾತನಾಡಿದರು. ಜಿಲ್ಲಾ ಸಂಘಟನಾ ಸಂಚಾಲಕರಾದ ಎಂ. ರವಿ ಕೆಟಿಜೆ ನಗರ, ಕೆಂಚಮ್ಮನಹಳ್ಳಿ ರುದ್ರೇಶ್, ಜಿಲ್ಲಾ ಖಜಾಂಚಿ ಹೆಚ್. ಮಲ್ಲಿಕಾರ್ಜುನ್, ಕೃಷ್ಣಪ್ಪ ಹರಿಹರ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಹಾಲಿವಾಣದಲ್ಲಿ ಇಂದು ದೊಡ್ಡ ಎಡೆ ಜಾತ್ರೆ, ಸಾಮೂಹಿಕ ವಿವಾಹ

ಮಲೇಬೆನ್ನೂರು ಸಮೀಪದ ಹಾಲಿವಾಣ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಮರಿಬನ್ನಿ ಅಂಗವಾಗಿ 8 ರಿಂದ 9 ಗಂಟೆಯವರೆಗೆ ಕಾಯಿತೂಕ, ಜವಳ ಇತ್ಯಾದಿ ಸೇವಾ ಕಾರ್ಯಕ್ರಮಗಳು ನಡೆಯಲಿದ್ದು, 12 ಗಂಟೆಗೆ ಸ್ವಾಮಿಗೆ ದೊಡ್ಡ ಎಡೆ ಪೂಜೆ, 12.20ಕ್ಕೆ ಸಾಮೂಹಿಕ ವಿವಾಹಗಳು ಜರುಗಲಿವೆ.

ಬಳಿಕ ಹಮ್ಮಿಕೊಂಡಿರುವ ಧರ್ಮಸಭೆಯಲ್ಲಿ ಕಾಗಿನೆಲೆ ಕನಕ ಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಯಾದವ ಗುರುಪೀಠದ ಶ್ರೀ ಯಾದವಾನಂದ ಸ್ವಾಮೀಜಿ, ರಟ್ಟಿಹಳ್ಳಿಯ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ, ಹದಡಿ ಮಠದ ಶ್ರೀ ಸದ್ಗುರು ಮುರುಳೀಧರ ಸ್ವಾಮೀಜಿ, ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗಿನಿ ಬಿ.ಕೆ. ಶಾಂತಜೀ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಎಸ್.ಜಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

ಅಧ್ಯಕ್ಷತೆ ಎಸ್.ಜಿ. ಬಸವರಾಜಪ್ಪ, ಉದ್ಘಾ ಟನೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮುಖ್ಯ ಅತಿಥಿ ಗಳಾಗಿ ಬಿ.ಪಿ. ಹರೀಶ್, ಎಸ್.ರಾಮಪ್ಪ, ಹೆಚ್.ಎಸ್. ಶಿವಶಂಕರ್, ನಂದಿಗಾವಿ ಶ್ರೀನಿವಾಸ್, ಡಾ. ರಶ್ಮಿ ವೈ. ನಾಗಪ್ಪ, ಎಂ. ನಾಗೇಂದ್ರಪ್ಪ, ಜಿ.ಬಿ. ವಿನಯ್‌ಕುಮಾರ್, ಚಂದ್ರಶೇಖರ್ ಪೂಜಾರ್, ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ. ಎಂ. ವಾಗೀಶ್ ಸ್ವಾಮಿ ಮತ್ತಿತರರು ಉಪಸ್ಥಿತರಿರುವರು.

## ಇಂದಿನಿಂದ ಓಶೋ ಧ್ಯಾನ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಓಶೋ ಧ್ಯಾನ ಶಿಬಿರವನ್ನು ಇಂದಿನಿಂದ ಇದೇ ದಿನಾಂಕ 29ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30ರವರೆಗೆ ದಾವಾಣಗೆರೆಯ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

# ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲಾ ಎಂಬ ಮಾತು ಭಾಷಣಕ್ಕೆ ಸೀಮಿತ



**ಲೋಕಿಕೆರೆ ನಾಗರಾಜ್ ವಿಷಾದ**

ದಾವಣಗೆರೆ, ಡಿ. 26 - ರಾಷ್ಟ್ರೀಯ ರೈತರ ದಿನವನ್ನು ಬಹಳ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು. ಆದರೆ ರಾಜ್ಯ ಸರ್ಕಾರ ರೈತರ ದಿನಾಚರಣೆಗೆ ಮಹತ್ವ ನೀಡದಿರುವುದು ದುರದೃಷ್ಟಕರ. ರೈತ ದೇಶದ ಬೆನ್ನೆಲುಬು, ರೈತ ಅನ್ನದಾತ, ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲಾ ಎಂಬ ಮಾತುಗಳು ಭಾಷಣಗಳಿಗೆ ಮಾತ್ರ ಸೀಮಿತವಾಗಿವೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ವಿಷಾದ ವ್ಯಕ್ತಪಡಿಸಿದರು.

ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ರಾಷ್ಟ್ರೀಯ ರೈತರ ದಿನಾಚರಣೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೈತ ಪರ ಹೋರಾಟದಲ್ಲಿ ಕೋಳೇನಹಳ್ಳಿ ಬಿ. ಎಂ. ಸತೀಶ್ ಅವರ ಶ್ರಮ, ಶ್ರದ್ಧೆ ಶ್ಲಾಘನೀಯವಾದದ್ದು ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ರಾಜಶೇಖರ್ ನಾಗಪ್ಪನವರು ಮಾತನಾಡಿ, ನಮ್ಮ ಪಕ್ಷದ ಮುಖಂಡರಾಗಿರುವ ಸತೀಶ್ ಮಾಜಿ ಎಪಿಎಂಸಿ ಅಧ್ಯಕ್ಷರಾಗಿದ್ದವರು. ಇತ್ತೀಚೆಗೆ ಎಪಿಎಂಸಿಯಲ್ಲಿ ಭತ್ತದ ಖರೀದಿ ವಹಿವಾಟು ಇ-ಟೆಂಡರ್ ಮೂಲಕ ಆಗುವಂತೆ ಆಗ್ರಹಿಸಿ, ಜಾರಿ ಮಾಡಿಸಿ, ರೈತರಿಗೆ ಅನುಕೂಲ ಮಾಡಿದ್ದಾರೆ. ಅವರು ಕೃಷಿ ಮಾರುಕಟ್ಟೆ ತಜ್ಞರೆಂದು ಬಣ್ಣಿಸಿದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೆಬಾಳ್ ರವರು ಮಾತನಾಡಿ, ಎಲ್ಲಾ ಕನ್ನಡ ಪರ ಸಂಘಟನೆಗಳು ಒಂದಾಗಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಿದಂತೆ, ಎಲ್ಲಾ ರೈತ ಪರ ಸಂಘಟನೆಗಳು, ಮುಖಂಡರು ಒಂದಾಗಿ ರಾಷ್ಟ್ರೀಯ ರೈತರ ದಿನಾಚರಣೆ ಆಚರಿಸಬೇಕು ಎಂದು ಕರೆ ಕೊಟ್ಟರು.

ಈ ಸಂದರ್ಭದಲ್ಲಿ ರೈತ ಮುಖಂಡ ಕೋಳೇನಹಳ್ಳಿ ಬಿ. ಎಂ. ಸತೀಶ್, ಇತ್ತಿಚೆಗೆ ಜಿಲ್ಲಾ ಕೃಷಿಕ ಸಮಾಜದ ನಿರ್ದೇಶಕರಾಗಿ ಆಯ್ಕೆಯಾಗಿರುವ ಗೋಪನಾಳ್ ಕರಿಬಸಪ್ಪ, ಶಿರಮಗೊಂಡನಹಳ್ಳಿ ಎ. ಎಂ.ಮಂಜುನಾಥ್, ಬೇತೂರು ನಾಗರಾಜ್, ವಿಶ್ವನಾಥ್, ಬೆಳವನೂರು ವಿಶ್ವನಾಥ್, ಕಲ್ಪನಹಳ್ಳಿ ಚಂದ್ರಶೇಖರಪ್ಪ ಉಕ್ಕಿನಗಟ್ಟಿ ಅವರನ್ನು ಸನ್ಮಾನಿಸಲಾಯಿತು.

ಕುಕ್ಕುವಾಡದ ರುದ್ರೇಗೌಡ್ರು, ಅವರಗೊಳ್ಳದ ಷಣ್ಮುಖಯ್ಯ, ಅಣಬೇರು ಶಿವಪ್ರಕಾಶ್, ಬಾತಿ ಬಿ.ಕೆ.ಶಿವಕುಮಾರ, ಕನ್ನಡ ಪರ ಹೋರಾಟಗಾರ ಎನ್.ಹೆಚ್. ಹಾಲೇಶ್, ಬಲ್ಲೂರು ಬಸವರಾಜ, ಕುರ್ಕಿ ರೇವಣಸಿದ್ದಪ್ಪ,ಕೋಳೇನಹಳ್ಳಿ ಕೆ.ಶರಣಪ್ಪ, ಕಬ್ಬೂರು ಶಿವಕುಮಾರ್, ಮಳಲಕೆರೆ ಸದಾನಂದ, ಅಣಬೇರು ನಂದಕುಮಾರ ಮುಂತಾದವರು ಉಪಸ್ಥಿತರಿದ್ದರು.

# ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ ವಿರುದ್ಧ ಹೋರಾಡಬೇಕು

**ನ್ಯಾಯಾಧೀಶ ವಿ.ಎಲ್. ಅಮರ್ ಕರೆ**

ದಾವಣಗೆರೆ, ಡಿ. 26 - ಬಾಲ್ಯ ವಿವಾಹ ಪದ್ಧತಿ, ಬಾಲ ಕಾರ್ಮಿಕ ಪದ್ಧತಿ, ಪೋಕ್ಸೋ ಕಾಯ್ದೆಯ ವಿರುದ್ಧ ಹೋರಾಡುವ ಮನೋಭಾವನೆಯನ್ನು ಮಕ್ಕಳು ಬೆಳೆಸಿಕೊಳ್ಳಬೇಕೆಂದು ಜಿಲ್ಲಾ ನ್ಯಾಯಾಧೀಶರಾದ ವಿ. ಎಲ್. ಅಮರ್ ಕರೆ ನೀಡಿದರು.

ನಗರದ ತರಳಬಾಳು ಬಡಾವಣೆಯ ಮಾಗನೂರು ಬಸಪ್ಪ ಶಾಲಾ ಸಮುಚ್ಚಾಯದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ 'ಮಕ್ಕಳಿಗಾಗಿ ಕಾನೂನು ಅರಿವು-ನೆರವು' ಕಾರ್ಯಕ್ರಮದಲ್ಲಿ ಮಾತನಾಡಿದರು ಕಾನೂನುಗಳ ಅರಿವು-ನೆರವು ಪ್ರತಿಯೊಬ್ಬ ಮಕ್ಕಳ ಆಜನ್ಮಸಿದ್ದ ಹಕ್ಕು ಎಂದರು.

ಬಿ.ಹೆಚ್. ಮಂಜುನಾಥ ಮಾತನಾಡಿ, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು.ಹಾಗಾಗಿ ಸಂವಿಧಾನದ ಪ್ರಸ್ತಾವನೆಯನ್ನು ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಬೇಕೆಂದು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು ಮಾತನಾಡಿ, ಮಕ್ಕಳು ಪ್ರಶ್ನಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಪುಷ್ಪಲತಾ ಅವರು, ಕಾನೂನು ಅರಿವು-ನೆರವು ಕಾರ್ಯಕ್ರಮ ಅರ್ಥಪೂರ್ಣವಾದುದು. ಪ್ರತಿಯೊಬ್ಬ ವಿದ್ಯಾರ್ಥಿ ಇದರ ಸದುಪಯೋಗಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಆಡಳಿತಾಧಿಕಾರಿ ಎಸ್.ಆರ್. ಶಿರಗಂಬಿ, ಪ್ರಾಂಶುಪಾಲರಾದ ಎ.ಎನ್. ಕುಸುಮ, ಮುಖ್ಯೋಪಾಧ್ಯಾಯ ಎಸ್. ಮಂಜುನಾಥ್, ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರಸಾದ್ ಬಂಗೇರಾ, ಬಿ.ಆರ್.ಸಿ. ಚೌಡಪ್ಪ, ಸಿಆರ್‌ಪಿ ರಮೇಶ್, ಟಿಪಿಓ ವಿಜಯಕುಮಾರಿ ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಕಿ ಕೆ.ಜಿ. ಭಾರತಿ ಸಂವಿಧಾನ ಪ್ರಸ್ತಾವನೆಯ ಪ್ರಮಾಣ ವಚನ ಬೋಧಿಸಿದರು. ಶಿಕ್ಷಕಿ ಹೆಚ್.ಎಂ. ಅನ್ನಪೂರ್ಣ ಸ್ವಾಗತಿಸಿದರು. ಶಿಕ್ಷಕಿ ಬಿ.ಆರ್. ಅನೂಷಾ ವಂದಿಸಿದರು. ಶಿಕ್ಷಕ ಪಿ. ದಿವಾಕರ್ ನಿರೂಪಿಸಿದರು.

## ಪ್ರಾ.ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಿರ್ದೇಶಕರ ಆಯ್ಕೆ

**ಹರಪನಹಳ್ಳಿ**

ಹರಪನಹಳ್ಳಿ, ಡಿ. 26 - ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ 7 ಜನ ಶಾಸಕರ ಬೆಂಬಲಿಗರು ಮತ್ತು ಕಾಂಗ್ರೆಸ್‌ನ ಇನ್ನೊಂದು ಗುಂಪಿನ ಒಬ್ಬರು ಮಾತ್ರ ಆಯ್ಕೆಯಾಗಿದ್ದಾರೆ. **ಆಯ್ಕೆಯಾದ ನಿರ್ದೇಶಕರು :** ಉದ್ದಾರ ರಂಗಪ್ಪ, ಉಮಾಮಹೇಶ್ವರಿ, ಕಳ್ಳಿಬಾವಿ ಶಫಿವುಲ್ಲಾ, ಗಾಟಿನ ಬಸವರಾಜ, ಎಚ್. ದೇವೇಂದ್ರಪ್ಪ, ನಾಲ್ಬಂದಿ ನಿಸಾರ, ಕೆ. ಮಹಬೂಬ್ ಬಾಷಾ, ಜೋಗಿನ ಜಯಶ್ರೀ.


## ಮುದಹದಡಿ ಗ್ರಾಮ ಪಂಚಾಯಿತಿ ಕಾರ್ಯಾಲಯ
## ಮುದಹದಡಿ.

**ಸಂಖ್ಯೆ : ಗ್ರಾ.ಪಂ. ಮು/ಈಟೆಂಡರ್/2024-25** **ದಿನಾಂಕ : 24.12.2024**

### ಈ ಪ್ರಕ್ಯೂರ್‌ಮೆಂಟ್ ಮೂಲಕ ಈ ಟೆಂಡರ್ ಪ್ರಕಟಣೆ

ಮದಹದಡಿ ಗ್ರಾಮ ಪಂಚಾಯಿತಿಯಲ್ಲಿ ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ 2024-25ನೇ ಸಾಲಿನ ಮುದಹದಡಿ ಗ್ರಾಮ ಪಂಚಾಯಿತಿ 15ನೇ ಹಣಕಾಸು ಯೋಜನೆ ಕ್ರಿಯಾ ಯೋಜನೆಯ ಅಡಿಯಲ್ಲಿ ಮುದಹದಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಅಗತ್ಯ ಕುಡಿಯುವ ನೀರಿನ ಸಾಮಗ್ರಿ ಖರೀದಿ, ಒಟ್ಟು ಮೊತ್ತ 700000 ರೂಗಳಿಗೆ, ಬೀದಿ ದೀಪ ರಿಪೇರಿ ಖರೀದಿ ಮತ್ತು ನಿರ್ವಹಣೆ ಒಟ್ಟು ಮೊತ್ತ 480000 ರೂ.ಗಳಿಗೆ ಹಾಗೂ ಮೋಟರ್ ರಿವೈಂಡಿಗ್ ನಿರ್ವಹಣೆ ಒಟ್ಟು ಮೊತ್ತ 200000 ರೂಗಳಿಗೆ, ಕೆಟಿಪಿಪಿ ನಿಯಮಾನುಸಾರ ಇ-ಪ್ರೊಕ್ಯುರ್‌ಮೆಂಟ್ ಮೂಲಕ ಟೆಂಡರ್‌ಗಾಗಿ ಅರ್ಹಟೆಂಡರ್‌ದಾರರು/ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್‌ಗಳನ್ನು ಈ ಕೆಳಗಿನಂತೆ ಆಹ್ವಾನಿಸಲಾಗಿದ್ದು, (ಟೆಂಡರ್ ಸಂಖ್ಯೆ : RDPR/2024-25/IND6269, rdpr/2024-25/se1974, RDPR/2024-25/SE1975) ಸದಿರ ಟೆಂಡರ್‌ಗೆ ಸಂಬಂಧಿಸಿದ ದಾಖಲೆಗಳನ್ನು ಈ ಪ್ರಕ್ಯೂರ್‌ಮೆಂಟ್ ವೆಬ್ ಸೈಟ್ (www.kppp.karnataka.gov.in)ನಿಂದ ದಿನಾಂಕ : 24.12.2024ರಿಂದ 07.01.2025 ಸಾಯಂಕಾಲ 4.00 ಗಂಟೆಯೊಳಗೆ ಡೌನ್‌ಲೋಡ್ ಮಾಡಿಕೊಂಡು ದಿನಾಂಕ : 07.01.2025 ಸಂಜೆ 5.30 ಗಂಟೆಗೆ ವರೆಗೆ ಈ ಟೆಂಡರನ್ನು ಸಲ್ಲಿಸಹುದು. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮುದಹದಡಿ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

### ಟೆಂಡರ್ ವೇಳಾಪಟ್ಟಿ

| | | |
|---|---|---|
| 01) | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1 ಮತ್ತು ಅನುಬಂಧ-2ನ್ನು) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : & ಸಮಯ. | ದಿನಾಂಕ : 24.12.2024 ರಿಂದ 07.01.2025 ರಂದು ಸಾಯಂಕಾಲ 4.00 ಗಂಟೆಯೊಳಗೆ https://kppp.karnataka.gov.in ಮೂಲಕ |
| 02) | ಇ-ಪೋರ್ಟಲ್‌ನಲ್ಲಿ ಟೆಂಡರನ್ನು ಇಂಧೀಕರಿಸಲು ಕೊನೆಯ ದಿನಾಂಕ . | ದಿನಾಂಕ : 07.01.2025 ಸಂಜೆ 5.30 ಗಂಟೆಗೆ |
| 03) | ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ/ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. | ದಿನಾಂಕ : 09.01.2025 ಬೆಳಿಗ್ಗೆ 11.00 ಗಂಟೆಗೆ |
| 04) | ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ/ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. | ದಿನಾಂಕ : 10.01.2025 ಬೆಳಿಗ್ಗೆ 11.00 ಗಂಟೆಗೆ |

**ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ : www.kppp.karnataka.gov.in ಸಂಪರ್ಕಿಸಬಹುದಾಗಿದೆ.**

ತಮ್ಮ ವಿಶ್ವಾಸಿ, ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ ಮುದಹದಡಿ, ದಾವಣಗೆರೆ ತಾಲ್ಲೂಕು, ಜಿಲ್ಲೆ


# 2025ರಲ್ಲಿ ಭಾರತದ ಆಗಸ ಬೆಳಗಲಿರುವ ಇನ್ನಷ್ಟು ವಿಮಾನಗಳು



ನವದೆಹಲಿ, ಡಿ. 26 - ವಿಮಾನಯಾನ ಸಂಸ್ಥೆಗಳ ವಿಲೀನ ಹಾಗೂ ವಿಸ್ತರಣೆಗಳ ಕಾರಣದಿಂದಾಗಿ 2025ರಲ್ಲಿ ಭಾರತದ ವಿಮಾನಯಾನ ವಲಯ ಇನ್ನಷ್ಟು ಬೆಳವಣಿಗೆ ಕಾಣಲಿದೆ. ಆದರೆ ಪೂರೈಕೆ ಜಾಲದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ.

2025ರಲ್ಲಿ ಭಾರತ ಹೊಸ ವಿಮಾನ ನಿಲ್ದಾಣಗಳನ್ನೂ ಕಾಣಲಿದೆ. ಈ ನಡುವೆಯೇ ಪೈಲೆಟ್‌ಗಳ ಬಳಲುವಿಕೆ ಹಾಗೂ ಇಂಗಾಲ ತ್ಯಾಜ್ಯ ಕಡಿಮೆ ಮಾಡುವ ಸಮಸ್ಯೆಗಳ ಎದುರಿಸಲು ಪ್ರಮುಖವಾಗಿ ಗಮನ ಹರಿಸಬೇಕಿದೆ.

2024ರಲ್ಲಿ ಎರಡು ವಿಮಾನಯಾನ ಸಂಸ್ಥೆಗಳು ಅಂತ್ಯಗೊಂಡಿದ್ದವು. ಇನ್ನೊಂದು ವಿಮಾನಯಾನ ಸಂಸ್ಥೆ ಇದೇ ಹಾದಿಯಲ್ಲಿ ಸಾಗಿದೆ. ಈ ನಡುವೆ ಒಂದೇ ದಿನ 5 ಲಕ್ಷಕ್ಕೂ ಹೆಚ್ಚು ಜನರು ಪ್ರಯಾಣಿಸಿದ ದಾಖಲೆ ಸ್ಥಾಪಿಸಲಾಗಿದೆ. ಇಷ್ಟರ ನಡುವೆಯೂ ವಿಮಾನಯಾನ ದರಗಳು ಏರಿಕೆಯಾಗಿವೆ. 999 ಹುಸಿ ಬಾಂಬ್ ಬೆದರಿಕೆಗಳು ಬಂದಿದ್ದು ವಿಮಾನಯಾನ ಸಂಸ್ಥೆಗಳಿಗೆ ಇನ್ನೊಂದು ತಲೆನೋವಾಗಿತ್ತು.

ಮಾರ್ಚ್ 2025ರ ವೇಳೆಗೆ ದೇಶೀಯವಾಗಿ ಪ್ರಯಾಣಿಕರ ಸಂಖ್ಯೆ 170 ದಶಲಕ್ಷದವರೆಗೆ ತಲುಪುವ ನಿರೀಕ್ಷೆ ಇದೆ. ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ದೊಡ್ಡ ಗಾತ್ರ ವಿಮಾನದ ಕಡೆ ಹೆಚ್ಚಿನ ಆಸಕ್ತಿ ಕಂಡು ಬರುತ್ತಿದೆ.

ದೂರದ ಪ್ರಯಾಣಕ್ಕೆ ನೇರ ಮಾರ್ಗ ಕಲ್ಪಿಸುವುದು ಹಾಗೂ ಭಾರತವನ್ನು ಜಾಗತಿಕ ವಿಮಾನಯಾನ ತಾಣ ಮಾಡುವುದು ಮಹತ್ವಾಕಾಂಕ್ಷೆಯಾಗಿದೆ.

ಭಾರತದ ವಾಯುಯಾನ ಮಾರುಕಟ್ಟೆ ವಿಶೇಷ ಅವಕಾಶಗಳನ್ನು ಹೊಂದಿದೆ ಎಂದು ಆಕಾಶ ಏರ್ ಮುಖ್ಯಸ್ಥ ವಿನಯ್ ದುಬೆ ಹೇಳಿದ್ದಾರೆ. ಭಾರತೀಯ ವಿಮಾನಯಾನ ಸಂಸ್ಥೆಗಳು ಬೃಹತ್ ಅವಕಾಶ ಹೊಂದಿವೆ ಎಂದು ಐಎಟಿಎ ಮುಖ್ಯಸ್ಥ ವಿಲ್ಲಿ ವಾಲ್ಸ್ ಅಭಿಪ್ರಾಯಪಟ್ಟಿದ್ದಾರೆ.

ಭಾರತೀಯ ವಿಮಾನಯಾನ ಸಂಸ್ಥೆಗಳು ಈಗ 800ಕ್ಕೂ ಹೆಚ್ಚು ವಿಮಾನಗಳನ್ನು ಹೊಂದಿವೆ. ಇವುಗಳಲ್ಲಿ 60 ಬೃಹತ್ ಗಾತ್ರದವು ಹಾಗೂ ಪ್ರಸಕ್ತ 157 ವಿಮಾನ ನಿಲ್ದಾಣಗಳು ಕಾರ್ಯ ನಿರ್ವಹಿಸುತ್ತಿವೆ.

ಕಳೆದ ನವೆಂಬರ್ 12ರಲ್ಲಿ ಏರ್ ಇಂಡಿಯಾ ಹಾಗೂ ವಿಸ್ತಾರ ವಿಮಾನಯಾನ ಸಂಸ್ಥೆಗಳ ವಿಲೀನ ಪೂರ್ಣಗೊಂಡಿತ್ತು. ಈ ವಿಮಾನಯಾನ ಸಂಸ್ಥೆಯು ದಿನಕ್ಕೆ 1.2 ಲಕ್ಷ ಪ್ರಯಾಣಿಕರ ಸಾಮರ್ಥ್ಯ ಹೊಂದಿದೆ ಹಾಗೂ 90ಕ್ಕೂ ಹೆಚ್ಚು ತಾಣಗಳನ್ನು ಸಂಪರ್ಕಿಸುತ್ತದೆ. ಇದಕ್ಕೂ ಮುಂಚೆ ಏರ್‌ಇಂಡಿಯಾ ಎಕ್ಸ್‌ಪ್ರೆಸ್ ಹಾಗೂ ಎಐಎಸ್ ಕನೆಕ್ಟ್ ವಿಮಾನಯಾನ ಸಂಸ್ಥೆಗಳು ವಿಲೀನಗೊಂಡಿದ್ದವು. ಇದರಿಂದಾಗಿ ಟಾಟಾ ಸಮೂಹವು ಪೂರ್ಣ ಸೇವೆಯ ಹಾಗೂ ಕಡಿಮೆ ವೆಚ್ಚದ ವಿಮಾನಯಾನ ಸಂಸ್ಥೆ ಹೊಂದಿದಂತಾಗಿದೆ. ಭಾರತೀಯತೆ ಹೊಂದಿರುವ ವಿಶ್ವದರ್ಜೆಯ ವಿಮಾನಯಾನ ಸಂಸ್ಥೆಯಾಗಿ ಬೆಳೆಯಲು ಟಾಟಾ ಸಮೂಹ ಉದ್ದೇಶಿಸಿದೆ.

ವಿಲೀನದ ಜೊತೆಗೆ 100 ಏರ್‌ಬಸ್ ವಿಮಾನಗಳನ್ನು ಖರೀದಿಸುವುದಾಗಿ ಏರ್ ಇಂಡಿಯಾ ಡಿಸೆಂಬರ್ 09ರಂದು ಪ್ರಕಟಿಸಿದೆ. ಇದರಲ್ಲಿ 10 ದೊಡ್ಡ ಗಾತ್ರದ ಎ 350 ವಿಮಾನಗಳು ಸೇರಿವೆ. ಕಳೆದ ವರ್ಷ ಏರ್‌ಬಸ್ ಹಾಗೂ ಬೋಯಿಂಗ್ ಕಂಪನಿಗಳಿಂದ 470 ವಿಮಾನಗಳನ್ನು ಖರೀದಿಸಲು ಕಂಪನಿ ನಿರ್ಧರಿಸಿತ್ತು.

ದೇಶದ ಅತಿ ದೊಡ್ಡ ವಿಮಾನಯಾನ ಸಂಸ್ಥೆಯಾದ ಇಂಡಿಗೋ ತನ್ನ ಕೆಲ ಆಯ್ದ ಮಾರ್ಗಗಳಲ್ಲಿ ಬಿಸಿನೆಸ್ ಕ್ಲಾಸ್ ಆರಂಭಿಸಿದೆ. ಸಂಸ್ಥೆಯ ಅಂತರರಾಷ್ಟ್ರೀಯ ವಿಮಾನಯಾನ ಮಾರ್ಗಗಳಲ್ಲಿಯೂ ಸಹ ವಿಸ್ತಾರಗೊಳ್ಳುತ್ತಿದೆ. ಕಳೆದ ಮೇ ತಿಂಗಳಲ್ಲಿ ಕಂಪನಿಯು 30 ಬೃಹತ್ ವಿಮಾನಗಳ ಖರೀದಿಗೆ ಆದೇಶ ಹೊರಡಿಸಿತ್ತು. ವಿಮಾನಯಾನ ಸಂಸ್ಥೆಯು ಸುಮಾರು ಸಾವಿರ ವಿಮಾನಗಳ ಖರೀದಿ ಗುರಿ ಹೊಂದಿದೆ.

ಇಷ್ಟಾದರೂ ಪೂರೈಕೆ ಜಾಲದ ಸಮಸ್ಯೆಗಳು ವಿಮಾನಯಾನ ಸಂಸ್ಥೆಗಳಿಗೆ ಹೊಸ ವಿಮಾನಗಳನ್ನು ಪೂರೈಸಲು ತೊಡಕಾಗಿದೆ. ಬೋಯಿಂಗ್ ಕಂಪನಿಯು ಸಮಸ್ಯೆಗಳನ್ನು ಎದುರಿಸುತ್ತಿದೆ. ಇದರ ಜೊತೆಗೆ ಇಂಜಿನ್ ಸಮಸ್ಯೆಗಳು ಸಹ ವಿಮಾನಯಾನ ಸಂಸ್ಥೆಗಳಿಗೆ ತಲೆ ನೋವಾಗಿದೆ.

# ರಾಜಕೀಯ ಜೀವನದಲ್ಲಿ ಡಾ. ಮನಮೋಹನ ಸಿಂಗ್

2004 ರಿಂದ 2014 ರವರೆಗೆ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಮನಮೋಹನ್ ಸಿಂಗ್ ಅವರು ಈ ವರ್ಷದ ಆರಂಭದಲ್ಲಿ ರಾಜ್ಯಸಭೆಯಿಂದ ನಿವೃತ್ತರಾಗಿದ್ದರು. ಸಿಂಗ್ ಅವರು ಮೇ 22, 2004 ರಂದು ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು ಮತ್ತು 2009ರಲ್ಲಿ ಅದೇ ದಿನಾಂಕದಂದು ಮತ್ತೊಮ್ಮೆ ಪ್ರಧಾನಿಯಾಗಿ 2 ನೇ ಅವಧಿಗೆ ಪ್ರಮಾಣವಚನ ಸ್ವೀಕರಿಸಿದ್ದರು.

ಸಿಂಗ್ ಅವರ ರಾಜಕೀಯ ಜೀವನು 1991ರಲ್ಲಿ ಅವರು ರಾಜ್ಯಸಭೆಗೆ ಪ್ರವೇಶಿಸಿದಾಗ ಪ್ರಾರಂಭವಾಯಿತು. ಕೇವಲ ನಾಲ್ಕು ತಿಂಗಳ ನಂತರ, ಅಂದಿನ ಪ್ರಧಾನಿ ಪಿವಿ ನರಸಿಂಹ ರಾವ್ ಸರ್ಕಾರದಲ್ಲಿ ಕೇಂದ್ರ ಹಣಕಾಸು ಸಚಿವರಾಗಿ ನೇಮಕಗೊಂಡರು, ಇದು ಭಾರತದ ಆರ್ಥಿಕತೆಯಲ್ಲಿ ಪರಿವರ್ತನೆಗೆ ಕಾರಣವಾಗಿತ್ತು.



1990 ರಲ್ಲಿ ಆರ್ಥಿಕ ಸುಧಾರಣೆಗಳು, ಉದಾರೀಕರಣ ನೀತಿಗಳನ್ನು ಜಾರಿಗೆ ತರುವ ಮೂಲಕ ಭಾರತದ ಅರ್ಥ ವ್ಯವಸ್ಥೆಗೆ ಮನಮೋಹನ್ ಸಿಂಗ್ ಹೊಸ ದಿಕ್ಕು ತೋರಿಸಿ ದ್ದರ ಕೀರ್ತಿ ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ.

6 ಅವಧಿಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಸಿಂಗ್, ಒಮ್ಮೆಯೂ ಲೋಕಸಭೆ ಸದಸ್ಯರಾಗಿ ಆಯ್ಕೆಯಾಗಲಿಲ್ಲ. 1999 ರಲ್ಲಿ ದಕ್ಷಿಣ ದೆಹಲಿ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದ ಸಿಂಗ್, ಬಿಜೆಪಿಯ ವಿಜಯ್ ಕುಮಾರ್ ಮಲ್ಹೋತ್ರ ವಿರುದ್ಧ ಪರಾಭವಗೊಂಡಿದ್ದರು.

ಅಸ್ಸಾಂ ನಿಂದ 5 ಬಾರಿ ಹಾಗೂ ಅಲ್ಪಾವಧಿಗೆ ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು. 1998 ರಿಂದ 2004 ರವರೆಗೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಹೊಂದಿದ್ದರು.

**ಆರ್.ಬಿ.ಐ. ಗವರ್ನರ್ ಆಗಿ ಸೇವೆ ಸಲ್ಲಿಸಿದ್ದ ಮನಮೋಹನ್ ಸಿಂಗ್** : 1932 ರ ಸೆ.26 ರಂದು ಅಂದಿನ ಅವಿಭಜಿತ ಭಾರತದಲ್ಲಿ ಜನಿಸಿದ ಡಾ. ಮನಮೋಹನ್ ಸಿಂಗ್, 1972 ರಲ್ಲಿ ಹಣಕಾಸು ಸಚಿವಾಲಯದಲ್ಲಿ ಮುಖ್ಯ ಆರ್ಥಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು. ಅಷ್ಟೇ ಅಲ್ಲದೇ 1982-1985 ಅವಧಿಯಲ್ಲಿ ಆರ್ ಬಿಐ ಗವರ್ನರ್ ಆಗಿಯೂ ಕಾರ್ಯನಿರ್ವಹಿಸಿದ್ದರು.

# ಮಸೂರು ರಸ್ತೆಗೆ ಸಿದ್ಧರಾಮಯ್ಯ ಹೆಸರು : ಸಿಎಂ ಸಮರ್ಥನೆ

ಬೆಂಗಳೂರು, ಡಿ. 26- ಮೈಸೂರು ಮಹಾನಗರ ಪಾಲಿಕೆ ಕೆಆರ್‌ಎಸ್ ರಸ್ತೆಗೆ ಮರುನಾಮಕರಣ ಮಾಡಿ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂಬುದಾಗಿ ಹೆಸರು ಇಡುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ.

ಈ ರಸ್ತೆಗೆ ಸದ್ಯ, ರಾಣಿಯರ (ಪ್ರಿನ್ಸೆಸ್) ಹೆಸರಿದೆ, ಅದನ್ನು ಪಾಲಿಕೆ ಬದಲಾವಣೆ ಮಾಡಿ ಸಿದ್ದರಾಮಯ್ಯ ಹೆಸರನ್ನು ಇಟ್ಟಿದೆ.

ಪಾಲಿಕೆ ನಿರ್ಧಾರವನ್ನು ಬಿಜೆಪಿ ಹಾಗೂ ಜೆಡಿಎಸ್ ವಿರೋಧಿಸಿದ್ದರೆ, ಮಾಜಿ ಸಂಸದ ಹಾಗೂ ಬಿಜೆಪಿ ನಾಯಕ ಪ್ರತಾಪ್ ಸಿಂಹ ಸಮರ್ಥಿಸಿದ್ದಾರೆ.

ರಸ್ತೆ ಮರುನಾಮಕರಣಕ್ಕೆ ಸಂಬಂಧಿಸಿದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಬಿಜೆಪಿ ಅವರಿಗೆ ಬೇರೆ ಕೆಲಸವೇ ಇಲ್ಲ, ಅವರಿಗೆ ವಿರೋಧ ಮಾಡುವುದನ್ನು ಬಿಟ್ಟರೆ, ಜನಪರ ಕೆಲಸ ಮಾಡುವ ಅಭ್ಯಾಸವಿಲ್ಲ.

ಅವರ ಪಕ್ಷದ ಮಾಜಿ ಸಂಸದ ಪ್ರತಾಪ್ ಸಿಂಹ ಅವರೇ ನಗರಪಾಲಿಕೆ ನಿರ್ಧಾರವನ್ನು ಸಮರ್ಥಿಸಿದ್ದಾರೆ, ಇದಕ್ಕೆ ನೀವು ಏನು ಹೇಳುತ್ತೀರಿ ಎಂದು ಪ್ರಶ್ನಿಸಿದರು. ಪಾಲಿಕೆ ಕಾಲಾನುಕಾಲಕ್ಕೆ ರಸ್ತೆಗಳ ಹೆಸರನ್ನು ಜನಾಭಿಪ್ರಾಯದಂತೆ ಬದಲಾವಣೆ ಮಾಡುತ್ತದೆ, ಆ ವಿಷಯದಲ್ಲಿ ನಾವು ಮೂಗು ತೂರಿಸುವುದಿಲ್ಲ.

ಅವರ ನಿರ್ಧಾರದ ಬಗ್ಗೆ ನನಗೆ ತಿಳಿಯದು, ನಾನು ಅದರಲ್ಲಿ ಹಸ್ತಕ್ಷೇಪವನ್ನೂ ಮಾಡಿಲ್ಲ, ಬಿಜೆಪಿ ಅವರಿಗೆ ವಿರೋಧ ಮಾಡುವುದೊಂದೇ ಅಭ್ಯಾಸ ಎಂದು ಕಿಡಿಕಾರಿದರು.

ಮೈಸೂರು ನಗರದ ಕೆಆರ್‌ಎಸ್ ರಸ್ತೆಯ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಸ್ಥಾನದಿಂದ ಹೊರವರ್ತುಲ ರಸ್ತೆ ಜಂಕ್ಷನ್‌ವರೆಗಿನ ರಸ್ತೆಯನ್ನು 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ನಾಮಕರಣ ಮಾಡಲು ಪಾಲಿಕೆ ಮುಂದಾಗಿ, ಸಾರ್ವಜನಿಕರ ಅಭಿಪ್ರಾಯಕ್ಕೆ ಆಹ್ವಾನಿಸಿದೆ.

ಇದರ ಬೆನ್ನಲ್ಲೇ 'ಮಹಾರಾಣಿ ಕೆಂಪ ನಂಜಮ್ಮಣ್ಣಿ ಚೆಲುವಮ್ಮಣ್ಣಿ' ಅವರ ಹೆಸರಿನಲ್ಲಿರುವ ರಸ್ತೆಗೆ ಸಿದ್ದರಾಮಯ್ಯ ಹೆಸರಿಡಲು ಮುಂದಾಗಿರುವುದು ಭಾರೀ ವಿವಾದಕ್ಕೆ ಕಾರಣವಾಗಿದೆ. ಪಾಲಿಕೆಯ ಈ ನಿರ್ಧಾರವನ್ನು ರಾಜಮನೆತನದವರೂ ವಿರೋಧಿಸಿದ್ದು, ಹೆಸರು ಬದಲಾವಣೆ ಮಾಡದಂತೆ ಒತ್ತಾಯಿಸಿದ್ದಾರೆ.

## ಪಿಎಲ್‌ಡಿ ನೂತನ ಕಟ್ಟಡ

**(1ನೇ ಪುಟದಿಂದ)** ಮಂಡಳಿಯವರು ಕಟ್ಟಡ ನಿರ್ಮಾಣವನ್ನು ತ್ವರಿತಗತಿಯಲ್ಲಿ ಕೈಗೊಂಡು, ಶೀಘ್ರವಾಗಿ ಪೂರ್ಣಗೊಳಿಸ ಬೇಕೆಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಶೆಟ್ಟಿ, ಮಹಾನಗರಪಾಲಿಕೆ ಮಹಾಪೌರರಾದ ಕೆ. ಚಮನ್ ಸಾಬ್, ಉಪ ಮಹಾಪೌರರಾದ ಸೋಗಿ ಶಾಂತಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ಮತ್ತಿತರರು ಬ್ಯಾಂಕ್ ನೂತನ ಕಟ್ಟಡ ಶೀಘ್ರವಾಗಿ ಪೂರ್ಣಗೊಂಡು, ರೈತರಿಗೆ ಇನ್ನೂ ಹೆಚ್ಚಿನ ಸೇವೆಯನ್ನು ಒದಗಿಸಲೆಂದು ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಆರ್.ಜಿ. ಕುಬೇಂದ್ರಪ್ಪ ಅವರು ವಹಿಸಿದ್ದರು.

## ಸಿಂಗ್ ಇನ್ನಿಲ್ಲ

**(1ನೇ ಪುಟದಿಂದ)** ವ್ಯವಸ್ಥೆಗೆ ಮನಮೋಹನ್ ಸಿಂಗ್ ಹೊಸ ದಿಕ್ಕು ತೋರಿಸಿದ್ದರ ಕೀರ್ತಿ ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ. 6 ಅವಧಿಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಸಿಂಗ್, ಒಮ್ಮೆಯೂ ಲೋಕಸಭೆ ಸದಸ್ಯರಾಗಿ ಆಯ್ಕೆಯಾಗಲಿಲ್ಲ. 1999 ರಲ್ಲಿ ದಕ್ಷಿಣ ದೆಹಲಿ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದ ಸಿಂಗ್, ಬಿಜೆಪಿಯ ವಿಜಯ್ ಕುಮಾರ್ ಮಲ್ಹೋತ್ರ ವಿರುದ್ಧ ಪರಾಭವಗೊಂಡಿದ್ದರು.

# ನಾಲ್ಕು ಪೀಠಗಳನ್ನು ಮಾಡುವ ಸಂಕಲ್ಪ



**(1ನೇ ಪುಟದಿಂದ)** ಹೊರನಾಡು ರೀತಿ ದಾಸೋಹ ನಡೆಸುವ ಸಂಕಲ್ಪ ಹೊಂದಲಾಗಿದ್ದು, ಸಮಾಜದವರು ಪೀಠದ ಸರ್ವಾಂಗೀಣ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

ಪ್ರತಿ ಜಿಲ್ಲೆ, ತಾಲ್ಲೂಕುಗಳಿಗೆ ಸಂಚಾರ ಮಾಡಿ ಸಮಾಜ ಅಧ್ಯಯನ ಮಾಡಿದ್ದೇನೆ. ಅಂಬಿಗರ ಚೌಡಯ್ಯನವರ ಗುರುಪೀಠ ಮುಂದಿನ ದಿನಗಳಲ್ಲಿ ಸಮಾಜಕ್ಕೆ ದೊಡ್ಡ ದಾರಿ ದೀಪ, ಶಕ್ತಿಯಾಗಲಿದ್ದು, ಪೀಠದ ಜಾತ್ರೆ ಎಂದ ಕೂಡಲೇ ಸಮಾಜ ಬಾಂಧವರು ಒಟ್ಟಾಗಿ ಸೇವೆ ಮಾಡುತ್ತಿದ್ದಾರೆ. ಈ ಸಂಸ್ಕೃತಿ ಇನ್ನು ಗಟ್ಟಿಯಾಗಬೇಕು. ಪೀಠದ ಜಾತ್ರಾ ಮಹೋತ್ಸವ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಸ್ವಾಲಂಬನೆಯನ್ನು ಕೊಡಲಿದೆ ಎಂದರು.

ಗುರುಪೀಠದ ಮುಖಾಂತರ ನಾಲ್ಕು ಪೀಠಗಳನ್ನು ಮಾಡುವ ಸಂಕಲ್ಪ ಹೊಂದಿದ್ದು, ಗುರು ಪೀಠದಲ್ಲಿ ಯಾವುದೇ ರೀತಿ ರಾಜಕಾರಣ ಇಲ್ಲ. ಪೀಠದಲ್ಲಿ ಸಮಾಜದ ಪ್ರತಿಯೊಬ್ಬರು ಪೀಠದ ಹಕ್ಕುದಾರರಾಗಿದ್ದು, ಯಾರು ಸೇವೆ ಮಾಡುತ್ತಾರೋ ಅವರದೇ ಮಠವಾಗಿದೆ. ಜಾತ್ರಾ ಮಹೋತ್ಸವಕ್ಕೆ ಸಮಾಜದ ಪ್ರತಿಯೊಬ್ಬರ ಜೋಳಿಗೆಯಿಂದ ಸೇವೆ ಮುಟ್ಟಬೇಕು. ಪೀಠದ ಜಾತ್ರೆಯ ಬಗ್ಗೆ ರಾಜ್ಯದ ಸಮಾಜ ಬಾಂಧವರೆಲ್ಲ ಪ್ರಚಾರ ಮಾಡಬೇಕು ಎಂದರು.

ದಾವಣಗೆರೆ ಜಿಲ್ಲೆಯ ಸಮಾಜದ ಮುಖಂಡರು, ಬಾಂಧವರು ಬಸ್ ವ್ಯವಸ್ಥೆ, ಆಹಾರ ಧಾನ್ಯಗಳು, ಹಣವನ್ನು ದೇಣಿಗೆ ನೀಡುವ ಘೋಷಣೆ ಮಾಡುವ ಮೂಲಕ ಜಾತ್ರಾ ಮಹೋತ್ಸವ ಯಶಸ್ವಿಗೆ ತಾವು ಕೂಡ ಸಹಕರಿಸುವುದಾಗಿ ತಿಳಿಸಿದರು.

ಸಮಾಜದ ಜಿಲ್ಲಾಧ್ಯಕ್ಷ ಬಿ.ಕೆ. ಮಂಜುನಾಥ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾರ್ಥನೆಯನ್ನು ಸಲಗನಹಳ್ಳಿ ಶಿವಣ್ಣ ನೆರವೇರಿಸಿದರು. ನೌಕರರ ಸಂಘದ ಜಿಲ್ಲಾಧ್ಯಕ್ಷ ಮಹಾಂತೇಶ್ ನಿಟ್ಟೂರು ನಿರೂಪಿಸಿ ವಂದಿಸಿದರು.

ಈ ಸಂದರ್ಭದಲ್ಲಿ ಗುರಪೀಠದ ಸಮಿತಿಯ ಉಪಾಧ್ಯಕ್ಷ ಪುಟಗನಾಳ್ ಮಂಜುನಾಥ್, ಜಿಲ್ಲಾ ಸಂಘದ ಉಪಾಧ್ಯಕ್ಷ ವಾಗೀಶ್, ಚಂದ್ರಪ್ಪ, ರವಿಕುಮಾರ್, ಪುಟಗನಾಳ್ ಸಿದ್ದೇಶ್, ಬೇತೂರು ಸುರೇಶ್, ಅಣಜಿ ಪರಶುರಾಮ್, ಕೆಂಚನಹಳ್ಳಿ ಮಹಂತೇಶ್, ನಿಂಗರಾಜ್ ಹಾವನೂರು, ಸೋಮಣ್ಣ ಸೇರಿದಂತೆ ಇತರರು ಇದ್ದರು.

# ಒಂದು ವರ್ಷ ಬೃಹತ್ ಜನಾಂದೋಲನ

**(1ನೇ ಪುಟದಿಂದ)** ಆಂದೋಲನ ಮಾಡಲು ತೀರ್ಮಾನಿಸಲಾಗಿದೆ.

2024ರ ಡಿ.27ರಿಂದ 2026ರ ಜ.26ರವರೆಗೆ ಪಾದಯಾತ್ರೆಗಳು ನಡೆಯಲಿವೆ. ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಕ್ಯಾಂಪೇನ್ ನಡೆಯಲಿದೆ. ರಾಜ್ಯ ನಾಯಕರು, ರಾಷ್ಟ್ರ ನಾಯಕರು ಎಲ್ಲರೂ ಈ ಜನಾಂದೋಲನ ದಲ್ಲಿ ಭಾಗಿಯಾಗುತ್ತಾರೆ. ಪಾದಯಾತ್ರೆಗಳು, ಸಮಾವೇಶಗಳು, ವಿಚಾರ ಸಂಕಿರಣಗಳು ನಡೆಯಲಿವೆ. ಇದರ ಜೊತೆಗೆ ಪಕ್ಷವನ್ನು ಬಲಿಷ್ಠಗೊಳಿಸಲು ಸಂಘಟನೆ ಮಾಡಲಾಗುವುದು ಎಂದು ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ ಮಾತನಾಡಿ, ಮುಂದಿನ ಫೆಬ್ರುವರಿಯಿಂದ ನವೆಂಬರ್ ವರೆಗೆ ಯಾವುದೇ ಚುನಾವಣೆ ಇಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡಲಿದ್ದೇವೆ. ಬ್ಲಾಕ್, ಮಂಡಳ, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಸಂಘಟನೆ ನಡೆಯಲಿದೆ. ಒಂದೇ ವರ್ಷದಲ್ಲಿ ಸಂಘಟನೆ ಮುಗಿಸಲಿದ್ದೇವೆ. ನಾಳೆಯಿಂದ ಈ ಸಮಾವೇಶ ಆರಂಭವಾಗಿ, 2026ರ ಜನವರಿ 26ರಂದು ಅಂಬೇಡ್ಕರ್ ಅವರ ಜನ್ಮಸ್ಥಳದಲ್ಲಿ ಸಮಾವೇಶ ಮುಕ್ತಾಯ ಆಗಲಿದೆ ಎಂದು ಮಾಹಿತಿ ನೀಡಿದರು.

ಮುಂದಿನ ಒಂದು ವರ್ಷ ಸಂವಿಧಾನ ಉಳಿಸಿ ಪಾದಯಾತ್ರೆ ನಡೆಯುತ್ತದೆ. ಪ್ರಸ್ತುತ ಸಮಸ್ಯೆಗಳನ್ನು ಇಟ್ಟುಕೊಂಡು ಪ್ರತಿ ಹಳ್ಳಿಯಲ್ಲಿ ಈ ಪಾದಯಾತ್ರೆ ಹೋಗಲಿದ್ದೇವೆ. ಭಾರತ್ ಜೋಡೋ ಯಾತ್ರೆಯಿಂದ ಕಾಂಗ್ರೆಸ್ಸಿಗೆ ಸಂಜೀವಿನಿ ಸಿಕ್ಕಿದೆ. ಅದೇ ಮಾದರಿಯಲ್ಲಿ ಈ ಪಾದಯಾತ್ರೆಯೂ ನಡೆಯಲಿದೆ ಎಂದು ವಿವರಿಸಿದರು.

ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶ ನಾಳೆ ಶುರುವಾದರೆ, ಮುಂದಿನ ಇಡೀ ವರ್ಷದವರೆಗೂ ನಡೆಯಲಿದೆ. ಬೆಳಗಾವಿಯಿಂದ ಶುರು ಮಾಡಿ ಇಡೀ ದೇಶಾದ್ಯಂತ ತೆಗೆದುಕೊಂಡು ಹೋಗುತ್ತೇವೆ. ಸಂವಿಧಾನ ಬಚಾವೋ ಪಾದಯಾತ್ರೆ ಮಾಡುತ್ತೇವೆ ಎಂದು ತಿಳಿಸಿದರು.

## ತಪ್ಪು ನಕ್ಷೆಯ ವಿವಾದ

**(1ನೇ ಪುಟದಿಂದ)** ತೆಗೆಯುತ್ತೇವೆ. ಪ್ರತಿಪಕ್ಷಗಳವರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ನಾವು ಈ ದಿನಗಳಲ್ಲಿ ಭಾರತೀಯ ಸಂಪ್ರದಾಯ ಹಾಗೂ ಮೌಲ್ಯಗಳಂತೆ ನಡೆದುಕೊಳ್ಳುತ್ತಿದ್ದೇವೆ ಎಂದು ಹೇಳಿದರು. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಬಿಜೆಪಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಮೊಹಬತ್ ಕಿ ದುಕಾನ್ ಸದಾ ಚೀನಾಗೆ ತೆರೆದಿರುತ್ತದೆ. ಅವರು ಈ ಹಿಂದೆ ದೇಶವನ್ನು ಒಡೆದಿದ್ದಾರೆ, ಮತ್ತೆ ಒಡೆಯಲಿದ್ದಾರೆ ಎಂದು ಹೇಳಿದೆ.

## ಸಾಮೂಹಿಕವಾಗಿ ಪಕ್ಷ ಸಂಘಟನೆ

**(1ನೇ ಪುಟದಿಂದ)** ಅಧ್ಯಕ್ಷರಾಗಿರುವುದಕ್ಕೆ ನಮ್ಮ ಪಕ್ಷಕ್ಕೆ ಹಾಗೂ ಸ್ವಾತಂತ್ರ್ಯ ಚಳವಳಿಗೆ ಮಹತ್ವದ ತಿರುವು ನೀಡಿದೆ

ನವದೆಹಲಿಯಲ್ಲಿ ಅಧಿಕಾರದಲ್ಲಿ ಇರುವವರಿಂದ ಗಾಂಧೀಜಿ ತತ್ವ, ಸಿದ್ಧಾಂತಗಳಿಗೆ ಬೆದರಿಕೆ ಇದೆ. ಅಧಿಕಾರದಲ್ಲಿರುವ ಸಂಘಟನೆಗಳು ಸ್ವಾತಂತ್ರ್ಯಕ್ಕಾಗಿ ಎಂದೂ ಹೋರಾಟ ಮಾಡಲಿಲ್ಲ. ಅಲ್ಲದೆ, ಅವರು ಮಹಾತ್ಮ ಗಾಂಧಿ ಅವರನ್ನು ಕಟುವಾಗಿ ವಿರೋಧಿಸಿದವರು, ಗಾಂಧೀಜಿ ಹತ್ಯೆ ಮಾಡಿದವರನ್ನು ಸಂಭ್ರಮಿಸಿದವರು

ದೇಶದ ವಿವಿಧೆಡೆ ಗಾಂಧಿ ಸಂಘ ಸಂಸ್ಥೆಗಳ ಮೇಲೆ ದಾಳಿ ನಡೆಯುತ್ತಿದ್ದು, ಇಂದು ನಡೆಯುತ್ತಿರುವ ಸಭೆಯನ್ನು 'ನವ ಸತ್ಯಾಗ್ರಹ ಬೈಠಕ್' ಎಂದು ಕರೆದಿರುವುದು ಸೂಕ್ತವಾಗಿದೆ. ಅಂತಹ ಶಕ್ತಿಗಳ ವಿರುದ್ಧ ರಾಜಿಯಾಗದೆ ಹೋರಾಟ ನಡೆಸುವ ನಿರ್ಣಯ ಮಾಡುವುದು ಸಂಕಲ್ಪ ಮತ್ತು ಕರ್ತವ್ಯ' ಎಂದು ಪತ್ರದಲ್ಲಿ ಸೋನಿಯಾ ಗಾಂಧಿ ಹೇಳಿದ್ದಾರೆ.

# ದಕ್ಷಿಣ ಕೊರಿಯಾ ಹಂಗಾಮಿ ಅಧ್ಯಕ್ಷ ಉಚ್ಚಾಟನೆಗೆ ವಿಪಕ್ಷಗಳ ನಿಲುವಳಿ

ಸೋಲ್, ಡಿ. 26- ದಕ್ಷಿಣ ಕೊರಿಯಾದ ಹಂಗಾಮಿ ಅಧ್ಯಕ್ಷ ಹಾಗೂ ಪ್ರಧಾನಮಂತ್ರಿ ಹ್ಯಾನ್ ಡಕ್ ಸೂ ಉಚ್ಚಾಟನೆಗಾಗಿ ಪ್ರತಿಪಕ್ಷಗಳು ನಿಲುವಳಿ ಸಲ್ಲಿಸಿವೆ. ಈಗಾಗಲೇ ಅಧ್ಯಕ್ಷ ಯೂನ್ ಸುಕ್ ಯೋನ್ ಉಚ್ಚಾಟನೆಗಾಗಿ ಪ್ರತಿಪಕ್ಷ ಗಳು ನಿರ್ಣಯ ಜಾರಿಗೆ ತಂದಿದ್ದು, ನ್ಯಾಯಾಲಯದಲ್ಲಿ ಅದರ ಪ್ರಕ್ರಿಯೆಗಳು ನಡೆಯುತ್ತಿವೆ.

ಈಗ ಹಂಗಾಮಿ ಅಧ್ಯಕ್ಷರ ಉಚ್ಚಾಟನೆಗೆ ನಿಲುವಳಿ ಮಂಡಿಸಿರುವುದರಿಂದ ರಾಜಕೀಯ ಬಿಕ್ಕಟ್ಟು ತೀವ್ರವಾಗಿದೆ. ಇದು ಆರ್ಥಿಕತೆಯ ಮೇಲೂ ಪರಿಣಾಮ ಬೀರುತ್ತಿದೆ.

ಅಧ್ಯಕ್ಷ ಯೂನ್ ಸುಕ್ ಯೋನ್ ಅವರ ವಿರುದ್ಧದ ಆರೋಪಗಳ ಬಗ್ಗೆ ಸಂವಿಧಾನಿಕ ನ್ಯಾಯಾಲಯ ಕ್ರಮ ತೆಗೆದುಕೊಳ್ಳಬೇಕಿದೆ. ಈ ನ್ಯಾಯಾಲಯದಲ್ಲಿ ಖಾಲಿ ಇರುವ ಮೂರು ಸ್ಥಾನಗಳನ್ನು ಭರ್ತಿ ಮಾಡಲು ಹಂಗಾಮಿ ಅಧ್ಯಕ್ಷ ಹ್ಯಾನ್ ಡಕ್ ಸೂ ಅವರು ಹಿಂಜರಿಕೆ ತೋರುತ್ತಿದ್ದಾರೆ. ಇದರಿಂದಾಗಿ ಉಚ್ಚಾಟನೆ ಕ್ರಮಕ್ಕೆ ಅಡ್ಡಿಯಾಗಿದೆ ಎಂದು ವಿರೋಧಪಕ್ಷಗಳು ಆಕ್ಷೇಪಿಸಿವೆ.

**ತೀವ್ರವಾದ ರಾಜಕೀಯ ಬಿಕ್ಕಟ್ಟು**

ರಾಷ್ಟ್ರೀಯ ಸದನದಲ್ಲಿ ಪ್ರತಿಪಕ್ಷಗಳು ಮೇಲುಗೈ ಹೊಂದಿವೆ. ಸಂವಿಧಾನಿಕ ನ್ಯಾಯಾಲಯದ ಮೂರು ಹುದ್ದೆಗಳನ್ನು ಭರ್ತಿ ಮಾಡುವಂತೆ ಪ್ರತಿಪಕ್ಷಗಳು ಸದನದಲ್ಲಿ ನಿರ್ಣಯ ಜಾರಿಗೆ ತಂದಿದೆ. ಆದರೆ ಸರ್ವ ಸಮ್ಮತಿ ಇಲ್ಲದೆ ನ್ಯಾಯಾಧೀಶರನ್ನು ನೇಮಕ ಮಾಡುವುದಿಲ್ಲ ಎಂದು ಹ್ಯಾನ್ ಹೇಳಿದ್ದಾರೆ.

ನ್ಯಾಯಾಧೀಶರನ್ನು ತ್ವರಿತವಾಗಿ ನೇಮಕ ಮಾಡಬೇಕು. ನೇಮಕ ಮಾಡದೇ ಇದ್ದರೆ ಅದು ರಾಷ್ಟ್ರೀಯ ಸದನದ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಸಭಾಧ್ಯಕ್ಷ ಹೂವನ್ ಶಿಕ್ ಹೇಳಿದ್ದಾರೆ.

ಯೂನ್ ಅಧ್ಯಕ್ಷ ಸ್ಥಾನದಲ್ಲಿರುವಾಗಲೇ ನ್ಯಾಯಮೂರ್ತಿಗಳನ್ನು ನೇಮಿಸಲು ಹ್ಯಾನ್ ಮುಂದಾಗುವುದು ಸರಿಯಲ್ಲ ಎಂದು ಯೂನ್ ಬೆಂಬಲಿಗರು ಹೇಳುತ್ತಿದ್ದಾರೆ.

ಸಂವಿಧಾನಿಕ ನ್ಯಾಯಾಲಯದಲ್ಲಿ ಒಂಭತ್ತು ನ್ಯಾಯಮೂರ್ತಿ ಹುದ್ದೆಗಳಿವೆ. ಯೂನ್ ಅವರನ್ನು ಉಚ್ಚಾಟಿಸಲು ಕನಿಷ್ಠ 6 ನ್ಯಾಯಮೂರ್ತಿಗಳು ಸಮ್ಮತಿಸಬೇಕಿದೆ. ನಿವೃತ್ತಿಯ ಕಾರಣದಿಂದ ಮೂರು ಹುದ್ದೆಗಳು ಖಾಲಿ ಇವೆ. ಪೂರ್ಣಪೀಠ ರಚನೆಯಾದಲ್ಲಿ ಯೂನ್ ಉಚ್ಚಾಟನೆ ಸುಗಮವಾಗಲಿದೆ ಎನ್ನಲಾಗುತ್ತಿದೆ.

# ಕಚೇರಿಗಳಲ್ಲಿ ಲಂಚದ ಪಟ್ಟಿಯನ್ನಾದರೂ ಪ್ರಕಟಿಸಿ

**(1ನೇ ಪುಟದಿಂದ)** ಸಮಯ ಆರಂಭವಾಗಿ 30 ನಿಮಿಷಗಳ ನಂತರವೂ ಇಂತಹ ಪರಿಸ್ಥಿತಿ ಕಂಡು ಸಚಿವರು ಹೌಹಾರಿದರು.

ಸ್ಥಳದಲ್ಲೇ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯನ್ನು ಸಂಪರ್ಕಿಸಿ ತಾಲ್ಲೂಕು ಮತ್ತು ಎಸಿ ಕಚೇರಿಯ ಪರಿಸ್ಥಿತಿ ವಿವರಿಸಿ ಕ್ರಮ ಜರುಗಿಸುವಂತೆ ಆದೇಶಿಸಿದರು.

ನಂತರ ಸಚಿವರೇ ಖುದ್ದಾಗಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸತ್ತಿದ್ದಾಗ, ಸಿಬ್ಬಂದಿ ಮತ್ತು ಅಧಿಕಾರಿಗಳು ದಢ ದಢನೇ ಕಚೇರಿಗಳಿಗೆ ಧಾವಿಸಿದರು.

ಅವರೆಲ್ಲರನ್ನೂ ಜನರ ಮುಂದೆಯೇ ನಿಲ್ಲಿಸಿಕೊಂಡು ತರಾಟೆಗೆ ತೆಗೆದುಕೊಂಡಿದ್ದಲ್ಲದೆ, ಸಾರ್ವಜನಿಕರನ್ನು ಯಾವ ರೀತಿ ಅಲೆದಾಡಿಸುತ್ತಿದ್ದೀರಿ ಎನ್ನುವುದಕ್ಕೆ ಈ ಮಂದಿಯೇ ಸಾಕ್ಷಿ.

ಅವರನ್ನು ಅಲೆಸುವ ಬದಲು ಯಾವ ಕೆಲಸಕ್ಕೆ ಎಷ್ಟು ರೇಟು, ಯಾವ ಅಧಿಕಾರಿಯ ಪಾಲೆಷ್ಟು ಎಂಬ ಮಾಹಿತಿಯನ್ನು ಬಹಿರಂಗವಾಗಿ ಪ್ರಕಟಿಸಿ ಎಂದಿದ್ದಲ್ಲದೆ, ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಸರ್ಕಾರಿ ಕಚೇರಿಗೆ, ಜನರ ಕೆಲಸಕ್ಕೆ ಟೈಮೇ ಇಲ್ಲ, ನೀವು ಬರುವ ಸಮಯವೇ ಸರ್ಕಾರಿ ಕೆಲಸದ ಸಮಯ ಅಲ್ಲವೇ ಎಂದು ಪ್ರಶ್ನಿಸಿದರು.

ನೀವು ಸರ್ಕಾರದ ವ್ಯವಸ್ಥೆಯಲ್ಲಿದ್ದೀರಾ ಅಥವಾ ನಿಮ್ಮ ಸ್ವಂತ ವ್ಯವಸ್ಥೆಯಲ್ಲಿದ್ದೀರಾ, ನೀವು ಹೇಳಿದ್ದಷ್ಟೇ ಸರ್ಕಾರಿ ಕೆಲಸ ಅಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು.

# ಕ್ರೆಡಿಟ್ ಕಾರ್ಡ್ ಬಾಕಿ ಮೇಲೆ ಶೇ. 30 ಕ್ಕಿಂತ ಹೆಚ್ಚು ಬಡ್ಡಿ ವಿಧಿಸಬಹುದು

ನವದೆಹಲಿ, ಡಿ. 26- ಕ್ರೆಡಿಟ್ ಕಾರ್ಡ್ ಬಾಕಿ ಮೇಲೆ ಬ್ಯಾಂಕುಗಳು ಗ್ರಾಹಕರಿಗೆ ಶೇ. 30ಕ್ಕಿಂ ಹೆಚ್ಚು ಬಡ್ಡಿ ವಿಧಿಸಬಹುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಬಾಕಿ ಮೇಲೆ ಹೆಚ್ಚಿನ ಬಡ್ಡಿ ವಿಧಿಸುವುದು ಅನುಚಿತ ವ್ಯಾಪಾರಿ ಪದ್ಧತಿಯಾಗಿದೆ ಎಂದು ಗ್ರಾಹಕರ ರಾಷ್ಟ್ರೀಯ ಆಯೋಗ 16 ವರ್ಷಗಳ ಹಿಂದೆ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಗ್ರಾಹಕರ ಆಯೋಗ ಹೊರಡಿಸಿರುವ ಆದೇಶ ಕಾನೂನು ಬಾಹಿರವಾಗಿದೆ ಹಾಗೂ ರಿಸರ್ವ್ ಬ್ಯಾಂಕ್ ಅಧಿಕಾರಗಳ ಉಲ್ಲಂಘನೆಯಾಗಿದೆ ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಸತೀಶ್ ಚಂದ್ರ ಶರ್ಮ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ಆಯೋಗದ ಆದೇಶವು 1949ರ ಬ್ಯಾಂಕಿಂಗ್ ನಿರ್ಬಂಧಗಳ ಕಾಯ್ದೆಗೆ ವ್ಯತಿರಿಕ್ತವಾಗಿದೆ ಎಂದೂ ಸುಪ್ರೀಂ ಕೋರ್ಟ್ ತಿಳಿಸಿದೆ.

ಕ್ರೆಡಿಟ್ ಕಾರ್ಡುಗಳಿಗೆ ಬ್ಯಾಂಕುಗಳು ಯಾವುದೇ ರೀತಿಯಲ್ಲಿ ತಪ್ಪು ಮಾಹಿತಿ ನೀಡಿಲ್ಲ. ಹಾಗೂ ಬ್ಯಾಂಕುಗಳು ವಿಧಿಸುವ ಷರತ್ತುಗಳನ್ನು ವಂಚನಾತ್ಮಕ ಎಂದು ಪರಿಗಣಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಬ್ಯಾಂಕು ಹಾಗೂ ಕ್ರೆಡಿಟ್ ಕಾರ್ಡ್ ಗ್ರಾಹಕರ ನಡುವಿನ ಒಪ್ಪಂದದಲ್ಲಿ ಗ್ರಾಹಕರ ಆಯೋಗ ಯಾವುದೇ ಪಾತ್ರ ಹೊಂದಿಲ್ಲ. ಉಭಯರು ಪರಸ್ಪರ ಸಮ್ಮತಿಯೊಂದಿಗೆ ಒಪ್ಪಂದಕ್ಕೆ ಬಂದಿರುತ್ತಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.


**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗ - ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ತಕ್ಷಣ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು Day & Night Shift ನಲ್ಲಿ ಅನುಭವವುಳ್ಳವರು ಮತ್ತು ಹೊಸದಾಗಿ ಸೇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 91648 98621

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಆಕರ್ಷಕ ಸಂಬಳ ನೀಡಲಾಗುವುದು.
ಸಂಪರ್ಕಿಸಿ :
94496 43555

**WANTED**
* Marketing Executive
* Accountant
* godown Incharge
63620 23451, 97434 37003

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಮತ್ತು ಅಕೌಂಟೆಂಟ್ ಬೇಕಾಗಿದ್ದಾರೆ. ಸಂಪರ್ಕಿಸಿ :
72046 17344

**ಸೈಟು ಮಾರಾಟಕ್ಕಿದೆ**
North Facing
ಎಸ್.ಎಸ್. ಲೇ ಔಟ್, ಬಿ ಬ್ಲಾಕ್,
29.5x70= 2065 Feet
ಇಂಡೋರ್ ಸ್ಟೇಡಿಯಂ ಹಿಂಭಾಗ
96869 81609

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ, ಡಾಲರ್ಸ್ ಕಾಲೋನಿಯಲ್ಲಿ ತಿಮ್ಮಾರೆಡ್ಡಿ ಕಾಲೇಜು ಗೇಟ್ ಎದುರುಗಡೆ 30x56, 30x57 North ಅಕ್ಕ-ಪಕ್ಕ, 30x47, 30x47 South ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕೆಲಸಕ್ಕೆ ಬೇಕಾಗಿದ್ದಾರೆ**
ಟಿವಿ ಅಂಗಡಿಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
ದಾವಣಗೆರೆ.
84535 30199

**WANTED**
Banking Sector Tele Caller
(Female Only)
Qualification : Any Degree
81508 12961
Interview Time : 11AM

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ ESI & PF ವ್ಯವಸ್ಥೆ ಇರುತ್ತದೆ.
ಸಂಬಳ 9000/- to 10,000/-
90362 37886

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ 40x45 East, 30x57 East, 40x85 East, 30x40 West, 40 ಅಡಿ ರೋಡ್‌ಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
DCM ಟೌನ್ ಶಿಪ್ ಎ ಬ್ಲಾಕ್, 1ನೇ ಮೇನ್, 2ನೇ ಕ್ರಾಸ್‌ನಲ್ಲಿ 1ನೇ ಮಹಡಿಯಲ್ಲಿ 3 ಬೆಡ್ ರೂಂ ಇರುವ ಹಾಗೂ ಬೋರ್/ಕಾರ್ಪೋರೇಷನ್ ನೀರಿನ ವ್ಯವಸ್ಥೆ ಇದೆ.
88672 33324
97416 82662

**ಗೋದಾಮು ಬಾಡಿಗೆಗೆ**
ನಗರದ KSRTC ಬಸ್ ಸ್ಟ್ಯಾಂಡ್ ಎದುರು, ತರಕಾರಿ ಹೋಲ್‌ಸೇಲ್ ಮಾರ್ಕೆಟ್ ಪಕ್ಕದ KOF ಆಯಿಲ್ ಮಿಲ್‌ನಲ್ಲಿ 1) 4,800 ಚ.ಅ. ಮತ್ತು 2) 9,800 ಚ.ಅ. ಬಾಡಿಗೆಗೆ ದೊರೆಯುತ್ತದೆ.
87625 88632

**ಬೇಕಾಗಿದ್ದಾರೆ**
ಕಂಪ್ಯೂಟರ್ ಟ್ಯಾಲಿ ಆಗಿರುವ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
(ಬೆಳಿಗ್ಗೆ 9.30 ರಿಂದ ಸಂಜೆ 7ರವರೆಗೆ)
ಸಂಪರ್ಕಿಸುವ ವಿಳಾಸ: ರಚನಾ ಪವರ್ ಕಾಂ.
ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
ಸಂಪರ್ಕದ ಸಮಯ: ಸಂಜೆ 4 ರಿಂದ 6ರವರೆಗೆ
ಮೊ: 94498 35217

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮನೆ ಬಾಡಿಗೆಗೆ ಇದೆ**
3 BHK ಡಬಲ್ ಡುಪ್ಲೆಕ್ಸ್, 20x20 ಉತ್ತರ, 40 ಅಡಿ. ಸೋಲಾರ್, ಬೋರ್‌ವೆಲ್ ಎಲ್ಲಾ ಕನ್ವಿನೆಂಟ್. ಸಿರಿ ನಿಲಯ, ದೇವರಾಜ್ ಅರಸ್ ಬಡಾವಣೆ, ಬಿ ಬ್ಲಾಕ್, ಡೋರ್ ನಂ. 276/2 only for rent.
98449 45322

**ಮನೆ ಲೀಸ್‌ಗೆ ಇದೆ**
2BHK, 2nd Floor
ಗಣೇಶ ಲೇಔಟ್ KSRTC Bustand ಹತ್ತಿರ, ದಾವಣಗೆರೆ.
ಮೊ. 98800 56262

**TO-LET**
2nd floor, 1BHK for rent
Beside winners career academy AVK College road, #303/4, PJ extension 2nd main road Stadium road, Davangere.
96111 74878

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಮಾರಾಟಕ್ಕಿದೆ**
2 ಎಕರೆ ನೀರಾವರಿ ಹೊಲ ಮಾರಾಟಕ್ಕಿದೆ.
ಕೊಂಡಜ್ಜಿ ಹತ್ತಿರ, ಬುಳ್ಳಾಪುರ, ಹರಿಹರ ತಾ., ದಾವಣಗೆರೆ ಜಿ.
87470 81006
91646 40083

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse)
ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಸಿ.ಜಿ. ಆಸ್ಪತ್ರೆ ಹಿಂಭಾಗ
ಪೆವಿಲಿಯನ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.
98450 35710, 77607 39990

**SINGAPORE MALAYSIA**
7 Days Premium Group Tour. from 7th FEB
Rs 104900/- pp
Contact : 99006 66122
DVG WORLD TOURS, PJ Extn Davanagere.



**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು



**ಬಾಡಿಗೆಗೆ ಇದೆ**
ದಾವಣಗೆರೆಯ ಮಾರ್ಕೆಟ್‌ಗೆ ಹತ್ತಿರವಿದ್ದು, Transport Office, Nursing Home, Gowden, School or Collegeಗೆ ಸೂಕ್ತವಾಗಿರುವ ಸುಸಜ್ಜಿತ ಕಟ್ಟಡ ಹಾಗೂ ಪಾರ್ಕಿಂಗ್‌ಗೆ ಅನುಕೂಲವಿರುವ 7466 sq.feet ನಲ್ಲಿ ಕಟ್ಟಿರುವ 9 ಮಳಿಗೆಗಳು ಕೆ.ಆರ್. ರಸ್ತೆಯಲ್ಲಿ ಬಾಡಿಗೆಗೆ ಸಿಗುತ್ತವೆ.ಸಂಪರ್ಕಿಸಿ :
89718 20636
99002 80022

**ಮನೆ ಮತ್ತು ಸೈಟ್ ಮಾರಾಟಕ್ಕಿದೆ**
1. ಸಿದ್ದವೀರಪ್ಪ ಬಡಾವಣೆ 8ನೇ ಕ್ರಾಸ್‌ನಲ್ಲಿ ಮನೆ
2. ವೀರಭದ್ರೇಶ್ವರ ಲೇ ಔಟ್‌ನಲ್ಲಿ 30x40 ಸೈಟ್
3. ಶಂಕರ್ ವಿಹಾರ್ ಲೇ ಔಟ್ 40x15 ಸೈಟ್
4. ಸರ್ಕಾರಿ ನೌಕರರ ಬಡಾವಣೆ 41x43 ಸೈಟ್
ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
81054 25694
79755 95836

**ಕಮರ್ಷಿಯಲ್ ಮಳಿಗೆಗಳು ಮಾರಾಟಕ್ಕಿವೆ**
ಸೀತಾರ ಬಾರ್ ಹತ್ತಿರ, 22x24, 22x24 East ಅಕ್ಕ-ಪಕ್ಕ ಎರಡು ಮಳಿಗೆಗಳು.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸಿಂಗಾಪುರ್, ಮಲೇಶಿಯಾ**
7th ಫೆಬ್ರವರಿ & 7 ದಿನ ಪ್ರವಾಸ
ರೂ. 104900/- pp
ಸಂಪರ್ಕಿಸಿ: 99006 66122
ಡಿವಿಜಿ ವರ್ಲ್ಡ್ ಟೂರ್
ಪಿ ಜೆ ಬಡಾವಣೆ, ದಾವಣಗೆರೆ.

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
Coreldraw, Photoshop, DTP ಮಾಡಲು ಕನ್ನಡ ಟೈಪಿಂಗ್ ಪರಿಣಿತಿವುಳ್ಳ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
76195 62207, 94481 10287

**WANTED**
Male Candidate For work at
Atharva Food Market
S. Nijalingappa Badavane, Davangere.
2nd Main, 2nd cross 'A' Block
Qualification : SSLC/PUC
77952 66656, 91136 62423

**ಕುಕ್ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ
ವೆಜ್ & ನಾನ್ ವೆಜ್ ಗೊತ್ತಿರುವ 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ.
ವಯಸ್ಸು 25 ರಿಂದ 35, ಸಂಬಳ 15,000 ಊಟ, ವಸತಿ ಉಚಿತ. ಸಂಪರ್ಕಿಸಿ :
97400 98047

**ಮನೆ ಲೀಜ್‌ಗಿದೆ**
#3100/51, ನೂತನ ಕಾಲೇಜ್ ರಸ್ತೆ, 7ನೇ ಮುಖ್ಯರಸ್ತೆ, 34ನೇ ವಾರ್ಡ್, 7ನೇ C ಶಿವಶಕ್ತಿ ಬ್ಲಾಕ್, ಅಳತೆ 30x50 ಅಡಿ, ವಿವೇಕಾನಂದ ಬಡಾವಣೆ, ದಾವಣಗೆರೆ ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್ ರೂಂ, 2ನೇ ಮಹಡಿ, 3 ಬೆಡ್ ರೂಂ ಮನೆ ಮುನ್ಸಿಪಲ್/ಬೋರ್‌ವೆಲ್ ಇದೆ.
95387 32909, 98444 56243

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888


**ಬೇಕಾಗಿದ್ದಾರೆ**
ಮನೆಯಲ್ಲಿ ಮಹಿಳೆ ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ.
63631 97523

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

## ಮನಮೋಹನ್ ಸಿಂಗ್ ನಿಧನಕ್ಕೆ ಶಾಸಕರು, ಸಚಿವರು, ಸಂಸದರ ಸಂತಾಪ



ದಾವಣಗೆರೆ, ಡಿ. 26 - ದೇಶದ ಮಾಜಿ ಪ್ರಧಾನಿ ಅರ್ಥಶಾಸ್ತ್ರಜ್ಞ, ಶಿಕ್ಷಣ ತಜ್ಞ ಡಾ. ಮನಮೋಹನ್ ಸಿಂಗ್ ನಿಧನದಿಂದ ಭಾರತ ಮತ್ತು ಇಡೀ ವಿಶ್ವಕ್ಕೆ ತುಂಬಲಾರದ ನಷ್ಟ ಸಂಭವಿಸಿದೆ ಎಂದು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ತೀವ್ರ ಸಂತಾಪ ಸೂಚಿಸಿದ್ದಾರೆ.

ಭಾರತದ ಹದಿನಾಲ್ಕನೇ ಪ್ರಧಾನ ಮಂತ್ರಿಯಾಗಿದ್ದ ಡಾ. ಮನಮೋಹನಸಿಂಗ್ ಅವರು ಚಿಂತಕರು, ವಿದ್ವಾಂಸರು ಹಾಗೂ ನಿಗರ್ವಿಗಳು ಆಗಿದ್ದರು. ಇವರು ತಮ್ಮ ಶೈಕ್ಷಣಿಕ ಮತ್ತು ಕರ್ತವ್ಯ ಎರಡರಲ್ಲೂ ಶ್ರದ್ಧೆ ಹಾಗೂ ವಿನೀತ ಭಾವನೆಯಿಂದ ಗೌರವಕ್ಕೆ ಪಾತ್ರರಾಗಿದ್ದಾರೆ.

ಡಾ. ಮನಮೋಹನ್ ಸಿಂಗ್ ಅವರು ಆರ್ಥಿಕತೆಯನ್ನು ಪರಿವರ್ತಿಸುವ ವ್ಯಾಪಕ ಸುಧಾರಣೆಗಳನ್ನು ತಂದವರು. ಯುಪಿಎಯ ಎರಡು ಅವಧಿಯ ಪ್ರಧಾನಿಯಾಗಿ ಅವರು ಸಲ್ಲಿಸಿದ್ದ ಸೇವೆಯನ್ನು ಅವರು ಕೊಂಡಾಡಿದ್ದಾರೆ.

## ನಗರದಲ್ಲಿ ಇಂದು ಕನ್ನಡ ರಾಜ್ಯೋತ್ಸವ - ಸಾಂಸ್ಕೃತಿಕ ಕಾರ್ಯಕ್ರಮ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಕನ್ನಡ ಕ್ರಿಯಾ ಸಮಿತಿ ದಾವಣಗೆರೆ ವಿಭಾಗ ಇವರ ವತಿಯಿಂದ ವಿಭಾಗ ಮಟ್ಟದ 69ನೇ ಕನ್ನಡ ರಾಜ್ಯೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕನಸಿನ ಕಡಲು ಕೃತಿ ಲೋಕಾರ್ಪಣೆ ಹಾಗೂ ಗ್ರಂಥಾಲಯ ಉದ್ಘಾಟನೆ ಕಾರ್ಯಕ್ರಮವನ್ನು ಇಂದು ಸಂಜೆ 5ಗಂಟೆಗೆ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಪುನೀತ್ ರಾಜಕುಮಾರ್ ಅವರ ವೇದಿಕೆಯಲ್ಲಿ ನಡೆಯುವ ಸಮಾರಂಭದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ನೆರವೇರಿಸಲಿದ್ದು, ವಿಭಾಗೀಯ ನಿಯಂತ್ರಣ ಅಧಿಕಾರಿ ಸಿದ್ದೇಶ್ವರ್ ಹೆಬ್ಬಾಳ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಗ್ರಂಥಾಲಯ ಉದ್ಘಾಟಿಸಲಿದ್ದು, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಕನಸಿನ ಕಡಲು ಕೃತಿ ಲೋಕಾರ್ಪಣೆ ಮಾಡುವರು.

ಮುಖ್ಯ ಅತಿಥಿಗಳಾಗಿ ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಜಿಲ್ಲಾ ಪೊಲೀಸ್ ಅಧೀಕ್ಷಕಿ ಉಮಾ ಪ್ರಶಾಂತ್, ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ರಾಜ್ಯಾಧ್ಯಕ್ಷ ನಾಡೋಜ ಮನು ಬಳಿಗಾರ, ಸಾಹಿತಿ ಆನಂದ್ ಋಗ್ವೇದಿ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ನಗರದ ಈಶ್ವರಮ್ಮ ಶಾಲಯಲ್ಲಿ ಇಂದು ವಾರ್ಷಿಕ ಸಂಭ್ರಮ

ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತ ಪ್ರೌಢಶಾಲೆಯಲ್ಲಿ ಇಂದು ಮತ್ತು ನಾಳೆ ಶಾಲಾ ವಾರ್ಷಿಕ ಸಂಭ್ರಮ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ.

ಇಂದು ಸಾಂಸ್ಕೃತಿಕ ಉತ್ಸವ ನಡೆಯಲಿದ್ದು, ಈಶ್ವರಮ್ಮ ಶಾಲಾಡಳಿತ ಮಂಡಳಿ ಕಾರ್ಯದರ್ಶಿ ಉಷಾ ರಂಗನಾಥ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಟಿ.ಎನ್.ಕವಿತಾ, ಈಶ್ವರಮ್ಮ ಶಾಲಾಡಳಿತ ಮಂಡಳಿ ಅಧ್ಯಕ್ಷೆ ಕೆ.ಆರ್. ಸುಜಾತಕೃಷ್ಣ, ಖಜಾಂಚಿ ಎ.ಪಿ. ಸುಜಾತಾ, ಸಂಚಾಲಕ ಪಾಂಡುರಂಗರಾವ್ ರೇವಣಕರ್, ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್, ಉಪಪ್ರಾಂಶುಪಾಲರಾದ ಜಿ.ಎಸ್.ಶಶಿರೇಖಾ ಭಾಗವಹಿಸಲಿದ್ದಾರೆ.

## ಸತತ ಪ್ರಯತ್ನದಿಂದ ಯಶಸ್ಸು ಸಾಧ್ಯ



ದಾವಣಗೆರೆ, ಡಿ. 26 - ಸಮಯದ ಸದುಪಯೋಗ ಹಾಗೂ ಸತತ ಪ್ರಯತ್ನದಿಂದ ಜೀವನದಲ್ಲಿ ಯಶಸ್ಸು ಸಿಗಲಿದೆ ಎಂದು ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಶನ್‌ನ ಸಹ ಪ್ರಾಧ್ಯಾಪಕ ಮಂಜುನಾಥ ಬೆಲ್ಲದ ತಿಳಿಸಿದರು.

ಇಲ್ಲಿನ ವಿನೋಬನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಈಚೆಗೆ ನಡೆದ 'ಕ್ರೀಡಾ ಮತ್ತು ಸಾಂಸ್ಕೃತಿಕ' ಸಮಾರೋಪದಲ್ಲಿ ಅವರು ಮಾತನಾಡಿದರು.

ಅಂತರಾಷ್ಟ್ರೀಯ ಚೆಸ್ ವಿಜೇತ ಗುಖೇಶ್ ಸಾಧನೆಗೆ ಸತತ ಪ್ರಯತ್ನವೇ ಕಾರಣವಾಗಿದ್ದು, ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಇಟ್ಟ ಗುರಿಯೆಡೆಗೆ ಸತತ ಪ್ರಯತ್ನ ನಡೆಸುವಂತೆ ಕಿವಿಮಾತು ಹೇಳಿದರು.

ಸಂಸ್ಥೆಯ ಸಹ ಕಾರ್ಯದರ್ಶಿ ಸೌಮ್ಯ ಬಸವರಾಜ್ ಮಾತನಾಡಿ, ಓದು ಜೀವನ ಬದಲಿಸಲಿದೆ. ಹಾಗಾಗಿ ಓದಿನಲ್ಲಿ ವಿದ್ಯಾರ್ಥಿಗಳು ಶ್ರದ್ಧೆಯಿಂದ ತೊಡಗಬೇಕು ಎಂದ ಅವರು, ಓದಿಗೆ ತಕ್ಕ ಪ್ರತಿ ಫಲವನ್ನು ಫಲಿತಾಂಶದಲ್ಲಿ ಕಾಣಬಹುದು ಎಂದು ಹೇಳಿದರು.

ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಮನೋಹರ್ ಚಿಗಟೇರಿ, ಶಾಲೆಯ ಮುಖ್ಯಶಿಕ್ಷಕ ನಾಗರಾಜ್, ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಎಸ್.ಎಂ. ಶೈಲಜಾ, ಸಂಸ್ಥೆಯ ಶೈಕ್ಷಣಿಕ ಸಲಹೆಗಾರರಾದ ಆರ್. ವಾಗ್ದೇವಿ, ಎಂ.ಟಿ. ಮಳಗಿ, ಸಂಸ್ಥೆಯ ಸದಸ್ಯೆ ಸುಮಂಗಲಮ್ಮ ಚಿಗಟೇರಿ ಇದ್ದರು.

### ಓದುಗರ ಪತ್ರ

## ಅಪಾಯದಲ್ಲಿ ಸರ್ಕಾರಿ ಆಸ್ಪತ್ರೆ



ಮಾನ್ಯರೇ,

ದಾವಣಗೆರೆ - ಜೀವಕ್ಕೆ ಅಪಾಯ ಇದೆಯೆಂದು ಆಸ್ಪತ್ರೆಗೆ ಬರುವ ಜನತೆಗೆ ಈ ಆಸ್ಪತ್ರೆಗೆ ಬರುವವರ ಜೀವಕ್ಕೇ ಖಂಡಿತವಾಗಿ ಅಪಾಯ ಇದೆ!? ನಗರದ ಚಿಗಟೇರಿ ಆಸ್ಪತ್ರೆಯು ಬಡ ವರ್ಗದ ಜನತೆಗೆ ಬಲವೇ ಸರಿ. ಖಾಸಗೀ ಆಸ್ಪತ್ರೆಗಳ ದುಬಾರಿ ದರಗಳನ್ನು ಕಂಡೇ ಬಡವ ಸಾಯುತ್ತಾನೆ. ಹಾಗಾಗಿಯೇ ಬಡ ಜನತೆಗೆ, ದಾವಣಗೆರೆ ಜಿಲ್ಲಾ ಆಸ್ಪತ್ರೆ ಎಂದರೆ ಅಚ್ಚುಮೆಚ್ಚಾಗಿರುತ್ತದೆ. ಆದರೆ ಕಟ್ಟಡದ ಮೇಲ್ಛಾವಣಿ ಕುಸಿದು ಮೂವರಿಗೆ ತೀವ್ರ ಪೆಟ್ಟಾಗಿರುವುದನ್ನು ಕಂಡಿದ್ದೇವೆ. ಈ ಕಟ್ಟಡದ ಹೆಚ್ಚಿನ ಭಾಗಗಳು ಶಿಥಿಲಗೊಂಡಿವೆ, ಅಲ್ಲಲ್ಲಿ ಕಾಣಸಿಗುವ ಗೋಡೆಯಲ್ಲಿ ಬಿರುಕುಗಳು, ಮೇಲ್ಛಾವಣಿ ಕುಸಿತಗಳು ನಿಜಕ್ಕೂ ರೋಗಿಗಳಿಗೆ, ರೋಗಿಗಳನ್ನು ಕಾಣಲು ಬರುವ ಮಂದಿಗೆ ಭಯ ಹುಟ್ಟಿಸುವಂತಿದೆ. ಕಂಡೂ ಕಾಣದಂತೆ ಕಣ್ಮುಚ್ಚಿ ಕುಳಿತಿರುವ ಅಧಿಕಾರಿಗಳು ಶೀಘ್ರವಾಗಿ ಎಚ್ಚೆತ್ತುಕೊಳ್ಳಬೇಕಾಗಿದೆ, ಸರ್ಕಾರಕ್ಕೆ ಮನದಟ್ಟು ಮಾಡಬೇಕಾಗಿದೆ.

ಮೂಲಭೂತ ಸೌಕರ್ಯಗಳನ್ನು ನೀಡುವಲ್ಲಿ ಸರ್ಕಾರವು ಈ ಕೂಡಲೇ ಇತಿಹಾಸ ಹೊಂದಿರುವ ನಗರದ ಚಿಗಟೇರಿ ಜಿಲ್ಲಾ ಆಸ್ಪತ್ರೆಯನ್ನು ದುರಸ್ತಿಗೊಳಿಸಿ, ಆಧುನೀಕರಣ ಗೊಳಿಸಬೇಕು ಎಂದು ನಗರದ ಸಾರ್ವಜನಿಕರ ಪರವಾಗಿ ವಿನಂತಿ.

**- ವೈ. ವಾದಿರಾಜ ಭಟ್**, ವಕೀಲರು, ಎಸ್.ಪಿ.ಎಸ್. ನಗರ ನಿವಾಸಿ.

# 29 ರಂದು ಕೆ.ಎ.ಎಸ್. ಮರು ಪರೀಕ್ಷೆ 19 ಕೇಂದ್ರಗಳಲ್ಲಿ 8395 ಅಭ್ಯರ್ಥಿಗಳು



ದಾವಣಗೆರೆ, ಡಿ. 26 - ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುವ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ ಗ್ರೂಪ್‌ನ 'ಎ' ಮತ್ತು 'ಬಿ' ವೃಂದದ ಹುದ್ದೆಗಳ ಪೂರ್ವಭಾವಿ ಮರು ಪರೀಕ್ಷೆಯು ಇದೇ ದಿನಾಂಕ 29 ರಂದು ನಡೆಯಲಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗೆಜೆಟೆಡ್ ಪ್ರೊಬೆಷನರ್ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳ ಪೂರ್ವಭಾವಿ ಮರು ಪರೀಕ್ಷೆಯ ಸಿದ್ದತಾ ಸಭೆ ಹಾಗೂ ಪರೀಕ್ಷಾ ಕೇಂದ್ರಗಳ ಪರಿವೀಕ್ಷಕರು, ಮಾರ್ಗಾಧಿಕಾರಿಗಳು ಮತ್ತು ವೀಕ್ಷಕರುಗಳಿಗೆ ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಪರೀಕ್ಷೆಯನ್ನು ಸುವ್ಯವಸ್ಥಿತವಾಗಿ ಮತ್ತು ಯಾವುದೇ ದೂರುಗಳು ಬಾರದಂತೆ ನಡೆಸಲು ಆಯೋಗದ ನಿರ್ದೇಶನಗಳನ್ನು ಪಾಲಿಸಿ, ಪರೀಕ್ಷಾ ಕೇಂದ್ರಗಳಲ್ಲಿ ಸ್ವಚ್ಛತೆ, ಆಸನದ ವ್ಯವಸ್ಥೆ, ಬಂದೋಬಸ್ತ್ ವ್ಯವಸ್ಥೆ ಸೇರಿದಂತೆ ಎಲ್ಲ ಸಿದ್ದತೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಂತೆ ತಿಳಿಸಿದರು.

ನಾಡಿದ್ದು ದಿನಾಂಕ 29 ರಂದು ನಗರದ 19 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು. ಒಟ್ಟು 8395 ಅಭ್ಯರ್ಥಿಗಳು ಪರೀಕ್ಷೆ ಬರೆಯುವರು. ಪತ್ರಿಕೆ-1 ಬೆಳಿಗ್ಗೆ 10 ರಿಂದ 12 ಗಂಟೆಯವರೆಗೆ, ಪತ್ರಿಕೆ-2 ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ಈ ಎರಡು ಪತ್ರಿಕೆಯ ಪರೀಕ್ಷೆಗಳು ನಡೆಯಲಿವೆ ಎಂದು ತಿಳಿಸಿದರು.

**ವಸ್ತ್ರ ಸಂಹಿತೆ ನಿಷೇಧಿತ ವಸ್ತುಗಳ ಪಟ್ಟಿ:** ಪರೀಕ್ಷೆ ಬರೆಯುವ ಅಭ್ಯರ್ಥಿಗಳು ಉದ್ದ ತೋಳಿನ ಉಡುಪು ಧರಿಸುವಂತಿಲ್ಲ. ಅರ್ಧ ತೋಳಿನ ಶರ್ಟ್‌ಗಳನ್ನು ಧರಿಸುವುದು. ಹೆಣ್ಣು ಮಕ್ಕಳು ಮಂಗಳ ಸೂತ್ರ ಹಾಗೂ ಕಾಲುಂಗುರ ಹೊರತುಪಡಿಸಿ ಬೇರೆ ಆಭರಣಗಳನ್ನು ಧರಿಸುವಂತಿಲ್ಲ.

ಪರೀಕ್ಷಾ ಕೇಂದ್ರಕ್ಕೆ ಯಾವುದೇ ನಿಷೇಧಿತ ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಫೋನ್‌ಗಳು, ಪೆನ್‌ಡ್ರೈವ್‌ಗಳು, ಇಯರ್ ಫೋನ್‌ಗಳು, ಮೈಕ್ರೋ ಫೋನ್‌ಗಳು, ಬ್ಲೂಟೂಥ್ ಸಾಧನಗಳು ಮತ್ತು ಕೈ ಗಡಿಯಾರಗಳನ್ನು ಪರೀಕ್ಷಾ ಕೊಠಡಿಯೊಳಗೆ ಅನುಮತಿಸಲಾಗುವುದಿಲ್ಲ.

ಕುಡಿಯುವ ನೀರಿನ ಬಾಟಲಿಗೂ ಸಹ ಅನುಮತಿ ಇರುವುದಿಲ್ಲ, ಪರೀಕ್ಷಾ ಕೇಂದ್ರದಲ್ಲಿಯೇ ಕುಡಿಯುವ ನೀರಿಗೆ ವ್ಯವಸ್ಥೆ ಕಲ್ಪಿಸಿಕೊಡಲಾಗುವುದು. ಪೆನ್ಸಿಲ್, ಪೇಪರ್, ಎರೇಸರ್, ಜಾಮಿಟ್ರಿ ಬಾಕ್ಸ್‌ಗಳು ಮತ್ತು ಲಾಗ್ ಟೇಬಲ್ ಗಳನ್ನು ಪರೀಕ್ಷಾ ಕೇಂದ್ರದೊಳಗೆ ತರುವಂತಿಲ್ಲ. ತಲೆಯ ಮೇಲೆ ಟೋಪಿ ಧರಿಸಿಬಾರದು. ಯಾವುದೇ ರೀತಿಯ ಮಾಸ್ಕನ್ನು ಧರಿಸುವಂತಿಲ್ಲ.

ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳ ತಪಾಸಣಾ ಕಾರ್ಯಕ್ಕೆ ಪೊಲೀಸ್ ಸಿಬ್ಬಂದಿ ನಿಯೋಜಿಸಿ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಪೊಲೀಸ್ ಬಂದೋಬಸ್ ವ್ಯವಸ್ಥೆ ಇರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ. ಎನ್. ಲೋಕೇಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ್, ಶಾಲಾ ಶಿಕ್ಷಣ ಇಲಾಖೆ ಡಿಡಿಪಿಐ ಜಿ. ಕೊಟ್ರೇಶ್, ಶಿಕ್ಷಣಾಧಿಕಾರಿ ರಾಜಶೇಖರ್ ಹಾಗೂ ವಿವಿಧ ಕಾಲೇಜುಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು.

## ಹರಪನಹಳ್ಳಿಗೆ ನಾಡಿದ್ದು ರಾಜನಹಳ್ಳಿಯ ವಾಲ್ಮೀಕಿ ಶ್ರೀಗಳು



ಹರಪನಹಳ್ಳಿ, ಡಿ. 26 - ಪಟ್ಟಣದ ಅರಸಿಕೇರೆ ರಸ್ತೆಯ ಬಳಿ ಇರುವ ವಾಲ್ಮೀಕಿ ಸಮೂದಾಯ ಭವನದಲ್ಲಿ ಇದೇ ದಿನಾಂಕ 29 ರಂದು ಬೆಳಿಗ್ಗೆ 10 ಗಂಟೆಗೆ ರಾಜನಹಳ್ಳಿಯ ವಾಲ್ಮೀಕಿ ಗುರು ಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಪಾಲ್ಗೊಳ್ಳಲ್ಲಿದ್ದಾರೆ ಎಂದು ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ವೈ.ಡಿ. ಅಣ್ಣಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಸುದ್ದಿ-ಗೋಷ್ಠಿಯಲ್ಲಿ ಮಾತನಾಡಿ, ರಾಜನಹಳ್ಳಿಯ ವಾಲ್ಮೀಕಿ ಗುರು ಪೀಠದಲ್ಲಿ ಮುಂಬರುವ ಫೆ. 8 ಮತ್ತು 9 ರಂದು ಜರುಗಲಿರುವ ವಾಲ್ಮೀಕಿ ಜಾತ್ರೆಯ ಅಂಗವಾಗಿ ರಾಜನಹಳ್ಳಿಯ ವಾಲ್ಮೀಕಿ ಶ್ರೀಗಳು ಪಟ್ಟಣದ ವಾಲ್ಮೀಕಿ ಸಮುದಾಯ ಭವನಕ್ಕೆ ಆಗಮಿಸಲಿದ್ದಾರೆ ಎಂದು ಹೇಳಿದರು. .

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಟಿ. ವೆಂಕಟೇಶ, ವಾಲ್ಮೀಕಿ ನಾಯಕ ಸಮಾಜದ ಗೌರವ ಅಧ್ಯಕ್ಷ ಹೆಚ್.ಕೆ. ಹಾಲೇಶ, ಮಾಜಿ ಅಧ್ಯಕ್ಷರಾದ ಕೆ.ಉಚ್ಚೆಂಗೆಪ್ಪ, ಶಿರಹಟ್ಟಿ ದಂಡೆಪ್ಪ, ಪ್ರಧಾನ ಕಾರ್ಯದರ್ಶಿ ಜಿಟ್ಟಿನಕಟ್ಟಿ ಎಚ್.ಕೆ. ಮಂಜುನಾಥ, ಉಪಾಧ್ಯಕ್ಷ ಮಂಡಕ್ಕಿ ಸುರೇಶ, ಪುರಸಭೆ ಸದಸ್ಯ ದ್ಯಾಮಜ್ಜಿ ರೊಕ್ಕಪ್ಪ, ಮುಖಂಡರಾದ ನಿಟ್ಟೂರು ಸಣ್ಣ ಹಾಲಪ್ಪ, ಚಿಕ್ಕೇರಿ ಬಸಪ್ಪ, ಆರ್.ಲೋಕೇಶ್, ಕೆಂಚಪ್ಪ, ಅಜ್ಜಯ್ಯ, ತಳವಾರ ವೆಂಕಟೇಶ, ಪಿ. ವೆಂಕಟೇಶ ಸೇರಿದಂತೆ ಇತರರು ಇದ್ದರು.

## ಜಗಳೂರು : ಅಮಿತ್ ಷಾ ಹೇಳಿಕೆ ಖಂಡಿಸಿ ವಕೀಲ ಸಂಘದ ಮನವಿ



ಜಗಳೂರು, ಡಿ. 26 - ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತು ಕೇಂದ್ರ ಸಚಿವ ಅಮಿತ್ ಷಾ ನೀಡಿರುವ ಅವಹೇಳನಾಕಾರಿ ಹೇಳಿಕೆ ಖಂಡಿಸಿ ತಾಲೂಕು ವಕೀಲರ ಸಂಘದಿಂದ ತಹಶೀಲ್ದಾರ್ ಮುಖಾಂತರ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಲಾಯಿತು.

ವಕೀಲರ ಸಂಘದ ತಾಲೂಕು ಘಟಕದ ಅಧ್ಯಕ್ಷ ವಕೀಲ ಟಿ.ಬಸವರಾಜ್ ಮಾತನಾಡಿ, ದೇಶದಲ್ಲಿ ಎಲ್ಲಾ ವರ್ಗಗಳಿಗೆ ಸಮಾನತೆ, ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿದ ಶ್ರೇಷ್ಠ ಸಂವಿಧಾನ ರಚಿಸಿದ ಅಂಬೇಡ್ಕರ್ ಅವರನ್ನು ಸ್ಮರಿಸುವುದರಲ್ಲಿ ತಪ್ಪೇನಿಲ್ಲ. ಬಹುಸಂಸ್ಕೃತಿ ನೆಲೆಸಿದ ದೇಶದಲ್ಲಿ ಹಲವು ಧರ್ಮಗಳು ಅವರವರ ನಂಬಿಕೆ. ಮನುವಾದವನ್ನು ಬಲವಂತವಾಗಿ ಬಿತ್ತುವುದು ಸಂವಿಧಾನದ ಆಶಯಗಳಿಗೆ ಧಕ್ಕೆ ಉಂಟುಮಾಡಿದಂತಾಗಿದೆ. ಕೇಂದ್ರ ಸಚಿವ ಅಮಿತ್ ಷಾ ಅವರನ್ನು ಕೂಡಲೇ ಸಚಿವ ಸ್ಥಾನದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಸಂದರ್ಭದಲ್ಲಿ ವಕೀಲರ ಸಂಘದ ಪದಾಧಿಕಾರಿಗಳಾದ ಪರಶುರಾಮ್, ಆರ್. ಓಬಳೇಶ್, ಶ್ರೀನಿವಾಸ್, ಸಿ.ಬಸವರಾಜ್, ಪಂಪಣ್ಣ, ಎಚ್. ಬಸವರಾಜಪ್ಪ, ನಾಗೇಶ್, ತಿಪ್ಪೇಸ್ವಾಮಿ, ಕುಂಬಾರ್, ಕೆ.ವಿ. ರುದ್ರೇಶ್, ಹಾಲಪ್ಪ, ಬಾಲಪ್ಪ, ರಂಗಪ್ಪ, ವೀರೇಶ್, ಮಹಾಂತೇಶ್, ಗೋಗುದ್ದು ತಿಪ್ಪೇಸ್ವಾಮಿ ಇದ್ದರು.

## ಅಮಿತ್-ಷಾ ವಿರುದ್ಧ ಸಿಪಿಐ ಪ್ರತಿಭಟನೆ



**ಹರಿಹರ**

ಹರಿಹರ, ಡಿ.26 - ಸಂಸತ್ತಿನಲ್ಲಿ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಷಾರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ಸಿಪಿಐ ಪಕ್ಷದ ವತಿಯಿಂದ ಈಚೆಗೆ ಪ್ರತಿಭಟನೆ ನಡೆಸಲಾಯಿತು.

ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಅಮಿತ್ ಷಾ ವಿರುದ್ಧ ಘೋಷಣೆ ಕೂಗುವ ಮೂಲಕ ಆಕ್ರೋಶ ಹೊರಹಾಕಿ, ಶಿರಸ್ತೇದಾರರಿಗೆ ಮನವಿ ಅರ್ಪಿಸಿದರು.

ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ನಾಗರಾಜಪ್ಪ, ಕಾಂಗ್ರೆಸ್ ಮುಖಂಡ ವೈ. ರಘುಪತಿ, ಸನಾವುಲ್ಲಾ, ಡಿ.ಎಸ್.ಎಸ್ ಹನುಮಂತಪ್ಪ ಕೊತ್ವಾಲ, ಡಿ. ಹನುಮಂತಪ್ಪ, ಶ್ರೀನಿವಾಸ್ ಕೊಡ್ಲಿ, ಬಿ.ಹೆಚ್. ಚಂದ್ರಪ್ಪ, ಪರಮೇಶ್ವರಪ್ಪ, ನಾಗರಾಜ್ ಹಿತ್ತಲಮನೆ, ಕುಮಾರ್ ನಾಯ್ಕ್, ಕಿರಣ್ ಕುಮಾರ್ ಇತರರು ಇದ್ದರು.

## ಡಾ.ಮನಮೋಹನ್ ಸಿಂಗ್ ನಿಧನ : ಜಿಲ್ಲಾ ಕಸಾಪದಿಂದ ಇಂದು ಸಂತಾಪ ಸೂಚಕ ಸಭೆ

ವಿಶ್ವ ಕಂಡ ಶ್ರೇಷ್ಠ ಅರ್ಥಶಾಸ್ತ್ರಜ್ಞ, ಭಾರತ ದೇಶದ ಆರ್ಥಿಕ ಭದ್ರತೆಗೆ ಭದ್ರ ಬುನಾದಿ ಹಾಕಿದ್ದ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಪ್ರಮುಖ ಬದಲಾವಣೆಗಳನ್ನು ತಂದಿದ್ದ 10 ವರ್ಷಗಳ ಕಾಲ ದೇಶದ ಭಾರತದ ಪ್ರಧಾನಮಂತ್ರಿಯಾಗಿದ್ದ ಡಾ. ಮಾನಮೋಹನ್ ಸಿಂಗ್ ಅವರ ನಿಧನಕ್ಕೆ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಂತಾಪ ವ್ಯಕ್ತ ಪಡಿಸಿದೆ.

ಡಾ. ಮಾನಮೋಹನ್ ಸಿಂಗ್ ಅವರ ಸ್ಮರಣಾರ್ಥವಾಗಿ ನುಡಿ ನಮನ ಹಾಗೂ ಸಂತಾಪ ಸೂಚಕ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಕುವೆಂಪು ಕನ್ನಡ ಭವನದಲ್ಲಿ ಇಂದು ಮಧ್ಯಾಹ್ನ 11.30ಕ್ಕೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಫಲಪುಷ್ಪ ಪ್ರದರ್ಶನ

ದಾವಣಗೆರೆ, ಡಿ. 26- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ತೋಟಗಾರಿಕೆ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 28ರಿಂದ ಜನವರಿ 1ರ ವರೆಗೆ ಇಲ್ಲಿನ ಗಾಜಿನ ಮನೆಯಲ್ಲಿ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ.

ನಾಡಿದ್ದು ದಿನಾಂಕ 28ರ ಸಂಜೆ 5 ಗಂಟೆಗೆ ಗಾಜಿನ ಮನೆಯಲ್ಲಿ ಫಲಪುಷ್ಪ ಕಾರ್ಯಕ್ರಮವನ್ನು ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು.

## ಓಬಜ್ಜಿಹಳ್ಳಿಯಲ್ಲಿ ಶ್ರೀ ಶಿರಸಿ ಮಾರಿಕಾಂಬೆ ದೇವಿ ಕಾರ್ತಿಕೋತ್ಸವ

ದಾವಣಗೆರೆ ತಾಲ್ಲೂಕು ಕಡ್ಲೇಬಾಳು ಗ್ರಾಂ. ಪಂಚಾಯತಿಯಲ್ಲಿ ಬರುವ ಚಿಕ್ಕ ಓಬಜ್ಜಿಹಳ್ಳಿ ಗ್ರಾಮದಲ್ಲಿ ಶ್ರೀ ಶಿರಸಿ ಮಾರಿಕಾಂಬೆ ದೇವಿಯ ಕಾರ್ತಿಕೋತ್ಸವವು ಇಂದು ಸಂಜೆ 7ಕ್ಕೆ ಜರುಗಲಿದೆ ಎಂದು ಅರ್ಚಕರಾದ ಶೇಖರಪ್ಪ ತಿಳಿಸಿದ್ದಾರೆ.

## ಕಕ್ಕರಗೊಳ್ಳದಲ್ಲಿ ಇಂದು ಕಾರ್ತಿಕ

ಶ್ರೀ ಊರಮ್ಮದೇವಿ ದೇವಸ್ಥಾನ ಸೇವಾ ಸಮಿತಿಯಿಂದ ಕಕ್ಕರಗೊಳ್ಳದ ಗ್ರಾಮ ದೇವತೆ ಶ್ರೀ ಊರಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಕಡೇ ಕಾರ್ತಿಕದ ದೀಪೋತ್ಸವವು ಇಂದು ಸಂಜೆ 7 ಗಂಟೆಗೆ ನಡೆಯಲಿದೆ.



## ಯಲ್ಲಮ್ಮನಗರ ಬನ್ನಿಮಹಾಂಕಾಳಿ ಕಾರ್ತಿಕ

ದಾವಣಗೆರೆ ಯಲ್ಲಮ್ಮನಗರ 4ನೇ ಮೇನ್, 7ನೇ ಕ್ರಾಸ್‌ನಲ್ಲಿರುವ ಶ್ರೀ ಬನ್ನಿ ಮಹಾಂಕಾಳಿ ದೇವಿಯ ಕಾರ್ತಿಕೋತ್ಸವವು ಇಂದು ಸಂಜೆ 7 ಗಂಟೆಗೆ ನಡೆಯಲಿದೆ.



## ಸೌತ್ ಜೋನ್ ಚಾಂಪಿಯನ್‌ಶಿಪ್ ಭಾಣಸ್ಯ ದ್ವಿತೀಯ ಸ್ಥಾನ

ದಾವಣಗೆರೆ, ಡಿ. 26 - ಈಚೆಗೆ ಬೆಂಗಳೂರಿನಲ್ಲಿ ನಡೆದ 28ನೇ ಸೌತ್ ಜೋನ್ ಚಾಂಪಿಯನ್‌ಶಿಪ್‌ನಲ್ಲಿ ದಾವಣಗೆರೆ ಕ್ರೀಡಾ ರೋಹಣದ ಕ್ರೀಡಾ ಪಟುಗಳು ಜ್ಯೂನಿಯರ್ ವಿಭಾಗದಲ್ಲಿ ಭಾಗವಹಿಸಿ ವಿಜೇತರಾಗಿದ್ದಾರೆ.

ಲೀಡ್ ಕ್ಲೈಂಬಿಂಗ್ ಮತ್ತು ಸ್ಪೀಡ್ ಕ್ಲೈಂಬಿಂಗ್‌ನಲ್ಲಿ ಡಿ. ಭಾಣಸ್ಯ ದ್ವಿತೀಯ ಮತ್ತು ಬೋಟ್ಲರಿಂಗ್‌ನಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಲೀಡ್ ಕ್ಲೈಂಬಿಂಗ್ ಮತ್ತು ಸ್ಪೀಡ್ ಕ್ಲೈಂಬಿಂಗ್‌ನಲ್ಲಿ ಗಂಗಾ ವೈಷ್ಣವಿ, ವಿ. ನಾಗ್ ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಶ್ರೀ ರಾಮಕೃಷ್ಣ ಮಂದಿರ ನಿರ್ಮಾಣಕ್ಕೆ ಭೂಮಿ ಪೂಜೆ



ರಾಣೇಬೆನ್ನೂರು, ಡಿ. 26 - ಇಲ್ಲಿನ ಶ್ರೀ ವಿವೇಕಾನಂದಾಶ್ರಮದ ಆವರಣದಲ್ಲಿ ಶ್ರೀ ರಾಮಕೃಷ್ಣ ಮಂದಿರ ನಿರ್ಮಿಸಲು ಆಶ್ರಮದ ಪೀಠಾಧಿಪತಿಗಳಾದ ಶ್ರೀ ಆತ್ಮದೀಪಾನಂದ ಮಹಾರಾಜ, ಶ್ರೀ ಪ್ರಕಾಶಾನಂದ ಮಹಾರಾಜ ಭೂಮಿ ಪೂಜೆ ನೆರವೇರಿಸಿದರು.

ಶಾಸಕ ಪ್ರಕಾಶ ಕೋಳಿವಾಡ, ಮಾಜಿ ಶಾಸಕ ಡಿ.ಆರ್.ಪಾಟೀಲ, ಬಿಎಜೆಎಸ್ಎಸ್ ಸಂಸ್ಥೆಯ ಆಡಳಿತಾಧಿಕಾರಿ ಆರ್.ಎಂ.ಕುಬೇರಪ್ಪ, ನೇತ್ರ ತಜ್ಞ ಡಾ. ಚಂದ್ರಶೇಖರ ಕೇಲಗಾರ. ವರ್ತಕ ಕೊಟ್ರೇಶ ಎಮ್ಮಿ, ಡಾ. ಪ್ರವೀಣ ಖುನ್ನೂರ, ನಗರಸಭೆ ಸದಸ್ಯರು ಮತ್ತಿತರರಿದ್ದರು.

## ನಗರದಲ್ಲಿ ಇಂದು ಅಹಲ್ಯಾಬಾಯಿ ಹೋಳ್ಕರ್ ಜನ್ಮ ತ್ರಿಶತಾಬ್ದಿ ಆಚರಣೆ

ಭಾರತ ವಿಕಾಸ ಪರಿಷತ್ ಗೌತಮ ಶಾಖೆ ದಾವಣಗೆರೆ ವತಿಯಿಂದ ರಾಜಮಾತೆ ಶ್ರೀಮತಿ ಅಹಲ್ಯಬಾಯಿ ಹೋಳ್ಕರ್ ಜನ್ಮ ತ್ರಿಶತಾಬ್ದಿ ಆಚರಣೆ ಪ್ರಯುಕ್ತ ಅಹಲ್ಯಾಬಾಯಿ ಹೋಳ್ಕರ್ ಜೀವನ ಇಂದಿನ ಸಮಾಜಕ್ಕೆ ಎಷ್ಟು ಪ್ರಸ್ತುತ? ಒಂದು ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇಂದು ಸಂಜೆ 5.45ಕ್ಕೆ ರಾಂ ಅಂಡ್ ಕೋ ವೃತ್ತದ ಗಣಪತಿ ದೇವಸ್ಥಾನದ ಮಹಡಿ ಮೇಲೆ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾಧ್ಯಕ್ಷರಾದ ಅಜ್ಜಂಪುರ ಶೆಟ್ರು ವಿಜಯಕುಮಾರ್, ವಕ್ತಾರರಾದ ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ ತಿಳಿಸಿದ್ದಾರೆ.

# ಹಣ ವಸೂಲಾತಿ ಮಾಡುತ್ತಿರುವವರ ವಿರುದ್ಧ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳಿಗೆ ಮನವಿ



ದಾವಣಗೆರೆ, ಡಿ. 26 - ನಗರದಲ್ಲಿ ಕೆಲವು ಆರ್.ಟಿ.ಐ. ಕಾರ್ಯಕರ್ತರು ಸರ್ಕಾರಿ ಇಲಾಖೆಯ ನೌಕರರುಗಳೊಂದಿಗೆ ಶಾಮೀಲಾಗಿ ನಗರದ ಪ್ರತಿಷ್ಠಿತ ಬಡಾವಣೆಗಳ ನಿವಾಸಿಗಳಿಗೆ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ವಿನಾಕಾರಣ ತೊಂದರೆ ಕೊಡುತ್ತಾ, ಹಣ ವಸೂಲಾತಿ ಮಾಡುತ್ತಿರುವವರ ಮೇಲೆ ಸೂಕ್ತ ಕ್ರಮ ಜರುಗಿಸಿ ಸಾರ್ವಜನಿಕರಿಗೆ ಆಗುತ್ತಿರುವ ಮಾನಸಿಕ ಕಿರುಕುಳವನ್ನು ನಿವಾರಿಸಬೇಕೆಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರಿಗೆ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮನವಿ ಮಾಡಿದರು.

ಕೆಲವು ಆರ್.ಟಿ.ಐ. ಕಾರ್ಯಕರ್ತರ ಹೆಸರಿನಲ್ಲಿ ನಗರದ ಪ್ರತಿಷ್ಠಿತ ವ್ಯಕ್ತಿಗಳಿಗೆ ನೀವು ನಿರ್ಮಿಸಿರುವ ಕಟ್ಟಡಗಳಿಗೆ ಪ್ಯಾಸೇಜ್ ಬಿಟ್ಟಿಲ್ಲ, ಜಾಗವನ್ನು ಅತಿಕ್ರಮಿಸಿಕೊಂಡಿದ್ದೀರಿ, ಕಟ್ಟಡ ನಿರ್ಮಿಸಲು ಲೈಸನ್ಸ್ ಪಡೆದುಕೊಂಡಿಲ್ಲ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ನೀವು ಶಾಲೆ ನಡೆಸಲು ಅನುಮತಿ ಪಡೆದಿಲ್ಲ, ಮಕ್ಕಳ ಸಂಖ್ಯೆ ಹೆಚ್ಚಾಗಿದೆ, ಶಿಕ್ಷಕರು ಸರಿಯಾದ ವಿದ್ಯಾರ್ಹತೆ ಹೊಂದಿಲ್ಲ, ದಾಖಲಾತಿಗಿಂತ ಹೆಚ್ಚಿನ ಮಕ್ಕಳನ್ನು ತೋರಿಸಿ ಸರ್ಕಾರದ ಹಣ ದುರುಪಯೋಗ ಪಡಿಸಿಕೊಳ್ಳುತ್ತಿದ್ದೀರಿ ಎಂದು ಹೇಳುತ್ತಾ ಸರ್ಕಾರಿ ಕಛೇರಿಗಳ ಸಿಬ್ಬಂದಿಗಳೊಂದಿಗೆ ಶಾಮೀಲಾಗಿ ಸಾರ್ವಜನಿಕರಿಗೆ ವಿನಾಕಾರಣ ಮಾನಸಿಕ ಹಿಂಸೆ ನೀಡುತ್ತಾ, ಹಣಕ್ಕೆ ಬೇಡಿಕೆ ಇಡುತ್ತಾ, ಅಕ್ರಮವಾಗಿ ಹಣ ವಸೂಲಿ ಮಾಡುತ್ತಿರುವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ಸಾರ್ವಜನಿಕರಿಗೆ ಆಗುತ್ತಿರುವ ಮಾನಸಿಕ ಕಿರುಕುಳವನ್ನು ತಪ್ಪಿಸಬೇಕೆಂದು ಮನವಿಯಲ್ಲಿ ಕೋರಿದ್ದಾರೆ.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್‌ಸಾಬ್, ಉಪಮೇಯರ್ ಸೋಗಿ ಶಾಂತಕುಮಾರ್, ಪಾಲಿಕೆ ಸದಸ್ಯರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್ ಜೊತೆಗಿದ್ದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ. ಕರಾಸಾ/ದಾವಿ/ಸಂಚಾರ/ವಾಣೀಜ್ಯ/2818/2024-25 ದಿನಾಂಕ: 26/12/2024

**ಇ-ಟೆಂಡರ್ ಪ್ರಕಟಣೆ ಸಂಖ್ಯೆ : 12/2024-25**

(ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣದ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ಸ್ಮಾರ್ಟ್ ಸಿಟಿ ಅಡಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ದಾವಣಗೆರೆ ಬಸ್ ನಿಲ್ದಾಣದ ಹೊರಭಾಗದಲ್ಲಿ ಜಾಹೀರಾತು ಅಳವಡಿಸಲು ಹೋರ್ಡಿಂಗ್ಸ್ ಪ್ಯಾಕೇಜ್ ಸಂಖ್ಯೆ-02 ಕ್ಕೆ ಬಸ್ ನಿಲ್ದಾಣದ ಬಸ್ ನಿಲ್ದಾಣದ ಹೊರ ಭಾಗದ ಜಾಹೀರಾತು ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ "https://kppp.karnataka.gov.in" ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ: 26.12.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ – 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

-: ಸಂಪರ್ಕಿಸುವ ದೂರವಾಣಿ ಸಂಖ್ಯೆ :-

**ವಿಭಾಗೀಯ ಸಂಚಾರ ಅಧಿಕಾರಿ 7760990452,**

**ಸಹಾಯಕ ಸಂಚಾರ ಅಧೀಕ್ಷಕರು 7022030183**

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ

ವಾ.ಸಾ.ಸಂ.ಇ/ವಾಪ್ರ/3982/ಅಕಾರ್/2024-25

# ಕಾಯಕ ತತ್ವ ಜಗತ್ತಿಗೇ ಸಾರಿದವರು ಶರಣರು



ದಾವಣಗೆರೆ, ಡಿ. 26 - ಶರಣ ಸಂಸ್ಕೃತಿ ಎಂದರೆ ಶರಣರು ಬದುಕಿ ದೈವತ್ವ ಪಡೆದ ಜೀವನ ವಿಧಾನ. ಶರಣರು ಶ್ರಮ ಸಂಸ್ಕೃತಿ ಹಾಗೂ ಉನ್ನತ ಚಿಂತನೆಯೊಂದಿಗೆ ಸರಳ ಜೀವನ ನಡೆಸುತ್ತಿದ್ದರು ಎಂದು ಸಿಂಗಟಗೆರೆ ಶ್ರೀ ಕಲ್ಲೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ.ಜಿ.ವಿ. ಮಂಜುನಾಥ್ ಹೇಳಿದರು.

ನಗರದ ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿ ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ ಹಾಗೂ ಸಾದರ ನೌಕರರ ಬಳಗ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಶಿವಗೋಷ್ಠಿ-311 ಹಾಗೂ ಸ್ಮರಣೆ-88 ಮಾಸಿಕ ಕಾರ್ಯಕ್ರಮದಲ್ಲಿ 'ಶರಣ ಸಂಸ್ಕೃತಿ' ಕುರಿತು ಮಾತನಾಡಿದರು.

ಸರಳವಾಗಿ ಧರ್ಮವನ್ನು ವ್ಯಾಖ್ಯಾನಿಸಿದವರು ಶರಣರು. ಬೇರೆ ಯಾವ ಭಾಷೆ, ಧರ್ಮದಲ್ಲಿ ಕಾಣಲು ವಿರಳ. ಶರಣರ ವಚನಗಳು ಯಾರನ್ನೂ ಮೆಚ್ಚಿಸಲು ಬರೆದವಲ್ಲ. ಹನ್ನೆರಡನೇ ಶತಮಾನದಲ್ಲಿ ಬರೆದ ವಚನಗಳು ಅನುಭಾವದ ನುಡಿಗಳಾಗಿದ್ದವು ಎಂದರು.

ಭಕ್ತನಾಗುವುದಕ್ಕಿಂತ ಶರಣರಾಗುವುದೇ ಶ್ರೇಷ್ಠ ಎಂಬುದು ವಚನಕಾರರ ಅಭಿಮತ. ಶರಣರ ಆಚಾರ ವಿಚಾರ ನಡೆ, ನುಡಿಗಳನ್ನೇ ಶರಣ ಸಂಸ್ಕೃತಿ ಎನ್ನುತ್ತಾರೆ. ಕಾಯಕ, ದಾಸೋಹ, ಗುರು, ಲಿಂಗ, ಜಂಗಮ ಎಂಬ ತತ್ವಗಳನ್ನು ಜಗತ್ತಿಗೆ ಸಾರಿದವರು ಶರಣರು ಎಂದು ಹೇಳಿದರು.

ನಡೆ-ನುಡಿಗಳಲ್ಲಿ ಅಂತರವಿರದ ಇವರ ಜೀವನದ ಆದರ್ಶಗಳೇ ಶರಣ ಸಂಸ್ಕೃತಿ. ಶರಣರು ರಚಿಸಿದ ವಚನ ಸಾಹಿತ್ಯವನ್ನೇ ಶರಣ ಸಂಸ್ಕೃತಿ ಎಂದು ಕರೆಯಬಹುದು. ಶರಣ ಸಾಹಿತ್ಯದಲ್ಲಿ ಶರಣ ಸಂಸ್ಕೃತಿಯನ್ನು ಕಾಣಬಹುದಾಗಿದೆ ಎಂದರು.

ಕಾಯಕ ಶರಣ ಸಂಸ್ಕೃತಿಯ ಪ್ರಧಾನ ಲಕ್ಷಣವಾಗಿದೆ. ಕಾಯಕ ನಿಷ್ಠೆಯ ಬಗ್ಗೆ ಯಾವ ಮತ ಧರ್ಮವೂ ಇಷ್ಟೊಂದು ಪ್ರಾಮುಖ್ಯತೆಯನ್ನು ಕೊಟ್ಟಿರಲಿಲ್ಲ ಎಂದು ಹೇಳಿದರು.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ್ರು ಅಧ್ಯಕ್ಷತೆ ವಹಿಸಿ ಮಾತನಾಡಿ, ಶರಣ ಸಂಸ್ಕೃತಿಯನ್ನು ಶಾಲಾ-ಕಾಲೇಜು ವಿದ್ಯಾರ್ಥಿ ಗಳಲ್ಲಿ ಬಿತ್ತುವ ಕೆಲಸ ಮಾಡುವುದು ಅಗತ್ಯ ಎಂದರು.

ಬಹುತೇಕ ಯುವಜನರು ಮೊಬೈಲ್ ದಾಸರಾಗಿ, ಸಂಸ್ಕೃತಿ, ಸಂಸ್ಕಾರವನ್ನು ಮರೆಯುತ್ತಿದ್ದಾರೆ. ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡಬೇಕಾದ ಹೊಣೆಗಾರಿಕೆ ತಂದೆ-ತಾಯಿಗಳ ಮೇಲಿದೆ ಎಂದು ಹೇಳಿದರು.

ನಿವೃತ್ತ ಮುಖ್ಯೋಪಾಧ್ಯಾಯ ದಿ. ಕೆ. ಕೆಂಚನಗೌಡ ಅವರ ಸ್ಮರಣೆಯನ್ನು ನಿವೃತ್ತ ಶಿಕ್ಷಖ ಕ್ಯಾರಕಟ್ಟೆ ನಾಗಪ್ಪ ಅವರು ಮಾಡಿದರು. ನಿವೃತ್ತ ಪ್ರಾಧ್ಯಾಪಕ ಡಾ. ಬಸವರಾಜ ಬಣಕಾರ್ ಕೆಂಚನ ಗೌಡರ ಕುರಿತು ಅನುಭವ ಹಂಚಿಕೊಂಡರು.

ರತ್ನಮ್ಮ ಕೆಂಚನಗೌಡ್ರು, ಡಾ. ಸಂಗೀತ ಮಲ್ಲಿಕಾರ್ಜುನಗೌಡ, ಡಾ ಕೆ. ಮಲ್ಲಿಕಾರ್ಜುನ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಬಕ್ಕೇಶ್ವರ ರುದ್ರಾಣಿ, ಜಯಶ್ರೀ ಮತ್ತು ಸಂಗಡಿಗರು ವಚನ ಗಾಯನ ನಡೆಸಿಕೊಟ್ಟರು.

# ಎಸ್ಸಿ-ಎಸ್ಟಿ ದೌರ್ಜನ್ಯ ತಡೆಗೆ ತ್ವರಿತ ಕ್ರಮ ಕೈಗೊಳ್ಳಿ

## 2024ರಲ್ಲಿ 60 ಪ್ರಕರಣ ದಾಖಲು, 124 ಸಂತ್ರಸ್ತರಿಗೆ ಒಟ್ಟು 1.19 ಕೋಟಿ ರೂ.ಗಳ ಪರಿಹಾರ



ದಾವಣಗೆರೆ, ಡಿ. 26 - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳ ತಡೆಗೆ ತ್ವರಿತ ಕ್ರಮದ ಜೊತೆಗೆ ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಸಕಾಲದಲ್ಲಿ ತಲುಪಿಸಬೇಕೆಂದು ಜಿಲ್ಲಾಧಿಕಾರಿ ಜಿ. ಎನ್. ಗಂಗಾಧರಸ್ವಾಮಿ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ 4ನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2024ರ ಜನವರಿಯಿಂದ ಈ ವರೆಗೆ 60 ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 3 ಕೊಲೆ, 8 ಅತ್ಯಾಚಾರ, 49 ಇತರೆ ದೌರ್ಜನ್ಯ ಪ್ರಕರಣಗಳು ಸೇರಿವೆ. ಇದರಲ್ಲಿ 28ಕ್ಕೆ ಚಾರ್ಜ್‌ಶೀಟ್ ಸಲ್ಲಿಕೆಯಾಗಿದ್ದು, ಎಫ್‌ಐಆರ್ ಹಂತದಲ್ಲಿ 39.70 ಲಕ್ಷ ರೂ, ಚಾರ್ಜ್‌ಶೀಟ್ ಹಂತದಲ್ಲಿ 79.88 ಲಕ್ಷ ರೂ.ಗಳು ಸೇರಿದಂತೆ ಒಟ್ಟು 1.19 ಕೋಟಿ ರೂ.ಗಳ ಪರಿಹಾರ ನೀಡಲಾಗಿದೆ.

ಪರಿಶಿಷ್ಟ ಜಾತಿಯ 68 ಹಾಗೂ ಪರಿಶಿಷ್ಟ ಪಂಗಡದ 56 ಸಂತ್ರಸ್ತರು ಸೇರಿದಂತೆ 124 ಜನರಿಗೆ ಪರಿಹಾರ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಊರು ಮತ್ತು ಹಾಸ್ಟೆಲ್‌ನಿಂದ ಶಾಲಾ-ಕಾಲೇಜುಗಳಿಗೆ ಬರಲು ವಿದ್ಯಾರ್ಥಿಗಳಿಗೆ ಸಾರಿಗೆ ಬಸ್‌ಗಳ ಸಮಸ್ಯೆ ಆಗುತ್ತಿದೆ ಎಂದು ಸಮಿತಿ ಸದಸ್ಯರು ಪ್ರಸ್ತಾಪಿಸಿದಾಗ, ಮುಂದಿನ 2-3 ತಿಂಗಳಲ್ಲಿ ನಿಗಮಕ್ಕೆ ಹೊಸ ಬಸ್‌ಗಳು ಬರುವ ನಿರೀಕ್ಷೆಯಿದ್ದು, ಆಗ ವಿದ್ಯಾರ್ಥಿಗಳ ಸಮಸ್ಯೆ ಪರಿಹಾರ ಆಗಲಿದೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗಾಗಿಯೇ ಸರ್ಕಾರ ಜಾರಿಗೊಳಿಸಿರುವ ಹಲವಾರು ಯೋಜನೆಯ ಸವಲತ್ತುಗಳ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸಿ, ಯೋಜನೆಯ ಸೌಲಭ್ಯವನ್ನು ಅರ್ಹರಿಗೆ ತಲುಪಿಸುವ ಕಾರ್ಯವನ್ನು ಸಮಿತಿಯ ಸದಸ್ಯರು ಪ್ರಾಮಾಣಿಕವಾಗಿ ಮಾಡಲು ಮುಂದಾಗಬೇಕು. ದೌರ್ಜನ್ಯಕ್ಕೆ ತುತ್ತಾದವರನ್ನು ಗುರುತಿಸಿ, ಅವರಿಗೆ ಪರಿಹಾರ ಹಾಗೂ ಸೌಲಭ್ಯ ತಲುಪಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯ್‌ಕುಮಾರ್ ಎಂ. ಸಂತೋಷ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್, ನಾಮ ನಿರ್ದೇಶಿತ ಸದಸ್ಯರಾದ ಅಣಜಿ ಅಂಜಿನಪ್ಪ, ಕುಂದುವಾಡ ಮಂಜುನಾಥ ಇನ್ನಿತರರು ಇದ್ದರು.

# ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚಿರಂತನದ ನೃತ್ಯ ಪ್ರಸ್ತುತಿಗಳ ಪ್ರದರ್ಶನ



ಮಂಡ್ಯ, ಡಿ. 26 - ಜಿಲ್ಲೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಾವಣಗೆರೆಯ ಚಿರಂತನ ಸಂಸ್ಥೆಯ ವಿದ್ಯಾರ್ಥಿಗಳು ವಿಶೇಷ ನೃತ್ಯ ಪ್ರಸ್ತುತಿಗಳನ್ನು ಪ್ರದರ್ಶಿಸಿದರು.

ಮೊದಲಿಗೆ 'ಭಾರಿಸು ಕನ್ನಡ ಡಿಂಡಿಮವ' ಗೀತೆಗೆ ಭರತನಾಟ್ಯ ಹಾಗೂ ಫ್ಯೂಷನ್‌ನಲ್ಲಿ ನೃತ್ಯ ಪ್ರಸ್ತುತಿ ಆರಂಭಿಸಿ ನಂತರ ಡಿ.ವಿ.ಜಿ. ಅವರ ಅಂತಃಪುರ ಗೀತೆಗಳ 'ನಟನವಾಡಿದಳ್' ನೃತ್ಯಕ್ಕೆ ರಾಣಿ ಶಾಂತಲೆ ಬೇಲೂರಿನ ಶಿಲಾಬಾಲಿಕೆಯರನ್ನು ತನ್ನ ಕನಸಿನಲ್ಲಿ ಕಾಣುವ ಪ್ರಸಂಗವನ್ನು ವಿಶೇಷವಾಗಿ ಅಭಿನಯಿಸಿ ಪ್ರಸ್ತುತಪಡಿಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

'ಶಿವ ಸ್ತುತಿ' ಯಲ್ಲಿ ಶಿವನ ವರ್ಣನೆ ಜೊತೆ ಭರತನಾಟ್ಯ ಜತಿಗಳ ಪ್ರಯೋಗ ಮಾಡಿ, ಕಡೆಯಲ್ಲಿ ಸೋಲಿಗರ ಜಾನಪದ ನೃತ್ಯ 'ಗೋರುಖಾನ' ನೃತ್ಯದ ಮುಖಾಂತರ ಕಾರ್ಯಕ್ರಮ ಸಂಪನ್ನಗೊಂಡಿತು.

ಸಮ್ಮೇಳನದ ಪರವಾಗಿ ಚಿರಂತನದ ಅಧ್ಯಕ್ಷೆ ಶ್ರೀಮತಿ ದೀಪಾ ರಾವ್ ಹಾಗೂ ಭರತ ನಾಟ್ಯ ಗುರುಗಳಾದ ವಿದುಷಿ ರಕ್ಷಾ ರಾಜಶೇಖರ್ ಅವರೊಂದಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆಗಳನ್ನು ಅಭಿನಂದನಾ ಪೂರ್ವಕವಾಗಿ ನೀಡಲಾಯಿತು.

# ಆಳ ಸಮುದ್ರ ಯೋಜನೆ: ಭಾರತದ ಸರಿದಾರಿ

## ಭಾರತದಿಂದ 4 ಸಾವಿರ ಕೋಟಿ ರೂ.ಗಳ ಮಹತ್ವಾಕಾಂಕ್ಷಿ ಯೋಜನೆ: ಮೇಲೋತ್

ನವದೆಹಲಿ, ಡಿ. 26- ಆಳ ಸಮುದ್ರ ಯೋಜನೆಯಲ್ಲಿ ಭಾರತ ಸರಿಯಾದ ದಾರಿಯಲ್ಲಿ ನಡೆದಿದೆ. ಈ ತಿಂಗಳು ಹಿಂದೂ ಮಹಾಸಾಗರದಲ್ಲಿ 4,500 ಮೀ. ಕೆಳಗೆ ಸಕ್ರಿಯವಾದ ಜಲಶಾಖ ದ್ವಾರ ಕಂಡು ಬಂದಿರುವುದು ವಿಜ್ಞಾನಿಗಳ ವಿಶ್ವಾಸ ಹೆಚ್ಚಿಸಿದೆ ಹಾಗೂ ಮುಂದಿನ ಶೋಧನೆಗೆ ಅಮೂಲ್ಯವಾದ ಅನುಭವ ಒದಗಿಸಿದೆ ಎಂದು ದೇಶದ ಉನ್ನತ ವಿಜ್ಞಾನಿಗಳು ಹೇಳಿದ್ದಾರೆ.

ವಾರದ ಹಿಂದೆ ಎನ್‌ಐಓಟಿ ಹಾಗೂ ಎನ್‌ಸಿಪಿಓಆರ್ ಸಂಸ್ಥೆಗಳ ವಿಜ್ಞಾನಿಗಳನ್ನು ಒಳಗೊಂಡು ತಂಡ ಹಿಂದೂ ಮಹಾಸಾಗರದಲ್ಲಿ 4,500 ಮೀ. ತಳಭಾಗದಲ್ಲಿ ಸಕ್ರಿಯವಾಗಿರುವ ಜಲಶಾಖ ದ್ವಾರವನ್ನು ಕಂಡು ಹಿಡಿದಿತ್ತು. ಈ ಸಂಶೋಧನೆ ಕೇವಲ ಆರಂಭ ಮಾತ್ರವಾಗಿದೆ ಎಂದು ಎನ್‌ಸಿಪಿಓಆರ್ ನಿರ್ದೇಶಕ ತಂಬನ್ ಮೇಲೊತ್ ಹೇಳಿದ್ದಾರೆ.

ಆಳ ಸಮುದ್ರದ ಶೋಧನೆಗಾಗಿ ಭಾರತ 4 ಸಾವಿರ ಕೋಟಿ ರೂಗಳ ಮಹತ್ವಾಕಾಂಕ್ಷಿ ಯೋಜನೆ ಹೊಂದಿದೆ. ಸಮುದ್ರ ತಳದಲ್ಲಿ ಹೊಸ ಖನಿಜಗಳು ಹಾಗೂ ಜೀವ ಸ್ವರೂಪಗಳನ್ನು ಶೋಧಿಸಲು ಮತ್ತು ಪರಿಸರ ಬದಲಾವಣೆಯಲ್ಲಿ ಸಮುದ್ರ ಹೊಂದಿರುವ ಪಾತ್ರದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಯೋಜನೆ ರೂಪಿಸಲಾಗಿದೆ.

ಸಮುದ್ರ ತಳದಲ್ಲಿ ಜಲಶಾಖ ದ್ವಾರಗಳು ಇರುವ ಬಗ್ಗೆ ಈಗಾಗಲೇ ಮಾಹಿತಿಗಳು ದೊರೆತಿವೆ. ಆದರೆ ಈಗ ನಾವು ಕಣ್ಣಾರೆ ನೋಡಲು ಸಾಧ್ಯವಾಗಿದೆ ಎಂದು ಮೆಲೋತ್ ಹೇಳಿದ್ದಾರೆ.

ಸಮುದ್ರದ ನೀಲಿ ಆರ್ಥಿಕತೆಯಲ್ಲಿ ಹೂಡಿಕೆ ಮಾಡುವುದಕ್ಕೆ ಇದು ಸಮರ್ಥನೆ ನೀಡಿದೆ. ಇದರಿಂದ ವಿಜ್ಞಾನಿಗಳಿಗೆ ಶೋಧನೆ ಮಾಡುವ ಇನ್ನಷ್ಟು ಉತ್ಸಾಹ ದೊರೆತಿದೆ. ಮುಂದಿನ ಶೋಧಗಳಲ್ಲಿ ಈಗ ಪಡೆದಿರುವ ಪರಿಣಿತಿ ಮಹತ್ವದ ಪಾತ್ರ ವಹಿಸಲಿದೆ ಎಂದವರು ತಿಳಿಸಿದ್ದಾರೆ.

ಮುಂದಿನ ಸಂಶೋಧನೆಗಳಿಗೆ ಇನ್ನಷ್ಟು ನೆರವಿನ ಅಗತ್ಯವಿದೆ. ನಾವು ಹೊಸ ಹಡಗನ್ನು ರೂಪಿಸುತ್ತಿದ್ದೇವೆ, ಇದು ಮೂರು ವರ್ಷಗಳಲ್ಲಿ ಸಿದ್ಧವಾಗಲಿದೆ ಎಂದವರು ಹೇಳಿದ್ದಾರೆ.

ಸಮುದ್ರದ ತಳದಲ್ಲಿ ಜಲಶಾಖ ದ್ವಾರಗಳಿರುತ್ತವೆ. ಭೂ ಫಲಕಗಳು ದೂರ ಸರಿದಾಗ ಇವುಗಳು ಸೃಷ್ಟಿಯಾಗಿರುತ್ತವೆ. ಇಂತಹ ಪ್ರವೇಶಗಳಲ್ಲಿ ಸಮುದ್ರದ ನೀರು ದ್ವಾರಗಳ ಒಳಗೆ ತೆರಳಿ ಬಿಸಿಯಾಗಿ ಹೊರಬರುತ್ತದೆ.

ಇವುಗಳಲ್ಲಿ ನಿಕಲ್, ಕೋಬಾಲ್ಟ್ ಹಾಗೂ ಮ್ಯಾಂಗನೀಸ್ ರೀತಿಯ ಖನಿಜಗಳು ಇರುತ್ತವೆ. ಇವು ಆಧುನಿಕ ತಂತ್ರಜ್ಞಾನಕ್ಕೆ ಅಗತ್ಯವಾಗಿವೆ. ಅಲ್ಲದೇ, ಈ ಖನಿಜಗಳು ಸಮುದ್ರ ತಳದಲ್ಲಿರುವ ಜೀವರಾಶಿಗೂ ಉಪಯುಕ್ತವಾಗಿವೆ ಎಂದು ಮೆಲೋತ್ ಹೇಳಿದ್ದಾರೆ.

# ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ಸಚಿವ ಎಸ್ಸೆಸ್ಸೆಂ, ಸಂಸದೆ ಪ್ರಭಾ



ದಾವಣಗೆರೆ, ಡಿ. 26 - ರಾಷ್ಟ್ರಪಿತ ಮಹಾತ್ಮಗಾಂಧಿಯವರ ಅಧ್ಯಕ್ಷತೆಯಲ್ಲಿ 1924 ಡಿ. 26, 27 ರಂದು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಶತಮಾನಗಳ ಸಂಭ್ರಮ. ಶತಮಾನ ಗಳ ಸಂಭ್ರಮದಲ್ಲಿನ ಅಧಿವೇಶನಕ್ಕೆ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಶಾಸಕರು, ವಿವಿಧ ವಿಭಾಗದ ಮುಖಂಡರುಗಳು ಭಾಗವಹಿಸಿದ್ದರು.

# ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದ ಸವಿತಾ ಹುಲ್ಲುಮನೆ ಗಣೇಶ್



ದಾವಣಗೆರೆ, ಡಿ. 26 - ಮಹಾನಗರ ಪಾಲಿಕೆ ವತಿಯಿಂದ ಕೈಗೊಂಡಿರುವ ವಿವಿಧ ಪಾದಚಾರಿ ಮಾರ್ಗಗಳನ್ನು ಮತ್ತು ರಸ್ತೆ ನಿರ್ಮಾಣ ಅಭಿವೃದ್ಧಿ ಕಾಮಗಾರಿಗಳನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ ಹುಲ್ಲುಮನೆ ಗಣೇಶ್ ಅವರು ಇಂದು ಪರಿಶೀಲನೆ ನೆಡೆಸಿದರು.

ವಿವಿಧ ಮುಖ್ಯ ರಸ್ತೆಗಳಲ್ಲಿ ಪಾದಚಾರಿ ನಿರ್ಮಾಣ ಕಾಮಗಾರಿಗಳಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗಿದೆ, ಸಂಚಾರ ದಟ್ಟಣೆ ಸಹ ಹೆಚ್ಚಾಗಿದೆ. ಇದರಿಂದ ಅಪಘಾತಗಳು ಆಗಬಹುದು. ಹಾಗಾಗಿ ಆದಷ್ಟು ಬೇಗನೆ ಕಾಮಗಾರಿಗಳನ್ನು ಪೂರೈಸಲು ಕ್ರಮವಹಿಸಲು ಅಧಿಕಾರಿಗಳಿಗೆ ಸವಿತಾ ಸೂಚಿಸಿದರು.

ಆವರಗೆರೆ ಪಿ. ಬಸವನಗೌಡ ಬಡಾವಣೆಯ ಸಾರ್ವಜನಿಕರು ಶೌಚಾಲಯ ನಿರ್ಮಾಣಕ್ಕೆ ಸಲ್ಲಿಸಿದ ಮನವಿ ಮೇರೆಗೆ ಸಮುದಾಯ ಶೌಚಾಲಯ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಹಾಜರಿದ್ದ, ಸಿವಿಲ್ ಕಾಮಗಾರಿಗಳನ್ನು ಸಾರ್ವಜನಿಕರಿಗೆ ತೊಂದರೆ ಯಾಗದಂತೆ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

# ನಗರದಲ್ಲಿ ನಾಳೆ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆ

ದಾವಣಗೆರೆ, ಡಿ. 26 - ಕರ್ನಾಟಕ ರಾಜ್ಯ ಅಮೆಚೂರು ಕಬ್ಬಡಿ ಸಂಸ್ಥೆ ವತಿಯಿಂದ ಬರುವ ಜನವರಿ 6ರಿಂದ ಮೂರು ದಿನ ದೊಡ್ಡಬಳ್ಳಾಪುರದಲ್ಲಿ ನಡೆಯುವ ಕರ್ನಾಟಕ ರಾಜ್ಯ ಪುರುಷರ ಕಬಡ್ಡಿ ಚಾಂಪಿಯನ್‌ಶಿಪ್ ಪಂದ್ಯಾಟಕ್ಕೆ ಜಿಲ್ಲಾ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆಯು ನಾಡಿದ್ದು ದಿನಾಂಕ 28ರ ಶನಿವಾರ ಸಂಜೆ 3.30ಕ್ಕೆ ನಗರದ ಸ್ಟೇಡಿಯಂನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ 6363118501, 9972049306.

# ನಗರದಲ್ಲಿ ಇಂದಿನಿಂದ ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಓಶೋ ಧ್ಯಾನ ಶಿಬಿರವನ್ನು ಇಂದಿನಿಂದ ಇದೇ ದಿನಾಂಕ 29ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30ರವರೆಗೆ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

# ರಾಜ್ಯದಲ್ಲಿರುವುದು ಹೆಬ್ಬೆಟ್ಟು ಗೃಹ ಸಚಿವ

## ತಮ್ಮ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎನ್ನುವುದೇ ಸಚಿವರಿಗೆ ಗೊತ್ತಿಲ್ಲ: ಹೆಚ್ಡಿಕೆ

**ಈಗ ಇರುವುದು ಅಸಲಿ ಕಾಂಗ್ರೆಸ್ ಅಲ್ಲ, ನಕಲಿ ಕಾಂಗ್ರೆಸ್. ಗಾಂಧೀಜಿ ರಾಮರಾಜ್ಯದ ಪರಿಕಲ್ಪನೆ ಇವತ್ತು ರಾಜ್ಯದಲ್ಲಿ ಸಾಕಾರ ಆಗಿದೆಯಾ, ಗ್ರಾಮ ಸ್ವರಾಜ್ಯದ ಕನಸು ಈಡೇರಿದೆಯಾ?**

**- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನೆ**

ಬೆಂಗಳೂರು, ಡಿ. 26-ರಾಜ್ಯದಲ್ಲಿ ಹೆಬ್ಬೆಟ್ಟು ಗೃಹ ಸಚಿವರು ಇದ್ದಾರೆ, ತಮ್ಮ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎನ್ನುವುದು ಸ್ವತಃ ಅವರಿಗೇ ಗೊತ್ತಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನಪ್ರತಿನಿಧಿಗಳ ಮೇಲೆ ನಡೆಯುತ್ತಿರುವ ಹಲ್ಲೆ ಘಟನೆ ಪ್ರಕರಣಗಳ ನಿರ್ವಹಣೆ ಬಗ್ಗೆ ಕಿಡಿಕಾರಿದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಭೇಟಿ ಮಾಡಲು ಪೊಲೀಸ್ ಸ್ಟೇಷನ್‌ಗೆ ಬಂದ ಬಿಜೆಪಿ ನಾಯಕರಿಗೆ ಕೂತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಪೊಲೀಸ್ ಅಧಿಕಾರಿಯನ್ನು ರಾಜ್ಯ ಸರ್ಕಾರ ಸಸ್ಪೆಂಡ್ ಮಾಡಿದೆ, ಆದರೆ, ಅವರ ತಲೆ ಒಡೆದು ರಕ್ತ ಬರುವಂತೆ ಮಾಡಿದವರ ವಿರುದ್ಧ ಕ್ರಮ ಏನು ಎಂದು ಪ್ರಶ್ನಿಸಿದರು.

ಕಳೆದ ಎರಡು ದಿನಗಳಿಂದ ಬರುತ್ತಿರುವ ಚಿನ್ನ ದೋಖಾ ಪ್ರಕರಣಗಳ ಬಗ್ಗೆ ಗೃಹ ಇಲಾಖೆ ಏನು ಕ್ರಮ ಕೈಗೊಂಡಿದೆ, ಇವರು ಬರೀ ಗಾಂಧೀಜಿ ಹೆಸರು ಹೇಳಿದರೆ ಆಗಲ್ಲ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು ಎಂದು ಹೇಳಿದರು.

ಜನರ ಕೋಟ್ಯಂತರ ರೂ. ಖರ್ಚು ಮಾಡಿ ಬೆಳಗಾವಿಯಲ್ಲಿ ಏನು ಸಂದೇಶ ಕೊಡುತ್ತಿದ್ದಾರೆ ಇವರು, ಇದು ನಾಗರಿಕ ಸರ್ಕಾರವೇ, ಇಂತಹ ವಾತಾವರಣ ಹಿಂದೆಂದೂ ರಾಜ್ಯದಲ್ಲಿ ಇರಲಿಲ್ಲ, ಮುಂದಿನ ದಿನಗಳಲ್ಲಿ ರಾಜ್ಯ ಎಲ್ಲಿಗೆ ಹೋಗಿ ನಿಲ್ಲಲಿದೆ ಎಂದರು. ಜನರ ತೆರಿಗೆ ದುಡ್ಡಿನಲ್ಲಿ ನಕಲಿ ಗಾಂಧಿಗಳ ವಿಜೃಂಭಣೆ ನಡೆಯುತ್ತಿದೆ, ಬೆಳಗಾವಿಯಲ್ಲಿ ಕಾಂಗ್ರೆಸ್‌ನಿಂದ ಗಾಂಧಿ ಶತಮಾನೋತ್ಸವ ನಡೆಯುತ್ತಿದೆ, ಮುಂದಿನ



ವರ್ಷ ಗಾಂಧಿ ಹೆಸರಲ್ಲಿ ಕಾರ್ಯಕ್ರಮ ಮಾಡಲು ಸರ್ಕಾರ ಹೊರಟಿದೆ, ಕೋಟ್ಯಂತರ ರೂ. ವೆಚ್ಚ ಮಾಡಿ ಗಾಂಧೀಜಿ ಶತಮಾನೋತ್ಸವ ಕಾರ್ಯಕ್ರಮ ಮಾಡುತ್ತಿದೆ. ಆದರೆ, ಅಲ್ಲಿ ನಡೆಯುತ್ತಿರುವ ಕಾರ್ಯಕ್ರಮದ ಕಟೌಟ್‌ಗಳಲ್ಲಿ ಮಹಾತ್ಮಗಾಂಧೀಜಿ ಫೋಟೊ ನೋಡಲಿಲ್ಲ, ನಕಲಿ ಗಾಂಧಿಗಳ ಫೋಟೋಗಳೇ ಇರುವ ಕಟೌಟ್‌ಗಳನ್ನು ಆಕಾಶದೆತ್ತರಕ್ಕೆ ಹಾಕಿದ್ದಾರೆ ಎಂದು ಮಾತಿನ ಪ್ರಹಾರ ನಡೆಸಿದರು.

ಈಗ ಇರುವುದು ಅಸಲಿ ಕಾಂಗ್ರೆಸ್ ಅಲ್ಲ, ನಕಲಿ ಕಾಂಗ್ರೆಸ್, ಬೆಳಗಾವಿಯಲ್ಲಿ ಕಾರ್ಯಕ್ರಮ ಮಾಡುತ್ತಿರುವುದು ನಕಲಿ ಕಾಂಗ್ರೆಸ್, ಸ್ವಾತಂತ್ರ್ಯ ಗಳಿಸಿದ ಮೇಲೆ ಕಾಂಗ್ರೆಸ್ ವಿಸರ್ಜನೆ ಮಾಡಿ ಎಂಬುದಾಗಿ ಸ್ವತಃ ಮಹಾತ್ಮಗಾಂಧೀಜಿ ಹೇಳಿದ್ದರು, ಅವರ ಕಾಂಗ್ರೆಸ್ ಈಗಿಲ್ಲ, ಈಗ ಇರುವುದು ಆಲಿಬಾಬ ಮತ್ತು 40 ಮಂದಿ ಕಳ್ಳರ ಕಾಂಗ್ರೆಸ್ ಎಂದು ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಗಾಂಧೀಜಿ ಹೆಸರಲ್ಲಿ ಕಾರ್ಯಕ್ರಮ ಮಾಡಲು ನನ್ನ ತಕರಾರಿಲ್ಲ, ಸಂಘಟಿತ ಹೋರಾಟದ ಮೂಲಕ ಹೋರಾಟ ನಡೆಸಿ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿ ರಾಮರಾಜ್ಯದ ಪರಿಕಲ್ಪನೆ ಇವತ್ತು ರಾಜ್ಯದಲ್ಲಿ ಸಾಕಾರ ಆಗಿದೆಯಾ, ಗ್ರಾಮ ಸ್ವರಾಜ್ಯದ ಕನಸು ಈಡೇರಿದೆಯಾ.

15ನೇ ಹಣಕಾಸು ಆಯೋಗದ ಅನುದಾನದ ಮೂಲಕ ಗ್ರಾಮಗಳ ಅಭಿವೃದ್ಧಿಗೆ ಪಂಚಾಯತ್‌ಗಳಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ 448.29 ಕೋಟಿ ರೂ. ಬಳಕೆ ಮಾಡಿಲ್ಲ, ಈ ಹಣ ಬಿಡುಗಡೆಯಾಗಿ ಹಲವು ತಿಂಗಳೇ ಕಳೆದಿದ್ದರೂ ಇನ್ನೂ ಪಂಚಾಯತ್‌ಗಳಿಗೆ ಹಣ ತಲುಪಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ದಯನೀಯವಾಗಿದೆ, ಗುಣಮಟ್ಟದ ಚಿಕಿತ್ಸೆ ದೊರೆಯದೆ ಬಾಣಂತಿಯರು, ಮಕ್ಕಳ ಸರಣಿ ಸಾವುಗಳು ಸಂಭವಿಸುತ್ತಿವೆ, ಆಸ್ಪತ್ರೆಗಳಲ್ಲಿ ವೈದ್ಯರು, ನರ್ಸ್‌ಗಳಿಲ್ಲ, 2,756 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇವೆಯೆಂದರೆ, ಆಡಳಿತ ಹೇಗೆ ಉತ್ತಮವಾಗಿರಲು ಸಾಧ್ಯ ಎಂದು ಪ್ರಶ್ನಿಸಿದರು.

ಸರ್ಕಾರ ಪ್ರತಿದಿನ ಗ್ಯಾರಂಟಿ ಗ್ಯಾರಂಟಿ ಎನ್ನುತ್ತಿದೆ, ಜನರಿಗೆ ಇನ್ನೂ ಎರಡು ಸಾವಿರ ರೂ. ಕೊಡಲಿ, ನಮ್ಮ ಅಭ್ಯಂತವಿಲ್ಲ, ಆದರೆ, ಮಿತಿ ಮೀರಿದ ತೆರಿಗೆ ಹೇರಿಕೆ ಮಾಡುತ್ತಿದ್ದಾರೆ, ಎರಡು ಲಕ್ಷ ಕೋಟಿ ರೂ. ಸಾಲ ಮಾಡಿ ಎರಡು ಸಾವಿರ ರೂ. ಕೊಡಲು ಇವರೇ ಬೇಕಾ, ಸಾಲ ತೀರಿಸುವವರು ಯಾರು, ಜನ ಸಾಮಾನ್ಯರೇ ಆ ಸಾಲ ತೀರಿಸಬೇಕಲ್ಲವೇ ಎಂದರು.

# ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂತೆ ಎಐಡಿಎಸ್‌ಓ ಆಗ್ರಹ

ದಾವಣಗೆರೆ, ಡಿ.26- ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯಲ್ಲಿ 10ನೇ ತರಗತಿ ಓದುತ್ತಿದ್ದ ದಲಿತ ಬಾಲಕನ ಮೇಲೆ ಮೂತ್ರ ವಿಸರ್ಜನೆ ಮಾಡಿದ ಹೇಯ ಘಟನೆಯನ್ನು ಎಐಡಿಎಸ್‌ಓ ಅತ್ಯುಗ್ರವಾಗಿ ಖಂಡಿಸುತ್ತದೆ.

ಈ ಕುರಿತು ದೂರು ನೀಡಿದ್ದರೂ ಯಾವ ಕಾನೂನು ಕ್ರಮ ಕೈಗೊಂಡಿಲ್ಲ ಎಂದು ತಿಳಿದು ಬಂದಿದೆ. ಇದರಿಂದ ಮನನೊಂದ ಬಾಲಕ ಆತ್ಮಹತ್ಯೆಗೆ ಶರಣಾಗಿದ್ದಾನೆ. ಜಾತಿ ಕಾರಣಕ್ಕೆ ಮನುಷ್ಯನೊಬ್ಬನನ್ನು ಅತ್ಯಂತ ಅಮಾನವೀಯವಾಗಿ ನಡೆಸಿಕೊಂಡ ಈ ಘಟನೆ ಸಮಾಜದಲ್ಲಿನ ಕರಾಳತೆಗೆ ಮತ್ತು ಆಡಳಿತ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಈ ಘಟನೆಯಲ್ಲಿನ ತಪ್ಪಿತಸ್ಥರಿಗೆ ಕೂಡಲೇ ಉಗ್ರ ಶಿಕ್ಷೆ ವಿಧಿಸುವಂತೆ ಎಐಡಿಎಸ್‌ಓ ಸರ್ಕಾರಕ್ಕೆ ಒತ್ತಾಯಿಸಿದೆ ಎಂದು ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ಸುಮನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ಬಳಕೆ ನಿಷೇಧ

ದಾವಣಗೆರೆ, ಡಿ.26- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಕಪ್, ಲೋಟ, ಮೇಣಲೇಪಿತ ಪೇಪರ್ ಹಾಗೂ ಕ್ಯಾರಿ ಬ್ಯಾಗ್ ಬಳಸುವುದನ್ನು ನಿಷೇಧಿಸಲಾಗಿದೆ.

ಬೀದಿ ಬದಿ ವ್ಯಾಪಾರಸ್ಥರು, ತಿಂಡಿ-ತಿನಿಸು ಮಾರಾಟಗಾರರು, ಹೋಟೆಲ್ ಉದ್ದಿಮೆದಾರರು ಪ್ಲಾಸ್ಟಿಕ್ ಕಪ್, ಮೇಣಲೇಪಿತ ಪೇಪರ್-ಕಪ್, ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಚಮಚ ಮತ್ತು ಸ್ಟ್ರಾಗಳನ್ನು ಉಪಯೋಗಿಸದಂತೆ ಸೂಚಿಸಿದ್ದು, ನಿಯಮ ಉಲ್ಲಂಘಿಸಿದರೆ ಪ್ಲಾಸ್ಟಿಕ್ ಸಾಮಾನು ವಶ ಪಡಿಸಿಕೊಳ್ಳುವ ಜತೆಗೆ ನಿಯಮಾನುಸಾರ ದಂಡ ವಿಧಿಸಲಾಗುವುದು.


ಎಲ್ಲಾ ಬೀದಿ-ಬದಿ ಮಾರಾಟಗಾರರು, ಹೋಟೆಲ್ ಉದ್ದಿಮೆದಾರರು ತ್ಯಾಜ್ಯ ನಿರ್ವಹಣಾ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಪಾಲಿಕೆ ಆಯುಕ್ತೆ ರೇಣುಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ದಾವಣಗೆರೆ ತಾಲ್ಲೂಕು ಕೃಷಿಕ ಸಮಾಜ ದಾವಣಗೆರೆ ಜಿಲ್ಲೆ

ಹೃದಯಪೂರ್ವಕ ಕೃತಜ್ಞತೆಗಳು

ದಿನಾಂಕ : 26.12.2024ನೇ ಗುರುವಾರದಂದು ನಡೆದ

ದಾವಣಗೆರೆ ತಾಲ್ಲೂಕು ಕೃಷಿಕ ಸಮಾಜ ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆಯಲ್ಲಿ



ಎಂ. ನಾಗರಾಜ್
ಅಧ್ಯಕ್ಷರು
ಬೇತೂರು

ಜಿಲ್ಲಾ ಪ್ರತಿನಿಧಿ, ಅಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿ ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಸರ್ವ ಸದಸ್ಯರುಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು




ಶಿವಪ್ಪ ಎ.
ಜಿಲ್ಲಾ ಪ್ರತಿನಿಧಿ
ಶಾಮನೂರು

: ಕಾರ್ಯಕಾರಿ ಸಮಿತಿಯ ಸದಸ್ಯರುಗಳು :



ಜಿ. ಕರಿಬಸಪ್ಪ
ಉಪಾಧ್ಯಕ್ಷರು
ಗೋಪನಾಳು



ಟಿ. ಬಸವರಾಜಪ್ಪ
ಪ್ರಧಾನ ಕಾರ್ಯದರ್ಶಿ
ಹಳೇಬಾತಿ




ಡಿ.ಕೆ. ಚಂದ್ರಶೇಖರಪ್ಪ
ಖಜಾಂಚಿ
ನಾಗನೂರು



ಎಂ.ಎಸ್. ನಾಗರಾಜ್
ಹೊಸಕುಂದವಾಡ




ಎ.ಎಂ. ಮಂಜುನಾಥ್
ಶಿರಮಗೊಂಡನಹಳ್ಳಿ



ಯು.ಕೆ. ಚಂದ್ರಶೇಖರಪ್ಪ
ಬಿ. ಕಲ್ಪನಹಳ್ಳಿ



ಟಿ.ಎಂ. ಮುನಿಯಪ್ಪ
ಹೊನ್ನೂರು



ಹೆಚ್.ಆರ್. ಲಿಂಗರಾಜ್
ಶಾಮನೂರು



ಕೆ.ಎಂ. ರೇವಣಸಿದ್ದಪ್ಪ
ಬಿ. ಕಲ್ಪನಹಳ್ಳಿ



ಎಸ್.ಜಿ. ರುದ್ರೇಶ್
ಮಾಯಕೊಂಡ



ಯೋಗೇಶ್ವರಪ್ಪ ಎಂ.ವೈ.
ಯರಗುಂಟೆ



ಬಿ.ವಿಶ್ವನಾಥ್
ಬೇತೂರು



ಬಿ.ಕೆ. ವಿಶ್ವನಾಥ್
ಬೆಳವನೂರು


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas